ಮುಂಬಯಿ ಇಲಾಖೆಯೊಳಗಿನ ಸರಕಾರೀ ವಿದ್ಯಾಶಾಲಾಖಾತೆ.

ಭಾಷಾಂತರಪಾಠಮಾಲೆ

ಕನ್ನಡ-ಇಂಗ್ಲಿಷ

ಎರಡನೇ ಪುಸ್ತಕ

ಇದನ್ನು

ಸಂಗಪ್ಪಾ ಮಲ್ಲಪ್ಪಾ ಅಂಕಲೆ,

ವಿಜಾಪುರ ಜಿಲ್ಲೆಯ ಮಾಜೀ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್

ಇವರು ಮಾಡಿದರು.

ಯ. ಸ. ಅಂಕಲೆ, ಬೀ. ಏ.

ಎಂಬವರಿಂದ ತಿದ್ದುಪಡಿ ಹೊಂದಿದ

ಒಂಬತ್ತನೇ ಆವೃತ್ತಿ, ೪,೦೦೦ ಪ್ರತಿಗಳು.

ಸರಕಾರೀ ಶಾಲೆಗಳೊಳಗಿನ ಎರಡನೇ ಅಂಗ್ಲೊವರ್ನ್ಯಾಕ್ಯುಲರ ಇಯತ್ತೆಯಲ್ಲಿ
ಭಾಷಾಂತರ ಕಲಿಸುವದಕ್ಕಾಗಿ ಮೆಹರಬಾನ್ ಡಿರೆಕ್ಟರ್ ದೊರೆಗಳವರು ಮಂಜೂರ ಮಾಡಿದ್ದಾರೆ.

ಮಂಗಳೂರು

ಬಾಸೆಲ್ ಮಿಶ್ಯನ್ ಬುಕ್ ಆಂಡ್ ಟ್ರ್ಯಾಕ್ಟ್ ಡಿಪೊಜಿಟರಿ.

೧೯೧೬.

ಈ ಪುಸ್ತಕದ ಪ್ರತಿಗಳು ಉತ್ತರ ಮತ್ತು ದಕ್ಷಿಣ ಕಾನಡಾ ಜಿಲ್ಲೆಗಳೊಳಗಿನ ಹಾಗು ದಕ್ಷಿಣ
ಮಹಾರಾಷ್ಟ್ರದೊಳಗಿನ ನಮ್ಮ ಈ ಸಂಗ್ರಹಾಲಯದ ಎಲ್ಲಾ ಸಬ್‌ಡಿಪೋಗಳಲ್ಲಿ ಸಹ ದೊರೆಯುವವು.

ಕ್ರಯ: ೯ ಆಣೆ.

ಮಂಗಳೂರು

ಬಾಸೆಲ್ ಮಿಶ್ಶನ್ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿತು.

ಪೀಠಿಕೆ

PREFACE

ಭಾಷಾಂತರಪಾಠಮಾಲೆಯ ಮೊದಲನೇ ಪುಸ್ತಕದಂತೆ ಈ ಎರಡನೇ ಪುಸ್ತಕವು ಮಾಡಲ್ಪಟ್ಟದೆ. ಇದರೊಳಗೆ ಸಹ ಪ್ರತಿ ಒಂದು ಪಾಠದ ಆರಂಭದಲ್ಲಿ ವ್ಯಾಕರಣದೊಂದೆರಡು ನಿಯಮಗಳು, ಬಳಿಕ ಇಂಗ್ಲಿಷ ವಾಕ್ಯದ ಮಾದರಿ, ಆ ಮೇಲೆ ಹಲವು ಶಬ್ದಗಳ ಸಂಗ್ರಹ, ಕಡೆಗೆ ಭಾಷಾಂತರಮಾಡುವದಕ್ಕಾಗಿ ಕೆಲವು ಇಂಗ್ಲಿಷ, ಕೆಲವು ಕನ್ನಡ ವಾಕ್ಯಗಳು ಮುಂತಾದ ಕ್ರಮವೆಲ್ಲ ಅದರಂತೆಯೇ ಇಟ್ಟದೆ. ಈ ಮೇರೆಗೆ ಇದರೊಳಗೆ ೨೬ ಪಾಠಗಳುಂಟು; ಮತ್ತು ಶಬ್ದಸಂಗ್ರಹಗಳೊಳಗೆ ಒಟ್ಟಿಗೆ ಸುಮಾರು ಏಳೆಂಟು ನೂರು ಶಬ್ದಗಳಿರಬಹುದು. ವ್ಯಾಕರಣದ ಸಂಬಂಧದಿಂದ ಈ ಪುಸ್ತಕದೊಳಗೆ ನಿಷೇಧಾರ್ಥಕ ವಾಕ್ಯಗಳು, ಪ್ರಶ್ನಾರ್ಥಕ ವಾಕ್ಯಗಳು, ವಿಶೇಷಣ ಕ್ರಿಯಾವಿಶೇಷಣಗಳ ತಾರತಮ್ಯಭಾವ, strong ಮತ್ತು weak conjugation, ಉಪಸರ್ಗಾವ್ಯಯಗಳು, ಪ್ರಯೋಗಗಳು, ವಿಧ್ಯರ್ಥ, ಪೂರ್ಣವರ್ತಮಾನಕಾಲ, there, self (ಸ್ವತಃ) ಇವುಗಳ ಭಾಷಾಂತರ ಮುಂತಾದ ವಿಷಯಗಳ ಬಗ್ಗೆ ಸ್ವಲ್ಪ ಸ್ವಲ್ಪ ವಿವರಿಸಿ ಇದೆ. ಈ ಪುಸ್ತಕದ ಕೊನೆಗೆ ಪುರವಣಿ ಜೋಡಿಸಿ ಇದೆ. ಅದರಲ್ಲಿ ಮೂರು ಭಾಗಗಳುಂಟು: ಮೊದಲನೇ ಭಾಗದಲ್ಲಿ ಇಂಗ್ಲಿಷ ವ್ಯಾಕರಣದೊಳಗಿನ ಶಬ್ದಖಂಡವು ಸಂಕ್ಷಿಪ್ತರೀತಿಯಿಂದ ವಿವರಿಸಲ್ಪಟ್ಟದೆ. ಈ ಭಾಗವು ಮುಖ್ಯವಾಗಿ ಮೊದಲನೆಯ ಹಾಗು ಎರಡನೆಯ ಪುಸ್ತಕಗಳಲ್ಲಿ ಕಲಿತದ್ದೆಲ್ಲ ವ್ಯಾಕರಣದೃಷ್ಟಿಯಿಂದ ಹುಡುಗರಲಕ್ಷ್ಯದಲ್ಲಿ ಬರಬೇಕೆಂತಲೂ, ಅವರಿಗೆ ಅದರ ಪುನರಾವೃತ್ತಿ ಒಮ್ಮೆಲೇ ಮಾಡಲಿಕ್ಕೆ ಸುಲಭವಾಗಬೇಕೆಂತಲೂ, ನಾಮ ಸರ್ವನಾಮ ಕ್ರಿಯಾಪದಗಳನ್ನು ಕ್ರಮದಿಂದ ನಡಿಸಲಿಕ್ಕೆ ಬರಬೇಕೆಂತಲೂ ಮಾಡಲ್ಪಟ್ಟದೆ; ಇದರೊಳಗೆ ಪುಸ್ತಕದಲ್ಲಿ ಬಾರದೆ ಇದ್ದ ಅಲ್ಪಸ್ವಲ್ಪ ಉಪಯುಕ್ತ ವಿಷಯವನ್ನು ಸಹ ಕಾಣಬಹುದು. ಎರಡನೇ ಭಾಗದಲ್ಲಿ ಎರಡೂ ಪುಸ್ತಕಗಳೊಳಗೆ ಬಂದ

ಕೆಲವು ಭಾಷಾಪದ್ಧತಿಗಳು ಒತ್ತಟ್ಟಿಗೆ ತಂದು ಸ್ಪಷ್ಟಮಾಡಿ ತೋರಿಸಿ ಇವೆ. ಮೂರನೇ ಭಾಗದಲ್ಲಿ ಸುಮಾರು ತೊಂಬತ್ತು ಪ್ರಶ್ನಗಳು ಕೊಟ್ಟವೆ. ಅವುಗಳನ್ನು ಶಿಕ್ಷಕನು ಬೇಕಾದಷ್ಟು ಬೆಳಿಸಬಹುದು.

ಮೊದಲನೇ ಪುಸ್ತಕದಂತೆ ಇದಾದರೂ ಮರಾಠೀ ಭಾಷಾಂತರಪಾಠ ಮಾಲಾ, ಪುಸ್ತಕ ೧, ಭಾಗ ೨ನೇದರ ಭಾಷಾಂತರವಿದ್ದಾಗ್ಯೂ, ಕನ್ನಡ ಭಾಷಾ ಪದ್ಧತಿಗೂ ಬೇರೆ ಕೆಲವು ಸಂಗತಿಗಳಿಗೂ ಅನುಸರಿಸಿ ಎಷ್ಟೋ ಕಡೆಯಲ್ಲಿ ಹೆಚ್ಚು ಕಡಿಮೆ ಮಾಡಿ, ನಮ್ಮ ಕರ್ನಾಟಕಸ್ಥರ ಸಲುವಾಗಿ ಈ ಪುಸ್ತಕವು ಬರೆಯಲ್ಪಟ್ಟದೆ. ಇದರ ಸಂಬಂಧದಿಂದಾದರೂ ಬೆಳಗಾಂವೀ ಹೈಸ್ಕೂಲದ ಹೆಡ್ ಮಾಸ್ತರರಾದ ಮೆಹರಬಾನ್ ಹೂಗವರ್ಥ ದೊರೆಗಳು ಕೆಲವು ಉಪಯುಕ್ತವಾದ ಸೂಚನೆಗಳನ್ನು ಮಾಡಿದ್ದರಿಂದಲೂ, ಕನ್ನಡ ವರ್ನ್ಯಾಕ್ಯುಲರ ಕಮಿಟಿಯವರು ಈ ಪುಸ್ತಕದ ಬಗ್ಗೆ ತಮ್ಮ ಸಮ್ಮತಿಯನ್ನು ಕೊಡುವಾಗ ಹಲವು ಸೂಚನೆಗಳನ್ನು ಮಾಡಿದ್ದರಿಂದಲೂ, ಗ್ರಂಥಕರ್ತನು ಅವರ ಉಪಕಾರ ನೆನೆಸುತ್ತಾನೆ.

ಬೆಳಗಾಂವಿ,
೨೨ನೇ ಫೆಬ್ರುವರಿ ೧೮೮೩.

ಸ. ಮ. ಅಂಕಲೆ.

ಏಳನೇ ಆವೃತ್ತಿಯ ಪ್ರಸ್ತಾವನೆ.

ಈ ಆವೃತ್ತಿಯಲ್ಲಿ ಹಿಂದಿನ ಆವೃತ್ತಿಯೊಳಗಿನ ತಪ್ಪುಗಳನ್ನು ತಿದ್ದಿ, ಅನಾವಶ್ಯಕವಾದ ಟಿಪ್ಪಣಿ ತೆಗೆದುಹಾಕಿ, ಕೆಲವು ಕಡೆಯಲ್ಲಿ ಸಮನಾದ ಅರ್ಥವುಳ್ಳ ಶಬ್ದಗಳಲ್ಲಿರುವ ನಿಜವಾದ ಭೇದವನ್ನು ಕುರಿತು ಟಿಪ್ಪಣಿಗಳನ್ನು ಹೆಚ್ಚಿಗೆ ಕೊಟ್ಟದೆ. ಶಬ್ದಸಂಗ್ರಹಗಳೊಳಗಿನ ಶಬ್ದಗಳಿಗೆ ಒಂದಕ್ಕಿಂತ ಹೆಚ್ಚು ಅರ್ಥಗಳಿದ್ದಲ್ಲಿ ಅವುಗಳ ಹಿಂದೆ ಸಣ್ಣ ಅಂಕಿ ಹಾಕಿ, ಭಿನ್ನವಾದ ಅರ್ಥಗಳನ್ನು ವಿಂಗಡಿಸಿ ತೋರಿಸಿರುತ್ತದೆ. ಮತ್ತು ಅಲ್ಲಲ್ಲಿ ಕೆಲವು ಹೆಚ್ಚುಕಡಿಮೆಗಳನ್ನು ಮಾಡಿ, ಇದರಿಂದ ವಿದ್ಯಾರ್ಥಿಗಳಿಗೆ ಚನ್ನಾಗಿ ಸಹಾಯವಾಗುವಂತೆ ಕೈಲಾದ ಮಟ್ಟಿಗೆ ಪ್ರಯತ್ನಮಾಡಿರುತ್ತದೆ.

ಈ ಪುಸ್ತಕವನ್ನು ಇನ್ನೂ ಹೆಚ್ಚಿಗೆ ಸುದಾರಿಸುವ ವಿಷಯದಲ್ಲಿ ಅನುಭವವುಳ್ಳ ಶಿಕ್ಷಕರಾಗಲಿ ಬೇರೆ ಪಂಡಿತರಾಗಲಿ ತಕ್ಕ ಸೂಚನೆಗಳನ್ನು ಮಾಡಿದರೆ, ಆ ಬಗ್ಗೆ ಅವರ ಉಪಕಾರ ನೆನಸಿ, ಮುಂದಿನ ಆವೃತ್ತಿಯ ಕಾಲಕ್ಕೆ ಅವುಗಳ ವಿಷಯದಲ್ಲಿ ವಿಚಾರ ಮಾಡುವೆವು.

ಬೆಳಗಾಂವಿ,
೧ನೇ ಮಾರ್ಚ ೧೯೧೧.

ಸ. ಮು. ಅಂಕಲಿ.

ಶಿಕ್ಷಕನಿಗೆ ಸೂಚನೆ.

ಈ ಪುಸ್ತಕವನ್ನು ಕಲಿಸುವಾಗ ಶಿಕ್ಷಕನು ಮೊದಲು ನಿಯಮಗಳನ್ನೂ ಉದಾಹರಣಾಗಳನ್ನೂ ಶಬ್ದಗಳನ್ನೂ ಓದಿಸಿಕೊಳ್ಳಬೇಕು. ನಿಯಮಗಳ ಅರ್ಥವು ಹುಡುಗರಿಗೆ ತಿಳಿಯುತ್ತದೋ ಇಲ್ಲವೋ ಎಂಬದನ್ನು ಕೇಳಿ ನೋಡಬೇಕು. ತಿಳಿಯದೆ ಇದ್ದರೆ, ಅದನ್ನು ಚನ್ನಾಗಿ ತಿಳಿಸಿ ಹೇಳಬೇಕು. ಶಬ್ದಗಳನ್ನು ಓದಿಸುವಾಗ ಉಪಪದ, ಉಚ್ಚಾರ, ಸ್ವರಾಘಾತ, ವರ್ಣರಚನೆ ಮುಂತಾದವುಗಳ ಕಡೆಗೆ ಹುಡುಗರ ಲಕ್ಷ್ಯವನ್ನು ಎಳೆಯಬೇಕು. ಇದೇ ಮೇರೆಗೆ ಪ್ರತಿ ಒಂದು ಶಬ್ದವು ವ್ಯಾಕರಣಕ್ಕನುಸರಿಸಿ ಯಾವ ಜಾತಿಯದು ಎಂಬದನ್ನು ಕಲಿಸಬೇಕು. ಮರುದಿವಸ, ಕಲಿಸಿದ ಪಾಠದೊಳಗೆ ಮೊದಲು ಪ್ರಶ್ನ ಮಾಡಬೇಕು. ಅವರು ಪಾಠಾ ಚನ್ನಾಗಿ ಕಲಿತುಕೊಂಡು ಬಂದಿದ್ದಾರೆಂದು ಕಂಡು ಬಂದರೆ, ಭಾಷಾಂತರಪಾಠದ ಭಾಷಾಂತರವನ್ನು ವರ್ಗದೊಳಗೆ ಬಾಯಿಂದ ಮಾಡಿಸಿಕೊಂಡು ಮುಂದಿನ ಪಾಠವನ್ನು ಹೇಳಬೇಕು. ಶಾಲೆಯಲ್ಲಿ ಮಾಡಿಸಿದ ಭಾಷಾಂತರವನ್ನು ಮನೆಯಿಂದ ವಹಿಯೊಳಗೆ ಬರೆದು ತರಲಿಕ್ಕೆ ಹೇಳಬೇಕು. ಅವರು ತಂದ ಬಳಿಕ ಶಿಕ್ಷಕನು ಅದನ್ನು ತಿದ್ದಿ, ತಪ್ಪುಗಳನ್ನು ಹುಡುಗರಿಗೆ ವರ್ಗದೊಳಗೆ ತಿಳಿಸಿ ಹೇಳಬೇಕು. ಹಿಂದಿನ ಶಬ್ದಗಳನ್ನು ಆಗಾಗ್ಗೆ ಕೇಳುತ್ತಿರಬೇಕು. ಮತ್ತು ಈ ಪುಸ್ತಕದ ಕಟ್ಟಕಡೆಯಲ್ಲಿ ಕೊಟ್ಟ ಪ್ರಶ್ನಗಳನ್ನು ಕೇಳಬೇಕು. ಪರೀಕ್ಷೆಯ ದಿವಸ ಹೊಸ ಪ್ರಶ್ನಗಳನ್ನು ಹಾಕಬೇಕು. ಆಗ ಪುಸ್ತಕದೊಳಗಿನ ವಾಕ್ಯಗಳನ್ನು ಹೇಳದೆ, ಅವೇ ಶಬ್ದಗಳಿಂದ ಹೊಸ ವಾಕ್ಯಗಳನ್ನು ರಚಿಸಬೇಕು. ಮೊದಲಿನಿಂದ ವ್ಯಾಕರಣದ ಕಡೆಗೆ ಬಹಳ ಲಕ್ಷ್ಯ ಕೊಡಬೇಕು. ಹಾಗು ಶಬ್ದಗಳ ವರ್ಣರಚನೆಯನ್ನು ಯಾವಾಗಲೂ ಕೇಳುತ್ತಿರಬೇಕು.

Form I
Maharani's High School
Mysore (City)
Date 8.9.1920

ಅನುಕ್ರಮಣಿಕೆ

CONTENTS.

ಪುರವಣಿ **Appendix.**

ಭಾಷಾಂತರಪಾಠಮಾಲೆ.

ಎರಡನೇ ಪುಸ್ತಕ.

೧ನೇ ಪಾಠ.

ಕ್ರಿಯಾಪದಗಳ ಬಗ್ಗೆ ಸ್ಫುಟವಿಚಾರವು

Notes on Verbs.

೧. ಇಂಗ್ಲಿಷ ಭಾಷೆಯೊಳಗಿನ ಕೆಲವು ಧಾತುಗಳಿಗೆ ಸಮಾನವಾದ ಅರ್ಥವುಳ್ಳ ಸ್ವತಂತ್ರಧಾತುಗಳು ಕನ್ನಡದಲ್ಲಿ ಇಲ್ಲ. ಈ ಪ್ರಕಾರದ ಧಾತುಗಳಿಗೆ ಬದಲಾಗಿ ಕನ್ನಡದಲ್ಲಿ ಇಸು ಪ್ರತ್ಯಯ ಹಚ್ಚಿದ ಕ್ರಿಯಾಪದಗಳನ್ನೂ ಸಾಮಾಸಿಕ [1] ಕ್ರಿಯಾಪದಗಳನ್ನೂ ಪ್ರಯೋಗಿಸಬೇಕಾಗುತ್ತದೆ.

ಉದಾ: To protect ಸಂರಕ್ಷಿಸು.
To repent ಪಶ್ಚಾತ್ತಾಪಪಡು.
He protects Ráma ಅವನು ರಾಮನನ್ನು ಸಂರಕ್ಷಿಸುತ್ತಾನೆ.
I repent for my sins ನನ್ನ ಪಾಪಗಳ ಬಗ್ಗೆ ನಾನು ಪಶ್ಚಾತ್ತಾಪಪಡುತ್ತೇನೆ.

ಈ ಪ್ರಕಾರದ ಕೆಲವು ಕ್ರಿಯಾಪದಗಳು ಕೆಳಗೆ ಕೊಟ್ಟವೆ:

To praise	ಸ್ತುತಿಸು.	To dis-o-bey′	ಅಪ್ಪಣೆ ಮೀರು, ಮಾತು ಮೀರು.
To blame	ದೂಷಿಸು.	To de-stroy′	ಹಾಳುಮಾಡು, ನಾಶಮಾಡು.
To o-bey′	ಅಪ್ಪಣೆ ಪಾಲಿಸು, ಮಾತು ಕೇಳು.	To wa′ter	೧. ನೀರು ಹಾಕು, —ಕುಡಿಸು, —ತೋಯಿಸು; ೨. ನೀರು ಬರು.
To help / To as-sist′	ನೆರವಾಗು, ಸಹಾಯಮಾಡು.	To stu′dy	ಅಭ್ಯಾಸಮಾಡು.
To per-mit′	ಅಪ್ಪಣೆ ಕೊಡು, ಪರವಾನಗಿ—, ಸ್ವತಂತ್ರ—.	To en-joy′	(ಸುಖ) ಭೋಗಿಸು.
		To suf′fer	(ದುಃಖ) ಅನುಭವಿಸು.
To or′der	ಆಜ್ಞಾಪಿಸು.	To pun′ish	ಶಿಕ್ಷಿಸು, ದಂಡಿಸು.

[1] ಇದಕ್ಕೆ ಕನ್ನಡ ವ್ಯಾಕರಣದಲ್ಲಿ ಕ್ರಿಯಾಸಮಾಸವೆಂಬ ಹೆಸರುಂಟು.

To breathe	ಉಸುರಾಡಿಸು.	To at-tend′	೧. ಮನಸ್ಸು ಹಚ್ಚು, ಲಕ್ಷ್ಯಕೊಡು; ೨. ಸಂಗಡ ಇರು.
To re′com-mend″	ಶಿಪಾರಸುಮಾಡು.	To dare	ಧೈರ್ಯಮಾಡು.
To ex-am′ine	ಪರೀಕ್ಷಿಸು.	To love	ಪ್ರೀತಿಮಾಡು.
ಪೂಜಿಸು	to wor′ship.	ಪ್ರಾರ್ಥಿಸು	to pray.
ಮುದ್ದುಕೊಡು	to kiss.	ವಿನೋದಿಸು, ಮನರಂಜಿಸು	to a-muse′.
ವಾದಿಸು	to dis-pute′.	ಚಿತ್ರ ತೆಗೆ, ಬಣ್ಣ ಹಚ್ಚು	to paint [1].
ಆಣೆಮಾಡು	to swear.		

೨. To have ಎಂಬ ಕ್ರಿಯಾಪದದಂಥ ಬೇರೆ ಕೆಲವು ಕ್ರಿಯಾಪದಗಳು ಇಂಗ್ಲಿಷದಲ್ಲಿ ಉಂಟು. ಅವುಗಳ ಅರ್ಥವನ್ನು ಕನ್ನಡದಲ್ಲಿ ಮಾಡುವಾಗ ಕರ್ತೃಪದವನ್ನು ಚತುರ್ಥಿಯಲ್ಲಿಟ್ಟು ಕರ್ಮಪದವನ್ನು ಕರ್ತೃಸ್ಥಾನದಲ್ಲಿಡಬೇಕಾಗುತ್ತದೆ.

ಉದಾ: To like ಸೇರು.
I like milk ನನಗೆ ಹಾಲು ಸೇರುತ್ತದೆ.

ಈ ಪ್ರಕಾರದ ಕೆಲವು ಕ್ರಿಯಾಪದಗಳು ಕೆಳಗೆ ಕೊಟ್ಟಿವೆ:

To think	ತೋರು.	To find	ಸಿಗು.
To feel	ತಿಳಿ, (ಮನಸಿಗೆ) ಆಗು, —ಅನಿಸು.	To know	ಗೊತ್ತಿರು, ತಿಳಿ.
To want	ಬೇಕಾಗಿರು, ಅವಶ್ಯವಿರು.	To sus-pect′	ಸಂಶಯ ಬರು.
To re-mem′ber [2], To re-col-lect′	ನೆನಪು ಇರು, —ಆಗು.	ಒಪ್ಪು	to suit, to be-come′.

[1] To dye ಎಂಬ ಕ್ರಿಯಾಪದವನ್ನು ಬಹುತರವಾಗಿ ಬಟ್ಟೆಗಳಿಗೆ ಬಣ್ಣಕೊಡುವದರಲ್ಲಿ ಪ್ರಯೋಗಿಸುವರು. To paint ಎಂಬದನ್ನು ಚಿತ್ರ; ಗೋಡೆ ಮುಂತಾದವುಗಳಿಗೆ ಬಣ್ಣಹಚ್ಚಬೇಕಾದರೆ ಉಪಯೋಗಿಸುತ್ತಾರೆ. [2] To remember ನೆನಪು ಇರು —ಇಡು; to recollect ನೆನಪಾಗು; ನೆಪ್ಪಿಗೆ ಬರು. ಮೊದಲನೇ ಶಬ್ದದ ಅರ್ಥವು 'ತಾನೇ ನೆನಪಾಗು' ಎಂದು ಆಗುತ್ತದೆ; ಎರಡನೇದರ ಅರ್ಥವು 'ಮರೆತುಹೋದಂಥ ಮಾತಿನ ನೆನಪುಮಾಡಿಕೊಳ್ಳು' ಎಂತ ಆಗುತ್ತದೆ.

ಆದರೆ to know ಎಂಬದಕ್ಕೆ ತಿಳಿ, to think ಆಲೋಚಿಸು, to feel ಅನುಭವಿಸು, to find ಶೋಧಿಸಿ ತೆಗೆ, to remember ನೆನಪಿನಲ್ಲಿಡು ಎಂಬ ಅರ್ಥಗಳಿದ್ದಾಗ ಅವುಗಳನ್ನು ಕನ್ನಡದಲ್ಲಿ ಇಂಗ್ಲಿಷದಂತೆಯೇ ಪ್ರಯೋಗಿಸಬೇಕು.

೩. To owe (ಓ) ಋಣಿಯಾಗಿರು to cost ಕ್ರಯಬೀಳು ಮುಂತಾದ ಎಷ್ಟೋ ಕ್ರಿಯಾಪದಗಳ ಭಾಷಾಂತರವನ್ನು ಬೇರೆ ರೀತಿಯಿಂದ ಮಾಡಬೇಕಾಗುತ್ತದೆ. ಉದಾ:

He owes me two rupees ಅವನು ನನಗೆ ಎರಡು ರೂಪಾಯಿ ಕೊಡಬೇಕು; ಅಥವಾ, ಅವನಿಂದ ನನಗೆ ಎರಡು ರೂಪಾಯಿ ಸಲ್ಲತಕ್ಕದ್ದು.

This coat costs five rupees ಈ ಅಂಗಿಗೆ ಐದು ರೂಪಾಯಿ ಬೀಳುತ್ತದೆ.

೪. ಮೇಲೆ ಕೊಟ್ಟ ಉದಾಹರಣಗಳಿಂದ ಸಾಧಾರಣವಾಗಿ ನೆನಪಿನಲ್ಲಿಡತಕ್ಕ ನಿಯಮವು ಯಾವದಂದರೆ, ಕನ್ನಡದಿಂದ ಇಂಗ್ಲಿಷದಲ್ಲಾಗಲಿ ಇಂಗ್ಲಿಷದಿಂದ ಕನ್ನಡದಲ್ಲಾಗಲಿ ಭಾಷಾಂತರಮಾಡುವಾಗ, ಶಬ್ದಗಳ ರೂಪಗಳ ಕಡೆಗೆ ಲಕ್ಷ್ಯಕೊಟ್ಟು ಶಬ್ದಶಃ ಭಾಷಾಂತರಮಾಡುವ ರೂಢಿ ಇಡುವದು ಒಳ್ಳೇದು. ಆದರೆ ಕೆಲವು ಕಡೆಯಲ್ಲಿ ಹೀಗೆ ಮಾಡಿದರೆ ನಡೆಯುವದಿಲ್ಲ; ಆದದರಿಂದ, ಭಾಷಾಪದ್ಧತಿಯ ಕಡೆಗೂ ಅರ್ಥದ ಕಡೆಗೂ ಯಾವಾಗಲೂ ಚನ್ನಾಗಿ ಲಕ್ಷ್ಯಕೊಡುವದು ಉತ್ತಮ ಪಕ್ಷ.

೫. ಶಬ್ದಸಂಗ್ರಹ[1] ೧.

A law	ಕಾಯಿದೆ, ಕಟ್ಟಳೆ.	To re-joice′ (IV)	ಸಂತೋಷಪಡು, ಹಿಗ್ಗು, ಹರ್ಷಿಸು.
Law, the law	ಧರ್ಮಶಾಸ್ತ್ರ.	To flourish	ಊರ್ಜಿತ ಸ್ಥಿತಿ ಹೊಂದು, ಏಳಿಗೆಯಲ್ಲಿರು.
To thank	ಉಪಕಾರವಾಯಿತನ್ನು, ಉಪಕಾರಮನ್ನಿಸು.	Or′der	೧. ಅಪ್ಪಣೆ, ಆಜ್ಞೆ; ೨. ಕ್ರಮ, ವ್ಯವಸ್ಥೆ.
ಮನಗಾಣಿಸು	to con-vince′.	ಏರು	to climb (ಕ್ಲೈಮ್).

[1] ಭಾಷಾಂತರಮಾಡುವಾಗ ಒಂದು ಇಂಗ್ಲಿಷ ಶಬ್ದಕ್ಕೆ ಕೋಶದೊಳಗಿನ ಕನ್ನಡ ಶಬ್ದವು ರಚನೆಗೆ ಸರಿಯಾಗದಿದ್ದರೆ, ಅದೇ ಅರ್ಥದ ಮತ್ತೊಂದು ಶಬ್ದವನ್ನು ಉಪಯೋಗಿಸಬೇಕು.

ಭಾಷಾಂತರಪಾಠ ೧.

೬. 1. The good citizens were rejoicing, the bad were weeping. 2. Our country will flourish. 3. I think so. 4. I am thinking. 5. I know this story. 6. I want your pen-knife. 7. He likes that book. 8. I thank you. 9. I love you. 10. I will praise good men. 11. Our friends will assist us. 12. He will examine you. 13. I will recommend you. 14. Walls protect a city. 15. A good boy obeys his parents. 16. They will obey the laws of their country. 17. He will obey my orders. 18. Some men disobey God and the laws. 19. Your father will blame you. 20. They were destroying the villages.

೧. ಆ ಹುಡುಗನು ತನ್ನ ತಂದೆತಾಯಿಗಳ ಮಾತು ಕೇಳುವನು. ೨. ಕೆಟ್ಟ ಹುಡುಗರು ತಮ್ಮ ತಂದೆತಾಯಿಗಳ ಮಾತು ಮೀರುತ್ತಾರೆ. ೩. ನಾನು ಕಾಯಿದೆಗಳನ್ನು ಕಲಿಯುತ್ತೇನೆ. ೪. ಅವನು ನಿನ್ನನ್ನು ದೂಷಿಸುವನು. ೫. ಅವರ ದೇಶವು ಊರ್ಜಿತ ಸ್ಥಿತಿಯನ್ನು ಹೊಂದುವದು. ೬. ಅವರು ಪಟ್ಟಣವನ್ನು ಹಾಳುಮಾಡುವರು. ೭. ನಾನು ನನ್ನ ಒಡೆಯನ ಅಪ್ಪಣೆ ಪಾಲಿಸುವೆನು. ೮. ಕೋತಿಗಳು ಗಿಡಗಳನ್ನು ಏರುತ್ತಲಿವೆ. ೯. ಅವನು ತನ್ನ ಸ್ನೇಹಿತರಿಗೆ ಸಹಾಯಮಾಡುವನು. ೧೦. ನಾನು ಆಕೆಗೆ ನೆರವಾಗುವೆನು. ೧೧. ಅವರು ನಿಮ್ಮ ಶಿಪಾರಸುಮಾಡುವರು. ೧೨. ನೀನು ಗೋಡೆಯನ್ನು ಏರುತ್ತಿದ್ದಿ. ೧೩. ತೋಟಿಗನು ಗಿಡಗಳಿಗೆ ನೀರು ಹಾಕುವನು. ೧೪. ಈ ಕೂಸು ನಿನ್ನ ಮನರಂಜಿಸುವದು. ೧೫. ನಾನು ನಿನಗೆ ಮನಗಾಣಿಸುವೆನು. ೧೬. ಅವಳು ನಿನ್ನ ಮೇಲೆ ಪ್ರೀತಿಮಾಡುತ್ತಾಳೆ. ೧೭. ಅವರು ಪ್ರಾರ್ಥಿಸುತ್ತಿದ್ದರು. ೧೮. ನಾವು ದೇವರನ್ನು ಪೂಜಿಸುತ್ತೇವೆ. ೧೯. ತಂದೆಯು ತನ್ನ ಮಗುವಿಗೆ ಮುದ್ದು ಕೊಡುತ್ತಾನೆ. ೨೦. ಒಬ್ಬ ಮನುಷ್ಯನು ಅವನ ಮನೆಯ ಬಾಗಲಿಗೆ ಬಣ್ಣಾಹಚ್ಚುತ್ತಿದ್ದನು. ೨೧. ಈ ಹುಡುಗನು ನನ್ನೊಡನೆ ವಾದಿಸುತ್ತಾನೆ. ೨೨. ನೀವು ಅವರನ್ನು ಸ್ತುತಿಸುತ್ತೀರಿ. ೨೩. ಅವನು ಆಣೆಮಾಡುತ್ತಾನೆ. ೨೪. ಅರಸನಿಗೆ ಕಿರೀಟವು ಒಪ್ಪುತ್ತದೆ. ೨೫. ನನಗೆ ಪುಸ್ತಕ ಬೇಕು.

೨ನೇ ಪಾಠ.

ಕ್ರಿಯಾಪದಗಳ ನಿಷೇಧರೂಪ

Negative Forms of Verbs.

೭. ಕ್ರಿಯಾಪದಗಳ ನಿಷೇಧರೂಪವನ್ನು ಮಾಡುವದಾದರೆ, not (ಇಲ್ಲ, ಅಲ್ಲ) ಎಂಬ ಕ್ರಿಯಾವಿಶೇಷಣವನ್ನಾಗಲಿ, no (ಯಾರೂ—ಏನೂ ಇಲ್ಲ) ಎಂಬ ವಿಶೇಷಣವನ್ನಾಗಲಿ ಪ್ರಯೋಗಿಸಬೇಕು.

೮. ಅಪೂರ್ಣವರ್ತಮಾನ, ಅಪೂರ್ಣಭೂತ, ಭವಿಷ್ಯತ್ಕಾಲಗಳ ಹಾಗೆ ಸಹಾಯಕ್ರಿಯಾಪದಗಳಿಂದ ಸಿದ್ಧವಾಗುವಂಥ ಕಾಲಗಳ ನಿಷೇಧರೂಪವನ್ನು ಮಾಡುವದಾದರೆ, not ಎಂಬ ಶಬ್ದವನ್ನು ಸಹಾಯಕ್ರಿಯಾಪದಕ್ಕೂ ಮುಖ್ಯ ಕ್ರಿಯಾಪದಕ್ಕೂ ನಡುವೆ ಹಾಕಬೇಕು.

ಉದಾ: He is *not* coming ಅವನು ಬರುವದಿಲ್ಲ.
He was *not* coming ಅವನು ಬರುತ್ತಿದ್ದಿಲ್ಲ.
He will *not* come ಅವನು ಬರಲಿಕ್ಕಿಲ್ಲ.

೯. ಶಬ್ದಸಂಗ್ರಹ ೨.

To hurt	ನೋಯಿಸು.
To whip	ಚಬಕದಿಂದ ಹೊಡಿ.
To tear	ಹರಿ.
To drive	೧. (ಬಂಡಿ, ರಥ) ಹೊಡಿ; ೨.—ಹೊಡಕೊಂಡು ಹೋಗು.
To creep, To crawl	ಹರಿದಾಡು, ಹೊಟ್ಟೆಹೊಸಿ, ಅಂಬೆಗಾಲಿಕ್ಕು.
Wind	ಗಾಳಿ.
A bat'tle	ಕಾಳಗ, ಯುದ್ಧ.
A trum'pet	ತುತೂರಿ.
To blow	೧. (ಗಾಳಿ) ಬೀಸು; ೨. ಊದು.
To win	ಗೆಲ್ಲು.
To shake	ಅಗಳಾಡಿಸು.
To con'quer	ಕೈವಶಮಾಡಿಕೊಳ್ಳು, ಜಯಿಸು.
To lose	ಹೋಗಲಾಡಿಸು, ಕಳಕೊಳ್ಳು.
To touch	ಮುಟ್ಟು.
The touch	ಸ್ಪರ್ಶ.
A lamp, A light	ದೀಪ, ಬೆಳಕು.

A car'riage	ರಥ.	To light	೧. ದೀಪಹಚ್ಚು; ೨. ಬೆಳಕು ಮಾಡು.
A wax'can-dle	ಮೇಣಬತ್ತಿ.	A coach'man, A cart'man	ಸಾರಥಿ, ಬಂಡಿಹೊಡೆಯುವವ.
A piece, A bit	ತುಂಡು, ಚೂರು, ತುಣುಕು.	To be-lieve'	ನಂಬು.
		To for-get'	ಮರೆ.
ಬಂಡಿ	a cart.	ಕಂದೀಲು, ಲಾಂದರು	a lan'tern.

ಭಾಷಾಂತರಪಾಠ ೨.

೧೦. 1. The wind was *not* blowing. 2. He was blowing a trumpet. 3. That child does *not* creep. 4. He will *not* tear my coat. 5. The dogs were *not* barking. 6. I will *not* forget my friends. 7. You are *not* studying. 8. You will win the battle. 9. They will conquer your country. 10. He will *not* win the money. 11. You will lose your money. 12. He will whip that disobedient boy. 13. The coachman will drive our carriage. 14. You are *not* lighting the lamps. 15. The servant will light these candles. 16. He will *not* touch your money. 17. I want a light. 18. This candle will *not* burn. 19. The child is burning that piece of paper. 20. You will shake my table. 21. We will *not* eat unripe fruit. 22. The ship is *not* sinking. 23. It will *not* hurt your fingers. 24. The boys were *not* learning their lessons. 25. My father will *not* call the husbandman's daughter.

೧. ನೀನು ಓದುತ್ತಿದ್ದಿಲ್ಲ. ೨. ಆ ಹೆಣ್ಣುಮಕ್ಕಳು ಉಣ್ಣೇ ಹಿಂಜುವದಿಲ್ಲ. ೩. ನಾನು ಹೂ ಕೊಯ್ಯುವದಿಲ್ಲ. ೪. ಕೂಸು ಅಳುತ್ತಿದ್ದಿಲ್ಲ. ೫. ನಾವು ಮೊಣಕಾಲೂರುತ್ತಿದ್ದಿಲ್ಲ. ೬. ಅವರು ಕಾಳಗವನ್ನು ಗೆಲ್ಲುವರು. ೭. ನೀವು ಕುಣಿಯುತ್ತಿದ್ದಿಲ್ಲ. ೮. ಅವನು ಕಲಿಯಲಿಕ್ಕಿಲ್ಲ. ೯. ಅವರು ಜಗಳಾಡಲಿಕ್ಕಿಲ್ಲ. ೧೦. ಬಂಡಿಯು ಬರುತ್ತಲಿದೆ. ೧೧. ಅದು ನಮ್ಮ ಲಾಂದರು ಅದೆ. ೧೨. ನಾವು ಮಾತಾಡುತ್ತಿದ್ದಿಲ್ಲ. ೧೩. ಒಕ್ಕಲಿಗನು ಹೊಲದಲ್ಲಿ ನೇಗಿಲ ಹೊಡಿಯುತ್ತಿದ್ದಿಲ್ಲ.

೧೪. ಆಕಳ ಕೋಡುಗಳು ಕರುವನ್ನು ನೋಯಿಸಲಿಕ್ಕಿಲ್ಲ. ೧೫. ಕೂಸು ಅಂಬೆ ಗಾಲಿಕ್ಕುತ್ತದೆ. ೧೬. ಗಾಳಿ ಬೀಸುವದಿಲ್ಲ. ೧೭. ಬಂಡಿಯವನು ಎತ್ತುಗಳನ್ನು ಹೊಡಿಯುತ್ತಾ ಇದ್ದಾನೆ. ೧೮. ನಾನು ಆ ಪಕ್ಷಿಯನ್ನು ಹಿಡಿಯುತ್ತಿದ್ದಿಲ್ಲ. ೧೯. ಅವನು ಕೆಲಸಮಾಡಲಿಕ್ಕಿಲ್ಲ. ೨೦. ಸಾರಥಿಯು ಕುದುರೆಗಳನ್ನು ಚಬಕ ದಿಂದ ಹೊಡಿಯುತ್ತಲಿದ್ದಾನೆ. ೨೧. ನಾನು ಆ ಪುಸ್ತಕವನ್ನು ಕಳಕೊಳ್ಳಲಿಕ್ಕಿಲ್ಲ. ೨೨. ನೀನು ಆ ರೊಕ್ಕಾ ಕಳಕೊಳ್ಳುವಿ. ೨೩. ಅವನು ಜಾಗ್ರತೆಯುಳ್ಳವನಾಗ ಲಿಕ್ಕಿಲ್ಲ. ೨೪. ನೀನು ದುಃಖದಲ್ಲಿರಲಿಕ್ಕಿಲ್ಲ. ೨೫. ನನ್ನ ಹಳೇ ಮುಂಡಾಸು ಹಸುರು ಬಣ್ಣದ್ದಿತ್ತು.

೩ನೇ ಪಾಠ.

ಕ್ರಿಯಾಪದಗಳ ನಿಷೇಧರೂಪ (ಮುಂದೆ ಸಾಗಿಸಿದ್ದು)

Negative Forms of Verbs *(continued).*

೧೧. ವರ್ತಮಾನಕಾಲದ ಹಾಗೆ ಸಹಾಯಕ್ರಿಯಾಪದಗಳು ಹತ್ತದಂಥ ಕಾಲಗಳ ನಿಷೇಧರೂಪವನ್ನು ಮಾಡುವದಾದರೆ, do ಎಂಬ ಸಹಾಯಕ್ರಿಯಾಪದ ವನ್ನು ಪ್ರಯೋಗಿಸಿ[1], ಅದಕ್ಕೂ ಮುಖ್ಯ ಕ್ರಿಯಾಪದಕ್ಕೂ ನಡುವೆ not ಎಂಬ ಶಬ್ದವನ್ನು ಹಾಕು.

To write ಎಂಬದರ ವರ್ತಮಾನಕಾಲ ನಿಷೇಧರೂಪ. ಉದಾ:

ಏಕವಚನ.

1. I do not write	ನಾನು ಬರೆಯುವದಿಲ್ಲ[2].
2. Thou dost[3] not write	ನೀನು ಬರೆಯುವದಿಲ್ಲ.
3. He she, it does not write	ಅವನು, ಅವಳು, ಅದು ಬರೆಯುವದಿಲ್ಲ.

---

[1] ಕವಿತೆಯಲ್ಲಿ do ಎಂಬ ಸಹಾಯಕ್ರಿಯಾಪದವು ಬಹುತರವಾಗಿ ಬೇಕಾಗುವದೇ ಇಲ್ಲ. ಅಲಂಕಾ ರಿಕ ಭಾಷೆಯಲ್ಲಿ ಸಹ ಒಮ್ಮೊಮ್ಮೆ ಅದು ಅವಶ್ಯವಿರುವದಿಲ್ಲ; ಆಗ not ಎಂಬ ಶಬ್ದವನ್ನು ಮಾತ್ರ ಕ್ರಿಯಾ ಪದದ ಮುಂದೆ ಹಾಕುತ್ತಾರೆ. ಉದಾ: He comes not ಅವನು ಬರುವದಿಲ್ಲ.

[2] I am not writing ಮತ್ತು I do not write ಎಂಬ ವಾಕ್ಯಗಳ ಭಾಷಾಂತರವು ಸಮವಾಗಿ 'ನಾನು ಬರೆಯುವದಿಲ್ಲ' ಎಂತ ಆಗುತ್ತದೆ. [3] ಪುಸ್ತಕ ೧, ಪುಟ ೨೭, ಟಿಪ್ಪಣಿ 2 ನೋಡು.

ಬಹುವಚನ.

1. We do not write	ನಾವು ಬರೆಯುವದಿಲ್ಲ.
2. You do not write	ನೀವು ಬರೆಯುವದಿಲ್ಲ.
3. They do not write	ಅವರು, ಅವು ಬರೆಯುವದಿಲ್ಲ.

೧೨. ಶಬ್ದಸಂಗ್ರಹ ೩.

To cov'er	ಆಚ್ಛಾದಿಸು, ಮುಚ್ಚು.	To o'pen	ತೆರೆ.
To un-cov'er	೧. ಆಚ್ಛಾದನ ತೆಗೆ, ತೆರೆ; ೨. ಟೊಪ್ಪಿಗೆ ತೆಗೆ.	A Hin'du	ಹಿಂದೂಮನುಷ್ಯ.
A-live' [1]	ಜೀವವುಳ್ಳ, ಸಜೀವ.	The bo'dy	ಶರೀರ, ಮೈ.
Live		A gate [2]	ಅಗಸೀಬಾಗಿಲು, ಹೆಬ್ಬಾಗಿಲು.
Liv'ing		Dead	ಸತ್ತಂಥ.
ಹುಗಿ, ಹೂಳು	to bu'ry.	ಹೆಣ	a corpse.

ಭಾಷಾಂತರಪಾಠ ೩.

೧೩. 1. Hindus *do not* eat beef. 2. He *does not* read bad books. 3. The servant *does not* open the door. 4. A lion *does not* fear a fox. 5. You *do not* obey my orders. 6. He is covering the body of his dead father. 7. We *do not* uncover our heads. 8. You *do not* open[3] the letters. 9. He *does not* open his book. 10. We *do not* shut the gate of the city. 11. He was shutting the gate of the garden.

---

[1] Alive ಎಂಬ ವಿಶೇಷಣವು ನಾಮಪದದ ಮುಂದೆ ಬರುತ್ತದೆ; live ಎಂಬದು ನಾಮಪದದ ಹಿಂದೆ ಬರುತ್ತದೆ; living ಎಂಬದು ಮುಂದೆ ಆಗಲಿ ಹಿಂದೆ ಆಗಲಿ ಬರಬಹುದು. ಉದಾಹರಣಗಳು:

This animal is *alive,*
This is a *live* animal,
This is a *living* animal,
This animal is *living*
} ಈ ಪ್ರಾಣಿಯು ಜೀವವುಳ್ಳದ್ದು; ಅಥವಾ, ಇದು ಜೀವವುಳ್ಳ ಪ್ರಾಣಿಯು.

[2] ಮನೆಯಬಾಗಿಲಿಗೆ door, ಮತ್ತು ಪಟ್ಟಣದೊಳಗಾಗಲಿ ಹಳ್ಳಿಯೊಳಗಾಗಲಿ ತೋಟದೊಳಗಾಗಲಿ ಹೋಗುವ ದೊಡ್ಡ ಬಾಗಿಲಿಗೆ gate ಅನ್ನುತ್ತಾರೆ.

[3] Open a letter ಪತ್ರ ಒಡೆ.

೧. ಕೆಲವು ಹಿಂದೂಜನರು ಸರಾಯ ಕುಡಿಯುವದಿಲ್ಲ. ೨. ಈ ಕೂಸು ಹಾಲು ಕುಡಿಯುವದಿಲ್ಲ. ೩. ನೀನು ಆಲೋಚನೆಮಾಡುವದಿಲ್ಲ. ೪. ಅವನು ನನ್ನ ಪತ್ರಗಳನ್ನು ಒಡೆಯುವದಿಲ್ಲ[1]. ೫. ನಾನು ನನ್ನ ತಪ್ಪುಗಳನ್ನು ಮುಚ್ಚಿಕೊಳ್ಳುವದಿಲ್ಲ. ೬. ನೀನು ನಿನ್ನ ಕೈಗಳನ್ನು ತೊಳಕೊಳ್ಳುವದಿಲ್ಲ. ೭. ಅವರು ಪ್ರಾರ್ಥಿಸುವದಿಲ್ಲ. ೮. ಅವನು ಕೇಳುವದಿಲ್ಲ. ೯. ಕೆಲವು ಜನರು ಜೀವವುಳ್ಳ ಪ್ರಾಣಿಗಳನ್ನು ಕೊಲ್ಲುವದಿಲ್ಲ. ೧೦. ಅವನ ಗೆಳೆಯರು ಅವನಿಗೆ ಸಹಾಯಮಾಡುವದಿಲ್ಲ. ೧೧. ವ್ಯಾಪಾರವು ಚನ್ನಾಗಿ ನಡೆಯುವದಿಲ್ಲ[2]. ೧೨. ಕೆಟ್ಟ ಹುಡುಗರು ತಮ್ಮ ತಂದೆತಾಯಿಗಳ ಮಾತು ಕೇಳುವದಿಲ್ಲ. ೧೩. ಕೆಲವು ಜನರು ತಮ್ಮ ದೇಶದ ಮೇಲೆ ಪ್ರೀತಿಮಾಡುವದಿಲ್ಲ. ೧೪. ನಾನು ಸೇವಕನನ್ನು ದೂಷಿಸುವದಿಲ್ಲ. ೧೫. ಅವನು ಹುಲಿಗೆ ಅಂಜುವದಿಲ್ಲ. ೧೬. ಬ್ರಾಹ್ಮಣರು ಹೆಣಗಳನ್ನು ಹುಗಿಯುವದಿಲ್ಲ.

೪ನೇ ಪಾಠ.

To be ಎಂಬ ಕ್ರಿಯಾಪದದ ನಿಷೇಧರೂಪ

The Negative Form of the Verb 'To be'.

೧೪. ವರ್ತಮಾನ ಭೂತಕಾಲಗಳಲ್ಲಿ to be ಎಂಬ ಕ್ರಿಯಾಪದದ ನಿಷೇಧ ರೂಪವನ್ನು ಮಾಡುವದಾದರೆ, not ಎಂಬ ಶಬ್ದವನ್ನು ಅದರ ಮುಂದೆ ಹಾಕ ಬೇಕು. ಉದಾ:

He is *not* happy	ಅವನು ಸೌಖ್ಯದಿಂದಿಲ್ಲ.
He was *not* happy	ಅವನು ಸೌಖ್ಯದಿಂದಿದ್ದಿಲ್ಲ.
I am *not* the man	ನಾನು ಆ ಮನುಷ್ಯನಲ್ಲ.
It is *not* my book	ಅದು ನನ್ನ ಪುಸ್ತಕವಲ್ಲ.
This is *not* Ráma's book	ಇದು ರಾಮನ ಪುಸ್ತಕವಲ್ಲ.

[1] *Does not open.* [2] Is *not* flourishing.

೧೫. To be ಎಂಬದರ ಮುಂದೆ ಬರೇ ನಾಮಪದವು ಬಂದು ಅದರಿಂದ ಯಾವನಾದರೊಬ್ಬನ ಕಸಬು ಅಥವಾ ಉದ್ಯೋಗ ಗೊತ್ತಾಗುತ್ತಿದ್ದರೆ, not ಎಂಬ ಕ್ರಿಯಾವಿಶೇಷಣಕ್ಕೆ ಬದಲಾಗಿ no ಎಂಬ ವಿಶೇಷಣವನ್ನು ಸಹ ಹಾಕುವ ವಾಡಿಕೆಯುಂಟು.

ಉದಾ: **He is *not* a soldier,**

ಅಥವಾ **He is *no* soldier.**

ಆದರೆ ಈ ಎರಡೂ ವಾಕ್ಯಗಳ ಅರ್ಥ ಒಂದೇ ಅಲ್ಲ. ಮೊದಲನೇ ವಾಕ್ಯದ ಅರ್ಥ ಅವನು ಸಿಪಾಯಿಯಲ್ಲ, ಅಂದರೆ ಅವನು ಸಿಪಾಯಿಯ ಕೆಲಸಮಾಡುವವನಲ್ಲ. ಎರಡನೇ ವಾಕ್ಯದ ಅರ್ಥ ಅವನು ಮೇಲಾದ ಸಿಪಾಯಿಯಲ್ಲ, ಅಂದರೆ ಅವನಲ್ಲಿ ಸಿಪಾಯಿಗೆ ಇರತಕ್ಕಷ್ಟು ಶೌರ್ಯವಿಲ್ಲ.

೧೬. ಶಬ್ದಸಂಗ್ರಹ ೪.

VIII

Pure	ಶುದ್ಧ, ನಿರ್ಮಲ.	Col′our-less	ವರ್ಣಹೀನ, ಬಣ್ಣವಿಲ್ಲದ.
Im-pure′	ಅಶುದ್ಧ, ಮಲಿನ.	Well [2]	ಸ್ವಸ್ಥವಾಗಿ, ಚನ್ನಾಗಿ, ಕ್ಷೇಮದಿಂದ.
Taste′less	ರುಚಿಯಿಲ್ಲದ.	Un-well′	ಬೇನೆಯುಳ್ಳ, ಅಸ್ವಸ್ಥ.
O′dour-less	ವಾಸನೆಯಿಲ್ಲದ.	Wealth′y	ಹಣವುಳ್ಳ, ಶ್ರೀಮಂತ.
Of′ten [1]	ಆಗಾಗ್ಗೆ, ಬಾರಿಬಾರಿಗೆ.	Waist′coat	ಕಬಚ.
Fat	ಪುಷ್ಟ, ಕೊಬ್ಬಿದ.	Hon′est	ಪ್ರಾಮಾಣಿಕ.
Lean	ಬಡ, ಸೊರಗಿದ.	Dis-hon′est	ಅಪ್ರಾಮಾಣಿಕ, ತಗಲು.
Praise	ಸ್ತೋತ್ರ, ಹೊಗಳಿಕೆ.	Blame	ದೋಷ.
Guilt	ತಪ್ಪು, ಸದೋಷತೆ.	A mer′chant	ವರ್ತಕ, ವ್ಯಾಪಾರಸ್ಥ.
A pro′fit	ಲಾಭ.	A neigh′bour	ನೆರೆಯವ.
Loss	ಕೇಡು, ಹಾನಿ, ನಷ್ಟ.	A ra′zor	(ಕ್ಷೌರ)ಕತ್ತಿ.

[1] ಈ ಶಬ್ದದೊಳಗಿನ t ದ ಉಚ್ಚಾರವಾಗುವದಿಲ್ಲ. [2] Well ಎಂಬ ಶಬ್ದವನ್ನು 'ಕ್ಷೇಮದಿಂದ, ನೆಟ್ಟಗೆ, ಚನ್ನಾಗಿ' ಎಂಬ ಅರ್ಥದಿಂದ ಬೇಕಾದಲ್ಲಿ ಪ್ರಯೋಗಿಸಬಹುದು. ಆದರೆ Unwell ಎಂಬ ಶಬ್ದವನ್ನು ಶರೀರಪ್ರಕೃತಿಗೆ ಮಾತ್ರ ಹಚ್ಚುತ್ತಾರೆ. ಈ ಎರಡೂ ಶಬ್ದಗಳು ಕ್ರಿಯಾಪದದ ಮುಂದೆ ಬರುತ್ತವೆ.

A re-ward[1], A prize	ಇನಾಮು.	News[2]	ಸುದ್ದಿ, ವರ್ತಮಾನ.
To get	ದೊರಕಿಸು.	Rich'es[3]	ದ್ರವ್ಯ, ಧನ.
To bear	೧. ಹೊರು; ೨. ತಾಳು.	Wealth	ಸಂಪತ್ತು, ಐಶ್ವರ್ಯ.
A thim'ble	ಅಂಗುಸ್ತಾನ.	Guilt'y	ದೋಷವುಳ್ಳ, ಅಪರಾಧಿ.

ಭಾಷಾಂತರಪಾಠ ೪.

೧೭. 1. His garden is *not* beautiful. 2. His uncle is *un*well. 3. Our house is *not* large. 4. Pure water is taste*less*. 5. It is colour*less* and odour*less*. 6. He will bring good news. 7. This is a bad news. 8. He is *not* a wealthy man. 9. Our neighbour is *not* a good man. 10. It is *not* your fault. 11. Your son will *not* win the prize. 12. The good man will get a reward. 13. The merchant will get a profit. 14. Riches often increase care. 15. He will bear the blame. 16. You are *not* guilty. 17. He is *not* a carpenter. 18. He is *no* carpenter. 19. That man is *not* a gardener. 20. This is *not* the house. 21. It is *not* a lion. 22. It is *not* your waistcoat. 23. The water of your well is *not* pure. 24. The boy is *not* fat. 25. This is *not* pure gold.

೧. ಅವನ ಮಕ್ಕಳು ಉದ್ಯೋಗಿಗಳಲ್ಲ. ೨. ಈ (ಕ್ಷೌರ)ಕತ್ತಿಯು ಹದನವಿಲ್ಲ. ೩. ಅದು ಮೊಂಡವದೆ. ೪. ನಿನ್ನ ಚಾಕು ಮೊಂಡವಿಲ್ಲ. ೫. ಕೆಲ ಪುರುಷರು ಧಿಟ್ಟರಿರುವದಿಲ್ಲ. ೬. ಕೆಲವು ಹುಡುಗರು ಅಂಜು

[1] Reward ಅಂದರೆ ಉತ್ತಮ ರೀತಿಯಿಂದ ಸೇವೆಮಾಡಿದ್ದರಿಂದಾಗಲಿ, ಪರರ ಮೇಲೆ ಉಪಕಾರ ಮಾಡಿದ್ದರಿಂದಾಗಲಿ ದೊರಕಿದ ಇನಾಮು. Prize ಅಂದರೆ ಯುದ್ಧದಲ್ಲಿ ಅಥವಾ ಯಾವದಾದರೊಂದು ಹೋರಾಟದ ಇಲ್ಲವೆ ಮೇಲಾಟದ ಕೆಲಸದಲ್ಲಿ ಹೆಚ್ಚು ಯೋಗ್ಯತೆಯನ್ನು ತೋರಿಸಿ ಸಂಪಾದಿಸಿದ ಇನಾಮು.

[2] News ಎಂಬ ಶಬ್ದವು ಬಹುವಚನದಲ್ಲಿದ್ದು ಅದನ್ನು ಏಕವಚನದಂತೆ ಪ್ರಯೋಗಿಸುತ್ತಾರೆ. ಅದನ್ನು ಉಪಪದವಿಲ್ಲದೆ ಪ್ರಯೋಗಿಸಬಹುದು; ಉಪಪದವು ಬೇಕಾದರೆ, the ಮಾತ್ರ ಹಚ್ಚಬಹುದು.

[3] Riches ಎಂಬ ಶಬ್ದವು ಏಕವಚನದಲ್ಲಿದ್ದು ಅದನ್ನು ಬಹುವಚನದಂತೆ ಪ್ರಯೋಗಿಸುತ್ತಾರೆ.

ಬುರುಕರಿರುವದಿಲ್ಲ. ೭. ಆ ಹಣ್ಣುಗಳು ಕಸಕಲ್ಲ. ೮. ಕೆಲವು ಹಣ್ಣುಗಳು ಕಹಿ ಇರುವದಿಲ್ಲ. ೯. ಕೆಲವು ಜನರು ಕೊಬ್ಬಿರುತ್ತಾರೆ, ಕೆಲವರು ಕೊಬ್ಬಿರುವದಿಲ್ಲ. ೧೦. ಕೆಲವರು ಹರೆಯದವರು ಸಾಯುತ್ತಾರೆ. ೧೧. ಅವನು ತನ್ನ ಮೋರೆಯನ್ನು ತೋರಿಸುವದಿಲ್ಲ. ೧೨. ನಾನು ವರ್ತಕನಲ್ಲ. ೧೩. ಆ ವರ್ತಕನು ಪ್ರಾಮಾಣಿಕನಲ್ಲ. ೧೪. ಅವನ ನೆರೆಮನೆಯವನು ಪ್ರಾಮಾಣಿಕನಿದ್ದಾನೆ. ೧೫. ಆಕೆಯ ಗಂಡನು ಗರ್ವಿಷ್ಠನು. ೧೬. ಕೆಲವು ಶ್ರೀಮಂತ ಜನರು ಪ್ರಾಮಾಣಿಕರಿರುವದಿಲ್ಲ. ೧೭. ಎಷ್ಟೋ ಮಂದಿ ಬಡವರು ಸುಖದಿಂದಿರುತ್ತಾರೆ. ೧೮. ಇದು ನನ್ನ ಮುಂಡಾಸಲ್ಲ. ೧೯. ಈ ಮುಂಡಾಸು ನನ್ನದಲ್ಲ. ೨೦. ಅವನು ನನ್ನ ಗೆಳೆಯನಲ್ಲ. ೨೧. ಇದು ಆ ಅಂಗಡಿಯಲ್ಲ. ೨೨. ಈ ಲೆಕ್ಕಣಿಕೆ ನಿನ್ನದಲ್ಲ. ೨೩. ಇದು ಪಕ್ಷಿಯ ಗೂಡಲ್ಲ. ೨೪. ಅವರು ಯುದ್ಧ ಮಾಡುತ್ತಿದ್ದಿಲ್ಲ. ೨೫. ನಾನು ನಿನ್ನನ್ನು ಸಂರಕ್ಷಿಸಲಿಕ್ಕಿಲ್ಲ.

೫ನೇ ಪಾಠ.

To have ಎಂಬ ಕ್ರಿಯಾಪದದ ನಿಷೇಧಾರ್ಥ

The Negative Form of the Verb 'To have'.

೧೮. ವರ್ತಮಾನ ಭೂತಕಾಲಗಳಲ್ಲಿ to have ಎಂಬ ಕ್ರಿಯಾಪದದ ನಿಷೇಧಾರ್ಥವನ್ನು ಮಾಡುವದಾದರೆ, no ಎಂಬ ಶಬ್ದವನ್ನು ಪ್ರಯೋಗಿಸಬೇಕು.

ಉದಾ: He has *no* book ಅವನ ಬಳಿಯಲ್ಲಿ ಪುಸ್ತಕವಿಲ್ಲ.

೧೯. ಆದರೆ ಕರ್ಮಪದದ ಅರ್ಥವನ್ನು ವಿಶೇಷಿಸುವಂಥ ಶಬ್ದವು ಕರ್ಮದ ಹಿಂದೆ ಇದ್ದರೆ, ಬಹುತರವಾಗಿ not ಎಂಬ ಶಬ್ದವನ್ನು ಪ್ರಯೋಗಿಸಬೇಕಾಗುತ್ತದೆ.

ಉದಾ: I have *not* your book ನನ್ನ ಹತ್ತರ ನಿನ್ನ ಪುಸ್ತಕವಿಲ್ಲ.

೨೦. ರೂಢಿಯೊಳಗಿನ ಭಾಷೆಯಲ್ಲಿ to have ಎಂಬ ಕ್ರಿಯಾಪದದ ವರ್ತಮಾನ ಭೂತಕಾಲಗಳ ಮುಂದೆ ನಿಶ್ಚಯಾರ್ಥದಲ್ಲಿಯೂ ನಿಷೇಧಾರ್ಥದಲ್ಲಿಯೂ got ಎಂಬ ಶಬ್ದವನ್ನು ಹಾಕುವ ವಾಡಿಕೆಯುಂಟು. Got ಇದು to get ಎಂಬ ಕ್ರಿಯಾಪದದ ಭೂತಕೃದ್ವಾಚಕವು. ಈ ಶಬ್ದದ ಅರ್ಥವು 'ದೊರಕಿಸಿದ'

ಎಂತ ಆಗುತ್ತದೆ; ಆದರೆ ಇದು to haveದ ಮುಂದೆ ಬರಲಾಗಿ ಇದರ ಅರ್ಥವೇ ಆಗುವದಿಲ್ಲ. To have ಮತ್ತು to have got ಇವುಗಳ ಅರ್ಥ 'ಬಳಿಯಲ್ಲಿರು' ಎಂತ ಆಗುತ್ತದೆ.

ಉದಾ: I *have* no corn,

ಅಥವಾ I *have* got no corn ನನ್ನ ಬಳಿಯಲ್ಲಿ ಕಾಳು ಇಲ್ಲ.

I *have* not Ráma's book,

ಅಥವಾ I *have* not got Ráma's book ನನ್ನ ಹತ್ತರ ರಾಮನ ಪುಸ್ತಕವಿಲ್ಲ.

೨೧. ಶಬ್ದಸಂಗ್ರಹ ೫.

Vir'tue	ಸದ್ಗುಣ.	Peo'ple	ಜನರು.
Vice	ದುರ್ಗುಣ.	A shep'herd[1]	ಕುರುಬ.
A pin	ಟಾಚಣಿ.	A nee'dle	ಸೂಜಿ.
Vir'tu-ous	ಸದ್ಗುಣವುಳ್ಳ.	Wick'ed	ದುಷ್ಟ.
Vi'cious[2]	ದುರಾಚಾರಿಯಾದ, ಕೆಟ್ಟ.	To re-ward'	ಇನಾಮು ಕೊಡು, ಪ್ರತಿಫಲ ಕೊಡು.
Use'ful	ಉಪಯೋಗವುಳ್ಳ.	Use'less	ಉಪಯೋಗವಿಲ್ಲದ, ನಿಷ್ಪ್ರಯೋಜಕ.
ಸಲಿಗೆಯುಳ್ಳ	in'ti-mate.	ನೀರಡಿಸಿದ	thirst'y.
ಹಸಿದ	hun'gry.	ಹಿಂಡು *v.* (ಆಕಳು, ಎಮ್ಮೆ) to give milk.	

ಭಾಷಾಂತರಪಾಠ ೫.

೨೨. 1. The sheep have *no* shepherd. 2. He has *no* sister. 3. Pure water has *no* taste. 4. You have *no* ruler. 5. You have many needles and pins. 6. This lamp has *no* oil. 7. Some flowers have *no* smell. 8. The barber has a sharp razor. 9. God rewards virtuous persons. 10. He punishes wicked people. 11. They have *no* horses. 12. I have *no* friends. 13. I have got *no* money. 14. I have *not*

[1] ಈ ಶಬ್ದದೊಳಗಿನ ಎರಡನೇ hದ ಉಚ್ಚಾರವಾಗುವದಿಲ್ಲ. ಇದನ್ನು 'ಶೆಪರ್ಡ್' ಎಂತ ಉಚ್ಚರಿಸಬೇಕು. [2] *Cious* ಮತ್ತು *tious* ಇವುಗಳ ಉಚ್ಚಾರ 'ಶಸ್' ಆಗುತ್ತದೆ.

got your pen-knife. 15. The rich merchant has *no* son. 16. You will get *no* profit. 17. This ink is use*less*. 18. I have got a piece of paper. 19. You have got many useful books. 20. You have got a wealthy neighbour.

೧. ಗುರುಗಳು ಕೆಟ್ಟ ಹುಡುಗರನ್ನು ಶಿಕ್ಷಿಸುತ್ತಾರೆ. ೨. ನನ್ನ ಹತ್ತರ ಟಾಚಣಿ ಇಲ್ಲ. ೩. ನನ್ನ ಹತ್ತರ ಟಾಚಣಿಗಳಿಲ್ಲ. ೪. ನಿಮ್ಮ ಮನೆಗೆ ದೊಡ್ಡ ಬಾಗಿಲುಗಳಿಲ್ಲ. ೫. ಅವನ ಹತ್ತರ ದೌತಿ ಇಲ್ಲ. ೬. ನನ್ನ ಹತ್ತರ ನಿನ್ನ ಅಂಗಿ ಇಲ್ಲ. ೭. ನನ್ನ ಹತ್ತರ ನಿನ್ನ ಹಳೇ ಕೊಡೆ ಇಲ್ಲ. ೮. ನಿನ್ನ ಹತ್ತರ ನನ್ನ ಹೊಸ ಪುಸ್ತಕ ಉಂಟು. ೯. ಅವನಲ್ಲಿ ಐದು ಆಕಳುಗಳುಂಟು. ೧೦. ಅವನ ಹತ್ತರ ನಿನ್ನ ಪುಸ್ತಕಗಳಿಲ್ಲ. ೧೧. ಅವಳ ಹತ್ತರ ಸೂಜಿಗಳಿಲ್ಲ. ೧೨. ಅವನು ನಮ್ಮ ಜೀವದ[1] ಗೆಳೆಯನಲ್ಲ. ೧೩. ಅವನು ನಂಬಿಕೆಯುಳ್ಳ ಸೇವಕನಲ್ಲ. ೧೪. ಇದು ಅವನ ಅಂಗಡಿಯಲ್ಲ. ೧೫. ಆ ಗಿಡಕ್ಕೆ ಎಲೆಗಳಿಲ್ಲ. ೧೬. ಅವನಿಗೆ ಹೆಣ್ಣುಮಕ್ಕಳಿಲ್ಲ. ೧೭. ಆ ಬಡ ಮನುಷ್ಯನಿಗೆ ಗುಡಸಲಿಲ್ಲ. ೧೮. ಆ ಮನೆಗೆ ಗಟ್ಟಿಯಾದ ಗೋಡೆಗಳಿಲ್ಲ. ೧೯. ಅದಕ್ಕೆ ದೊಡ್ಡ ಕಿಡಿಕಿಗಳಿಲ್ಲ. ೨೦. ಆ ಆಕಳು ಹಿಂಡುವದಿಲ್ಲ[2]. ೨೧. ಆ ಕುರುಡು ಹುಡುಗನಿಗೆ ತಂದೆತಾಯಿಗಳಿಲ್ಲ. ೨೨. ನಾನು ಹಸಿದಿಲ್ಲ. ೨೩. ಅವನು ನೀರಡಿಸಿದ್ದಿಲ್ಲ. ೨೪. ಸದ್ಗುಣಗಳುಳ್ಳವರು ಪಾಪಮಾಡುವದಿಲ್ಲ. ೨೫. ಅವನಿಗೆ ಇನಾಮು ಸಿಗಲಿಕ್ಕಿಲ್ಲ.

೬ನೇ ಪಾಠ.

ಪ್ರಶ್ನಾರ್ಥಕ ವಾಕ್ಯಗಳು

Interrogative Sentences.

೨೩. ಪ್ರಶ್ನವನ್ನು ಕೇಳುವದಾದರೆ, ವಾಕ್ಯದೊಳಗೆ ಸಹಾಯಕ್ರಿಯಾಪದವಿರಲು ಅದನ್ನು ಕರ್ತೃಪದದ ಪೂರ್ವದಲ್ಲಿಟ್ಟು ವಾಕ್ಯದ ಕೊನೆಗೆ ಪ್ರಶ್ನಚಿಹ್ನವನ್ನು ಹಾಕಬೇಕು.

ಉದಾ: *Is* he coming? ಅವನು ಬರುತ್ತಿದ್ದಾನೋ? (ಅವನು ಬರುತ್ತಾನೋ?)

Was he coming? ಅವನು ಬರುತ್ತಿದ್ದನೋ?

Will he come? ಅವನು ಬರುವನೋ?

[1] Intimate. [2] Is *not* in milk.

೨೪. ವರ್ತಮಾನಕಾಲದಲ್ಲಿಯೂ ಭೂತಕಾಲದಲ್ಲಿಯೂ ಸಹಾಯಕ್ರಿಯಾಪದವಿರುವದಿಲ್ಲಾದಕಾರಣ, ಅಂಥಲ್ಲಿ do ಎಂಬ ಸಹಾಯಕ್ರಿಯಾಪದವನ್ನು ಪ್ರಯೋಗಿಸಿ ಅದನ್ನು ಕರ್ತೃಪದದ ಹಿಂದೆ ಇಡಬೇಕು.

ಉದಾ: *Does* he come? ಅವನು ಬರುತ್ತಾನೋ?
Did he come? ಅವನು ಬಂದನೋ?

೨೫. ವರ್ತಮಾನ ಭೂತಕಾಲಗಳಲ್ಲಿ to be, to have ಎಂಬ ಕ್ರಿಯಾಪದಗಳನ್ನು, ಪ್ರಶ್ನ ಕೇಳತಕ್ಕದ್ದಿದ್ದಾಗ, ಕರ್ತೃಪದದ ಪೂರ್ವದಲ್ಲಿಡಬೇಕು.

ಉದಾ: *Is* he happy? ಅವನು ಸೌಖ್ಯದಿಂದಿದ್ದಾನೋ?
Had he a son? ಅವನಿಗೆ ಮಗನಿದ್ದನೋ?

೨೬. ಪ್ರಶ್ನಕ್ಕೆ ಹೌದು ಎಂಬ ಉತ್ತರವಿರಲಾಗಿ yes[1] ಅನ್ನಬೇಕು; ಇಲ್ಲ, ಅಲ್ಲ ಎಂಬದಿರಲಾಗಿ no ಅನ್ನಬೇಕು. ಇಂಥ ಸ್ಥಳಗಳಲ್ಲಿ no ಎಂಬದು ಕ್ರಿಯಾವಿಶೇಷಣವಿದ್ದು ಅದರ ಅರ್ಥವು ಇಲ್ಲ, ಅಲ್ಲ ಎಂತ ಆಗುತ್ತದೆ. ಆದರೆ ಹಿಂದಿನ ನಾಲ್ಕು ಪಾಠಗಳಲ್ಲಿ ಹೇಳಿದ no ಎಂಬ ಶಬ್ದವು ವಿಶೇಷಣವು.

೨೭. ಕನ್ನಡದಂತೆ ಇಂಗ್ಲಿಷದಲ್ಲಿ ಪ್ರಶ್ನಗಳನ್ನು ನಾಲ್ಕು ವಿಧವಾಗಿ ಪ್ರಯೋಗಿಸುವರು.— ೧. ಸುದ್ದಿ ತಿಳುಕೊಳ್ಳುವದಕ್ಕಾಗಿ; ೨. ಬೇರೊಬ್ಬನ ಸಮ್ಮತಿ ಪಡಕೊಳ್ಳುವದಕ್ಕಾಗಿ; ೩. ಅಪ್ಪಣೆ ಕೇಳುವದಕ್ಕಾಗಿ; ೪. ಬಿನ್ನಹ ಮಾಡಿಕೊಳ್ಳುವದಕ್ಕಾಗಿ, ಅಥವಾ ಯಾವದಾದರೊಂದು ಕೆಲಸ ಮಾಡು ಎಂದು ಹೇಳುವದಕ್ಕಾಗಿ.

ಉದಾ:

೧. Is he swimming? ಅವನು ಈಸುತ್ತಿದ್ದಾನೋ?
೨. Are we not mortal? ನಾವು ಮರಣಾಧೀನರಲ್ಲವೋ?
೩. Shall I go? ನಾನು ಹೋಗಲಾ?
೪. Will you kindly go there? ದಯಮಾಡಿ ಅಲ್ಲಿಗೆ ಹೋಗುತ್ತೀರಾ?

[1] Yes ಎಂಬದು ಕ್ರಿಯಾವಿಶೇಷಣವು.

☞ ನಾಲ್ಕನೇ ಕಾರ್ಯವನ್ನು ಕುರಿತು ಪ್ರಶ್ನಮಾಡುವಾಗ ಇಂಗ್ಲಿಷದಲ್ಲಿ ಭವಿಷ್ಯತ್ಕಾಲವನ್ನು ಹಾಕುತ್ತಾರೆ; ಆದರೆ ಕನ್ನಡದಲ್ಲಿ ಆ ಕ್ರಿಯೆಯನ್ನು ಕೂಡಲೆ ಮಾಡುವದಾದರೆ ವರ್ತಮಾನಕಾಲವೂ, ಮುಂದೆ ಮಾಡುವದಾದರೆ ಭವಿಷ್ಯತ್ಕಾಲವೂ ಬರುತ್ತದೆ. ಉದಾ:

Will you light this lamp? ಇದ್ನು ದೀಪಾ ಹಚ್ಚುತ್ತೀಯೆಯಾ?
Will you come to-morrow? ನಾಳೆಗೆ ಬರುವಿಯೆಯಾ?

೨೮. ಶಬ್ದಸಂಗ್ರಹ ೬.

Fresh[1]	ತಾಜಾ, ನೂತನ.	Right [II]	೧. ಸಮ, ಸರಿ; ೨. ನ್ಯಾಯ; ೩. ಬಲಗಡೆಯು.
Stale	ತಂಗಳ.	Wrong	೧. ಅಯೋಗ್ಯವಾದ; ೨. ತಪ್ಪಾದ; ೩. ಅನ್ಯಾಯ.
De-li′ci-ous	ಅತ್ಯಂತ ರುಚಿಕರವಾದ.	A sea′son (ಸೀಜನ್)	ಋತು.
Cold	೧. ತಣ್ಣಗಾದ; ೨. ನೆಗಡಿ; ೩. ಚಳಿ, ಶೀತ.	The spring	ವಸಂತಕಾಲ.
		The sum′mer	ಬೇಸಿಗೆ.
Cold′ness	ಚಳಿ, ಶೈತ್ಯ, ತಂಪು.	The rain′y sea′son	ಮಳೆಗಾಲ.
Warm	ಬೆಚ್ಚಗೆ, ಬಿಸಿ.	The win′ter	ಚಳಿಗಾಲ.
Luke′warm [III]	ಉಗುರುಬೆಚ್ಚಗಾದ.	A year [VI]	ವರುಷ.
Warmth	ಕಾವು.	A plate, A dish	ಹರಿವಾಣ, ತಾಟು.
Heat	ಉಷ್ಣತೆ, ತಾಪ, ಸೆಕೆ.		
A glass	ಸಣ್ಣ ಕಾಜಿನ ಪಾತ್ರೆ.	A dish	ತುಂಬಿದ ತಾಟು, ಪಕ್ವಾನ್ನ.
ಸುಖ, ಆನಂದ	plea′sure[2].	ಮಾವಿನ ಹಣ್ಣು	a man′go.
ನೋವು, ದುಃಖ	pain.	ವಸ್ತು, ಪದಾರ್ಥ, ಮಾತು	a thing.
ಹಿಕ್ಕು, ಬಾಚು	to comb (ಕೋಮ್).	ಚಿವುಟು	to pinch.
ಬಯ್ಯು	to a-buse′.	ಸೋಲಿಸು.	to de-feat′.

1) *Fresh* water ಸಿಹಿ ನೀರು.
2) ಶಬ್ದದ ಅಂತ್ಯದಲ್ಲಿ, -sure ಎಂಬದರ ಉಚ್ಚಾರ ಬಹುತರವಾಗಿ 'ಜರ್' ಆಗುತ್ತದೆ.

ಭಾಷಾಂತರಪಾಠ ೬.

೨೯. 1. *Are* not our bodies warm? 2. *Has* your brother many books? 3. *Is* not the heat of summer great? 4. *Is* it a large cellar? 5. *Is* that your sister's thimble? 6. *Is* he a disobedient son? 7. *Will* you *take* this glass of milk? 8. *Do* you *take* tea? 9. *Do* you *know* that man? 10. *Does* he *like* milk? 11. *Will* you *light* the candle? 12. *Does* not your mother *like* coffee? 13. *Do* you *like* this dish? 14. *Is* it not a delicious dish? 15. *Are* you ill? 16. *Will* you *mend* this pen? 17. *Were* they not *writing?* 18. *Is* not spring one of[1] the four seasons of the year? 19. *Do* we not *drink* fresh water? 20. *Do* not children *like* sugar? 21. *Is* not sea-water salt? 22. *Do* you *like* the cold of winter? 23. *Is* the water lukewarm? 24. *Have* you no sister? 25. The bodies of living animals are warm.

೧. ನೀನು ಮಾತಾಡುತ್ತಿದ್ದಿಲ್ಲವೋ? ೨. ಅವನನ್ನು ಕರೆಯುತ್ತೀಯಾ? ೩. ಆ ಲೆಕ್ಕಣಿಕೆಯನ್ನಷ್ಟು ತರುತ್ತೀಯಾ? ೪. ಅವನು ಬರಲಿಕ್ಕಿಲ್ಲವೋ? ೫. ನಿನಗೆ ಈ ಮಾವಿನ ಹಣ್ಣುಗಳು ಸೇರುವದಿಲ್ಲವೋ? ೬. ಆ ಹಾಲು ಆರಿಲ್ಲವೋ? ೭. ನನಗೆ ಬಹಳ ಸುಖವಾಗುತ್ತದೆ. ೮. ನಿನಗೆ ಮಜ್ಜಿಗೆ ಸೇರುವದಿಲ್ಲವೋ? ೯. ನಾನು ಓದುತ್ತಿದ್ದಿಲ್ಲವೋ? ೧೦. ನೀನು ಆಡುತ್ತಿದ್ದಿಲ್ಲವೋ? ೧೧. ಅವನ ಮುಂಡಾಸವು ಹಸುರು ಬಣ್ಣದ್ದಿದ್ದಿಲ್ಲವೋ? ೧೨. ಅವನು ನಿನ್ನ ಕೂಡ ಹಗೆತನ ಮಾಡುತ್ತಾನೋ? ೧೩. ನೀನು ಹೋಗುತ್ತಿದ್ದಿಲ್ಲವೋ? ೧೪. ಆ ಹೊಳೆಯು ಆಳವಾಗಿದೆಯೋ? ೧೫. ಮದ್ರಾಸವು ದೊಡ್ಡ ಪಟ್ಟಣವೋ? ೧೬. ಅವನ ಬಳಿಯಲ್ಲಿ ಚೀಲವಿಲ್ಲವೋ? ೧೭. ಆ ಕದಕ್ಕೆ ಹಿಡಿಕಿ ಇಲ್ಲವೋ? ೧೮. ನಿನ್ನ ಬಳಿಯಲ್ಲಿ ಗಡಿಯಾಲವಿಲ್ಲವೋ? ೧೯. ನಿನ್ನ ಕೈಗಳು ತಣ್ಣಗವೆ. ೨೦. ನಿನಗೆ ತಾಜಾ ಹಾಲು ಸಿಗುತ್ತವೋ? ೨೧. ನಿನಗೆ ಈ ವಸ್ತು[2] ಬೇಕೋ? ೨೨. ನಿನಗೆ

[1] Of ಎಂಬದಕ್ಕೆ ಒಮ್ಮೊಮ್ಮೆ ಅಲ್ಲಿ, ಒಳಗಿನ ಎಂಬ ಅರ್ಥವಾಗುತ್ತದೆ. [2] ಒಮ್ಮೊಮ್ಮೆ ವಸ್ತು ಅಥವಾ ಮಾತು ಎಂಬ ಶಬ್ದವನ್ನು ಬಿಟ್ಟುಬಿಟ್ಟು ಇಂಗ್ಲಿಷದಲ್ಲಿ ನಪುಂಸಕಲಿಂಗದ ಸರ್ವನಾಮವನ್ನು ಹಾಕಿದರೂ ಸಾಗುತ್ತದೆ; ಕನ್ನಡದಲ್ಲಿ ಸಹ ಈ ರೀತಿಯು ಎಷ್ಟೋ ಕಡೆಯಲ್ಲಿ ಕಂಡುಬರುತ್ತದೆ.

ಹೀಗೆ ತೋರುತ್ತದೋ? ೨೩. ಅವನಿಗೆ ಈ ಮಾತು ಗೊತ್ತದೆಯೋ? ೨೪. ನಿನಗೆ ಈ ಮಾತು ಸರಿಬರುತ್ತದೋ? ೨೫. ನನಗೆ ನೆನಪಿಲ್ಲ. ೨೬. ಆಕೆಯು ತನ್ನ ಕೂದಲಾ ಹಿಕ್ಕಿಕೊಳ್ಳುತ್ತಿದ್ದಾಳೆ. ೨೭. ಅವನು ಬರೆಯುತ್ತಿದ್ದಿಲ್ಲವೋ? ೨೮. ನನಗೆ ಇಂಥ ಮಾತು[1] ಸರಿಬರುವದಿಲ್ಲ. ೨೯. ಇಂಥ ಹುಳಿ ಹಣ್ಣು ನೀನು ತಿನ್ನುವಿಯಾ? ೩೦. ಈ ಮಾತು ಅನ್ಯಾಯವಾದದ್ದು.

೭ನೇ ಪಾಠ.

ಪ್ರಶ್ನಾರ್ಥಕಸರ್ವನಾಮಗಳು.

Interrogative Pronouns.

೩೦. ಇಂಗ್ಲಿಷದಲ್ಲಿ ಪ್ರಶ್ನಾರ್ಥಕಸರ್ವನಾಮಗಳು ಮೂರು:—
Who[2] ಯಾರು; ದ್ವಿ. Whom ಯಾರನ್ನು; ಷ. Whose ಯಾರ.
Which[2] ಯಾವ.
What[2] ಏನು, ಯಾತರ, ಎಂಥ, ಯಾವ, ಎಲ್ಲಿಯ.

೩೧. ಈ ಸರ್ವನಾಮಗಳು ಯಾವಾಗಲೂ ವಾಕ್ಯದ ಆರಂಭದಲ್ಲಿರುತ್ತವೆ.
ಉದಾ: *What* are you doing? ನೀನು ಏನು ಮಾಡುತ್ತೀ?

ಈ ವಾಕ್ಯದಲ್ಲಿ what ಎಂಬದು are doing ಎಂಬ ಕ್ರಿಯಾಪದದ ಕರ್ಮ ಪದವು.

೩೨. Who ಎಂಬ ಶಬ್ದವನ್ನು ಇವರು ಯಾರು ಎಂದು ಕೇಳುವದಕ್ಕಾಗಲಿ, ಅವರನ್ನು ಕುರಿತು ಏನಾದರೂ ವರ್ತಮಾನ ತಿಳುಕೊಳ್ಳುವದಕ್ಕಾಗಲಿ ಪ್ರಯೋಗಿಸುವರು. ಇದರ ಮುಂದೆ ನಾಮಪದವು ಬರುವದಿಲ್ಲ.
ಉದಾ: *Who* is this man? ಈ ಮನುಷ್ಯನು ಯಾರು?

---

[1] ಇಲ್ಲಿ ಮಾತು ಎಂಬ ಶಬ್ದದ ಅರ್ಥವು ಕೆಲಸ, ಸಂಗತಿ ಎಂತ ಮಾಡಿದರೆ, matter, business, ಇಲ್ಲವೆ affair ಎಂಬ ಶಬ್ದವನ್ನು ಪ್ರಯೋಗಿಸಬೇಕು.

[2] Who ಎಂಬ ಶಬ್ದದೊಳಗಿನ hದ ಉಚ್ಚಾರ ಸ್ವಲ್ಪ ಸ್ಪಷ್ಟವಾಗುತ್ತದೆ; ಆದರೆ ಉಳಿದ ಎರಡು ಶಬ್ದಗಳೊಳಗಿನ hದ ಉಚ್ಚಾರವಾಗುವದಿಲ್ಲ.

೩೩. ನಿಯಮಿತ ಸಂಖ್ಯೆಯೊಳಗಿನ ಒಂದು ಅಥವಾ ಹೆಚ್ಚು ವ್ಯಕ್ತಿಗಳ ವಿಷಯವಾಗಿ ಮಾತಾಡುವದಾದರೆ, which ಎಂಬ ಶಬ್ದವನ್ನು ಪ್ರಯೋಗಿಸಬೇಕು. ಇದರ ಮುಂದೆ ಒಮ್ಮೊಮ್ಮೆ ನಾಮಪದವು ಬರುತ್ತದೆ, ಒಮ್ಮೊಮ್ಮೆ ಬರುವದಿಲ್ಲ. ಉದಾ:

Which man is it? (ಈ ಮನುಷ್ಯರಲ್ಲಿ) ಯಾವನು?

Which is your house? (ಈ ಮನೆಗಳಲ್ಲಿ) ನಿಮ್ಮ ಮನೆ ಯಾವದು?

೩೪. What ಎಂಬ ಶಬ್ದದ ಮುಂದೆ ನಾಮಪದವು ಇಲ್ಲದಿದ್ದರೆ, ಅದು ನಪುಂಸಕಲಿಂಗ ಏಕವಚನದಲ್ಲಿರುತ್ತದೆ. ಮುಂದೆ ನಾಮಪದವು ಇದ್ದರೆ, ಆ ನಾಮಪದದ ಲಿಂಗವಚನಗಳು ಅದಕ್ಕೆ ಹತ್ತುತ್ತವೆ. What ಎಂಬ ಶಬ್ದವನ್ನು ಯಾವನಾದರೊಬ್ಬನ ಉದ್ಯೋಗವನ್ನಾಗಲಿ, ಗುಣ ಸ್ವಭಾವ ಸ್ವರೂಪಗಳ ವಿವರವನ್ನಾಗಲಿ ತಿಳುಕೊಳ್ಳುವದಕ್ಕಾಗಿ ಉಪಯೋಗಿಸುತ್ತಾರೆ. ಉದಾ:

What is he? ಅವನ ಉದ್ಯೋಗವು ಯಾವದು?

What poem is this? ಇದು ಎಂಥ (ಅಥವಾ, ಯಾವ) ಕಾವ್ಯವು?

What boys are these? ಈ ಹುಡುಗರು ಎಲ್ಲಿಯವರು? ಯಾವ ಹುಡುಗರಿವರು?

೩೫. *Which* man is this? ಮತ್ತು *What* man is this? ಎಂಬ ವಾಕ್ಯಗಳೊಳಗಿನ ಮೊದಲನೇ ವಾಕ್ಯದಲ್ಲಿ, which ಎಂಬ ಶಬ್ದದಿಂದ ಕೇಳುವವನಿಗೆ ಗೊತ್ತಿದ್ದಂಥ ಕೆಲವು ಮನುಷ್ಯರೊಳಗೆ ಇವನೊಬ್ಬನಿದ್ದಾನೆ, ಎಂಬ ಅರ್ಥವು ಹೊರಡುತ್ತದೆ. ಎರಡನೇ ವಾಕ್ಯದಲ್ಲಿ what ಎಂಬ ಶಬ್ದದಿಂದ 'ಆ ಮನುಷ್ಯನ ಗುರುತು ಕೇಳುವವನಿಗೆ ಇಲ್ಲೇ ಇಲ್ಲ, ಇವನಿಗೆ ಅವನ ವಿಷಯವಾಗಿ ಏನಾದರೂ ತಿಳುಕೊಳ್ಳಬೇಕಾಗಿದೆ' ಎಂಬ ಅರ್ಥವಾಗುತ್ತದೆ.

೩೬. ಶಬ್ದಸಂಗ್ರಹ ೭.

A cler'gy-man	ಧರ್ಮೋಪದೇಶಕ, ಪಾದ್ರಿ.	A priest	ಆಚಾರ್ಯ, ಉಪಾಧ್ಯಾಯ.
A law'yer	ಕಾಯಿದೆ ಬಲ್ಲವ, ವಕೀಲ.	An en'gin-eer"	೧. ಯಂತ್ರ ನಡಿಸುವವ; ೨. ಮನೆ, ಕೆರೆ ಕಾಲುವೆ ಪೂಲು ಮಾರ್ಗ ಮುಂತಾದವುಗಳನ್ನು ಕಟ್ಟಿಸುವ ವಿದ್ಯೆ ಬಲ್ಲವ.
A mu-si'cian	ವಾದ್ಯದವ, ಗಾಯಕ.	An of'fi-cer	ಕಾಮದಾರ, ಅಧಿಕಾರಸ್ಥ, ಉದ್ಯೋಗಸ್ಥ.

A clerk	ಕಾರಕೂನ.
A sculp'tor 1)	ಕಟೆಯುವವ.
An en-grav'er	ಕೆತ್ತುವವ, ಕೊರೆಯುವವ.
A cop'per-smith	ಕಂಚುಗಾರ, ತಾಂಬಟಿಗ.
A wri'ter	ಬರೆಯುವವ, ಲೇಖಕ.
A build'ing	ಮನೆ, ಇಮಾರತು, ಕಟ್ಟಡ.
A butch'er	ಕಟಕರವ.
A sta'tion-er	ಕಾಗದ ಮಸಿ ಮುಂತಾದವುಗಳನ್ನು ಮಾರುವವ.
A con-fec'tion-er	ಮಿಠಾಯಿಗಾರ, ಶೇವಡಿಗಾರ.
A frame	ಚೌಕಟ್ಟು.
Gloves	ಕೈಚೀಲಗಳು.
A sail'or	ನಾವಿಕ, ಅಂಬಿಗ.
A mill	ಬೀಸುವ ಕಲ್ಲು, —ಯಂತ್ರ.
A wa'ter-mill	ನೀರಿನ ಬಲದಿಂದ ತಿರುಗುವ ಯಂತ್ರ.
A wind'-mill	ಗಾಳಿಯಿಂದ ತಿರುಗುವ ಯಂತ್ರ.
An ar'chi-tect (ch=ಕ್)	ಶಿಲ್ಪಶಾಸ್ತ್ರ ಬಲ್ಲವ.
A cap'tain	ಕಪ್ತಾನ, ಹಡಗದ ಮುಖ್ಯಸ್ಥ.
A gro'cer	ಕಿರಾಣಿ ಅಂಗಡಿಕಾರ.
A join'er 2)	ಬಡಿಗ.
A black'smith, An i'ron-smith (ಅಯರ್ನ್ ಸ್ಮಿಥ್)	ಕಮ್ಮಾರ.
A sad'dler	ಜೀನಗಾರ.
A mil'ler	ಬೀಸುವವ.
A gla'zier (ಗ್ಲೇಜರ್)	ಕನ್ನಡಿ ಹಚ್ಚುವವ.
A lin'en-dra-per	ನಾರುಬಟ್ಟೆ ಮಾರುವವ.
A stone'-cut-ter	ಕಲ್ಲು ಕುಟ್ಟಿಗ.
A hand'ker-chief 3)	ಕೈವಸ್ತ್ರ, ಯುಲವಸ್ತ್ರ.
A per-fum'er	ಬುಕ್ಕಿಟ್ಟುಗಾರ.
A farm'er	ಒಕ್ಕಲಿಗ.
A boot	ಹರಡಿನ ಮೇಲೆ ಏರುವ ಜೋಡು.
A shoe	ಜೋಡು, ಮೆಟ್ಟಿ.
A la'bour-er	ಕೂಲಿಕಾರ, ಕೂಲಿಯವ.

1) Sculptor=ಕಟಿದು ಅಥವಾ ಕೆತ್ತಿ ಕಲ್ಲಿನ ಮೂರ್ತಿಗಳನ್ನಾಗಲಿ ಪ್ರತಿಮೆಗಳನ್ನಾಗಲಿ ತಯಾರು ಮಾಡುವವನು. Engraver=ಕಲ್ಲು ಲೋಹ ಮುಂತಾದ ಕಠಿಣ ಪದಾರ್ಥಗಳ ಮೇಲೆ ಅಕ್ಷರಗಳನ್ನಾಗಲಿ ಆಕೃತಿಗಳನ್ನಾಗಲಿ ನಕ್ಷೆಯನ್ನಾಗಲಿ ಕೊರೆಯುವವನು.

2) Carpenter ಬಡಿಗ; joiner ಕಟ್ಟಿಗೆಯ ಸೋಪಾನ, ಕಿಡಿಕಿ, ಪೆಟ್ಟಿಗೆ, ಕಪಾಟು ಮುಂತಾದ ಸಾಮಾನುಗಳನ್ನು ಮಾಡುವವನು.

3) ಈ ಶಬ್ದದೊಳಗಿನ *d* ವನ್ನು ಉಚ್ಚರಿಸಬಾರದು. ಇದೇ ಮೇರೆಗೆ handsome, Wednesday ಎಂಬ ಶಬ್ದಗಳೊಳಗಿನ *d* ದ ಉಚ್ಚಾರವಾಗುವದಿಲ್ಲ.

An art'ist [1]	ಉತ್ಕೃಷ್ಟ ಶಿಲ್ಪಿ.	A smith	ಕಮ್ಮಾರ, ಲೋಹದ ಕೆಲಸ ಮಾಡುವವ.
An art'i-san, A work'man	ಕೈಗಾರಿಕೆ ಕೆಲಸ ಮಾಡುವವ, ಪಂಚಾಳ.	A gold'smith	ಅಕ್ಕಸಾಲಿಗ, ಪತ್ತಾರ.
		A name	ಹೆಸರು.
ವೈದ್ಯ	a doc'tor, a phy-si'cian.	ಅಂಗಡಿಕಾರ	a shop'-keep-er.
ಗಿರಾಕಿ	a cus'tom-er.	ಉಪ್ಪಾರ	a brick'lay-er, a mason.
ಮೋಚಿಗಾರ	a shoe-'ma-ker.	ಬೆಸ್ತರವ, ಜಾಲಗಾರ	a fish'er-man.

ಭಾಷಾಂತರಪಾಠ ೭.

೩೭. 1. *Who* am I? 2. *What* is my name? 3. *Who* are you? 4. *Who* is he? 5. *Who* are these women? 6. *Who* is it? 7. *Which* woman is it? 8. *What* book is this? 9. *What* have you? 10. *What* do you say? 11. *What* was he doing? 12. *What* does a linen-draper sell? 13. He sells linen, gloves, handkerchiefs, etc.[2] 14. *What* does the joiner make? 15. He makes doors, window-frames, cupboards, etc. 16. Our miller has two mills,—a water-mill and a wind-mill. 17. Will your servant go to the grocer's shop? 18. I want some coffee, tea, and sugar. 19. *What* does a carpenter make? 20. He builds houses, bridges, ships, etc. 21. That young painter is a good artist. 22. *What* does a butcher sell? 23. *What* meat have we? 24. *Who* is that officer? 25. Is he the captain of the ship? 26. *What* ship is that? 27. *Which* of the cows gives no milk? 28. *Which* of

[1] ಚಿತ್ರಗಾರರು ಕಟೆಯುವ ಕೆಲಸ ಮಾಡುವವರು ಸಂಗೀತಗಾರರು ಮುಂತಾದವರಿಗೆ artists ಅನ್ನುತ್ತಾರೆ. ಬಡಿಗ, ಕಮ್ಮಾರ, ಅಕ್ಕಸಾಲಿಗ ಮುಂತಾದ ಸಾಧಾರಣ ತರದ ಕೆಲಸ ಮಾಡುವವರಿಗೆ artisans ಅನ್ನುತ್ತಾರೆ. ಯಾವದಾದರೂ ಕೈಗಾರಿಕೆಯ ಸಾದಾ ಕೆಲಸ ಮಾಡುವವರಿಗೆ workmen ಅನ್ನುತ್ತಾರೆ; ಈ ಶಬ್ದವನ್ನು ಕೂಲಿಕಾರರಿಗೆ ಸಹ ಹಚ್ಚುವರು.

[2] ಇದು ಲ್ಯಾಟಿನ್ ಭಾಷೆಯೊಳಗಿನ ಎಟ್ ಸೀಟಿರಾ (*et cœtera*) ಎಂಬದರ ಸಂಕ್ಷೇಪವು; ಇದಕ್ಕೆ and other things 'ಮುಂತಾದವುಗಳು' ಎಂಬ ಅರ್ಥವು.

these buildings do you like? 29. *Which* of these boys was abusing you? 30. *Who* makes boots and shoes? 31. *What* do horses and cows eat? 32. *What* do tailors make? 33. *What* are those men, women and children doing? 34. *Which* boy was reading that bad book? 35. A stationer sells paper, ink, inkstands, pencils, etc.

೧. ನೀನು ಯಾರ ಮಗನು? ೨. ನಿನ್ನ ಎಡಗೈ ಯಾವದು, ಬಲಗೈ ಯಾವದು? ೩. ಮೊಚ್ಚೆಗಾರನು ಜೋಡು (ತಯಾರು) ಮಾಡುತ್ತಾನೆ. ೪. ನಮ್ಮ ಗವಳಿಗನು ತಾಜಾ ಹಾಲು ತರುತ್ತಾನೆ. ೫. ತೋಟಿಗನ ಹತ್ತರ ಚಂದವಾದ ಹೂಗಳುಂಟು. ೬. ಈ ಗಿಡ್ಡಂಗಿಯ ಬಣ್ಣ ನಿನ್ನ ಮನಸಿಗೆ ಬರುತ್ತದೆಯೋ? ೭. ಅವನು ಒಳ್ಳೇ ವೈದ್ಯನಿದ್ದಾನೋ? ೮. ತೋಟದ ಬಾಗಿಲವನ್ನು ಯಾರು ತೆಗೆಯುವರು[1]? ೯. ಈ ಹೂಗಳಲ್ಲಿ ಯಾವದು ನಿನ್ನ ಮನಸಿಗೆ ಬರುತ್ತದೆ? ೧೦. ಆ ಹುಡುಗರಲ್ಲಿ ಯಾರ್ಯಾರು ಈಸುತ್ತಿದ್ದರು? ೧೧. ಆ ಅಂಗಡಿಕಾರನಿಗೆ ಗಿರಾಕಿಗಳು ಬಹಳ. ೧೨. ಈ ಜೋಡುಗಳಲ್ಲಿ ನಿನ್ನದು ಯಾವದು? ೧೩. ನಿಮ್ಮ ಪ್ರೀತಿ ಯಾವ ಪಕ್ಷಿಗಳ ಮೇಲೆ? ೧೪. ಯಾವ ಗಿಡಗಳಿಗೆ ದೊಡ್ಡ ದೊಡ್ಡ ಎಲೆಗಳಾಗುತ್ತವೆ? ೧೫. ಆ ಕೆರೆಯ ಹೆಸರೇನು? ೧೬. ನಿಮ್ಮ ಅಣ್ಣನ ಸ್ನೇಹಿತನ ಹೆಸರೇನು? ೧೭. ಉಪ್ಪಾರರು ಏನು ಮಾಡುತ್ತಿದ್ದರು? ೧೮. ಈ ಮನೆಯ ಎತ್ತರವೆಷ್ಟು? ೧೯. ಈ ಕೈಚೀಲಗಳು ಯಾರವು? ೨೦. ಅವನು ಏನು ಕೇಳುತ್ತಾನೆ? ೨೧. ಇದು ಎಂಥ ಕಟ್ಟಿಗೆ? ೨೨. ನನ್ನ ಪುಸ್ತಕಗಳಲ್ಲಿ ಯಾವದು ನಿನ್ನ ಮನಸಿಗೆ ಬರುತ್ತದೆ? ೨೩. ಕಟಕರವನು ಮಾಂಸವನ್ನು ಮಾರುತ್ತಾನೆ. ೨೪. ಜಾಲಗಾರನು ಮೀನುಗಳನ್ನು ಹಿಡಿದು ಮಾರುತ್ತಾನೆ. ೨೫. ನಿಮ್ಮ ಮಕ್ಕಳಿಗೆ ಯಾರು ಕಲಿಸುತ್ತಾರೆ?

[1] ತೆಗೆ = to open.

೮ನೇ ಪಾಠ.

ಪ್ರಶ್ನಾರ್ಥಕಕ್ರಿಯಾವಿಶೇಷಣಗಳು.

Interrogative Adverbs.

೩೮. ಪ್ರಶ್ನಾರ್ಥಕಕ್ರಿಯಾವಿಶೇಷಣಗಳು ಮುಖ್ಯವಾಗಿ ಐದು ಅವು ಯಾವವೆಂದರೆ—When[1] ಯಾವಾಗ, ಎಂದು; how ಹ್ಯಾಗೆ; where[1] ಎಲ್ಲಿ, ಎತ್ತ; why ಅಥವಾ wherefore ಯಾಕೆ, ಏನು ಕಾರಣ; whence[1] ಎಲ್ಲಿಂದ.

೩೯. ಪ್ರಶ್ನಾರ್ಥಕಸರ್ವನಾಮಗಳಂತೆ ಈ ಶಬ್ದಗಳು ಯಾವಾಗಲೂ ವಾಕ್ಯದ ಆರಂಭದಲ್ಲಿರುತ್ತವೆ. ಉದಾ:

When will he come? ಅವನು ಯಾವಾಗ ಬರುವನು?
Whence did she bring it? ಆಕೆಯು ಅದನ್ನು ಎಲ್ಲಿಂದ ತಂದಳು?

ಈ ಶಬ್ದಗಳನ್ನು ಪ್ರಯೋಗಿಸುವಾಗ ೨೩ನೇ, ೨೪ನೇ, ೨೫ನೇ ಕಲಮುಗಳೊಳಗಿನ ನಿಯಮಗಳನ್ನು ಅನುಸರಿಸಬೇಕು.

೪೦. ಶಬ್ದಸಂಗ್ರಹ ೮.

To rise	೧. ಮೂಡು; ೨. ಏಳು.	A boat	ದೋಣಿ, ನಾವೆ.
To set	ಮುಳುಗು.	A bas'ket	ಬುಟ್ಟಿ.
A ward'-robe	ಅರಿವೆ ಅಂಚಡಿಗಳನ್ನು ಇಡುವ ಕಪಾಟು.	A meal	ಊಟ.
		Sup'per	ರಾತ್ರೀ ಊಟ.
Tif'fin, lunch'eon[2]	ಫಲಾಹಾರ, ಉಪಾಹಾರ.	To sup	ರಾತ್ರೀ ಊಟ ಮಾಡು.

[1] ಈ ಶಬ್ದಗಳೊಳಗಿನ h ವನ್ನು ಉಚ್ಚರಿಸುವದಿಲ್ಲ.

[2] Tiffin ಎಂಬ ಶಬ್ದವನ್ನು ಮಧ್ಯಾಹ್ನದಲ್ಲಿ ಮಾಡುವ ಫಲಾಹಾರಕ್ಕೆ ಮಾತ್ರ ಹಚ್ಚುತ್ತಾರೆ. ಆದರೆ luncheon ಎಂಬದನ್ನು ಬೇಕಾದಾಗ ಮಾಡುವ ಉಪಾಹಾರಕ್ಕೆ ಹಚ್ಚಬಹುದು.

ಅನ್ನು	to say.
ಎಷ್ಟು	how ma'ny [1]. / how much.
ಮುಂಜಾನೆಯ ಊಟ	break'fast.
ಮುಂಜಾನೆಯ ಊಟ ಮಾಡು	to break'fast.
ತಯಾರಾದ, ಸಿದ್ಧವಾದ	rea'dy.
ಮಧ್ಯಾಹ್ನದ ಊಟ	din'ner.
ಮಧ್ಯಾಹ್ನದ ಊಟ ಮಾಡು	to dine.

ಭಾಷಾಂತರಪಾಠ ೮.

೪೧. 1. *When* does the sun rise? 2. *When* does it [2] set? 3. *Where* are you going? 4. *Where* does your brother live? 5. *When* do you take your meals? 6. *Whose* stick is this? 7. *Why* do you not learn your lesson? 8. *Where* is your ward-robe? 9. *How* are you? 10. *How* do you know that? 11. *When* does your barber come? 12. *When* will you do it? 13. *Whence* do they come? 14. *Wherefore* do you rejoice? 15. *Why* do you run? 16. *Why* do you say so? 17. *Where* shall we play? 18. *How* is that? 19. Are you hungry? 20. *Where* is he? 21. *Where* do you live? 22. You are right [3]. 23. Will you not see those beautiful flowers? 24. *Where* do you keep your clothes? 25. *Where* shall I place this basket?

೧. ನೀನು ನಿನ್ನ ರೊಕ್ಕಾ ಎಲ್ಲಿ ಇಡುತ್ತೀ? ೨. ನೀನು ಎಲ್ಲಿ ಇದ್ದಿ? ೩. ನಿಮಗೆ ಎಷ್ಟು ಮಂದಿ ಮಕ್ಕಳು? ೪. ಅವನು ತನ್ನ ಮನೆಯನ್ನು ಯಾಕೆ ಮಾರುತ್ತಾನೆ? ೫. ನೀನು ಸಿದ್ಧನಾಗಿರುವಿಯಾ? ೬. ಇದು ಸರಿಯಾಗಿದೆಯೋ? ೭. ನೀವು ಮುಂಜಾನೆ ಯಾವಾಗ ಊಟಮಾಡುತ್ತೀರಿ? ೮. ನಿನ್ನ (ಮಧ್ಯಾಹ್ನದ) ಊಟ ಸಿದ್ಧವಾಗಿಲ್ಲ. ೯. ನೀವು ಯಾಕೆ ಬರುವದಿಲ್ಲ?

---

[1] How many ಎಂಬದು ಸಂಖ್ಯೆಯನ್ನೂ, how much ಎಂಬದು ಪರಿಮಾಣವನ್ನೂ ತೋರಿಸುತ್ತವೆ.

[2] ಕನ್ನಡದಂತೆ ಇಂಗ್ಲಿಷದಲ್ಲಿ sun ಸೂರ್ಯ ಎಂಬ ಶಬ್ದವನ್ನು ಪುಲ್ಲಿಂಗದಲ್ಲಿ ಉಪಯೋಗಿಸುವದು ಬಹಳ; ಆದರೆ ಒಮ್ಮೊಮ್ಮೆ ಅದನ್ನು ನಪುಂಸಕಲಿಂಗದಲ್ಲಿ ಸಹ ಪ್ರಯೋಗಿಸುವರು.

[3] ನೀವು ಹೇಳುವಂಥಾದು ಅಥವಾ ಮಾಡುವಂಥಾದು ಸರಿಯಾಗಿದೆ.

೧೦. ನಿಮ್ಮಲ್ಲಿ ಎಷ್ಟು ಚಿಗರಿಗಳುಂಟು? ೧೧. ನಿನಗೆ ಎಷ್ಟು ಗಿರಾಕಿಗಳು ಬರುತ್ತವೆ? ೧೨. ನಿನ್ನ ಹತ್ತರ ಎಷ್ಟು ಎಣ್ಣೆ ಅದೆ? ೧೩. ನೀನು ಬರುವದಿಲ್ಲವೋ? ೧೪. ನೀನು ಯಾಕೆ ಮಾತಾಡುವದಿಲ್ಲ? ೧೫. ಆತನು ನಿನ್ನ ತಂದೆಯೋ? ೧೬. ನೀನು ದೀಪಗಳನ್ನು ಯಾಕೆ ಹಚ್ಚುವದಿಲ್ಲ? ೧೭. ನಮ್ಮ ಗವಳಿಗನಲ್ಲಿ ಎಷ್ಟು ಎಮ್ಮೆಗಳುಂಟು? ೧೮. ಅವನು ಏನು ಅನ್ನುತ್ತಾನೆ? ೧೯. ಅವರು ಯಾವಾಗ ಸಿದ್ಧರಾಗುವರು? ೨೦. ನನ್ನ ಮಗನ ಅರಿವೆಗಳು ಸ್ವಚ್ಛವಿಲ್ಲವೋ? ೨೧. ಈ ಮಾತು ನಿನ್ನ ಮನಸಿಗೆ ಹ್ಯಾಗೆ ಬರುತ್ತದೆ? ೨೨. ನಿನ್ನ ತಂದೆತಾಯಿಗಳು ಎಲ್ಲಿ ಇರುತ್ತಾರೆ? ೨೩. ನನ್ನ ಅಂಗಿ ಎಲ್ಲಿ ಅದೆ? ೨೪. ಆ ವಕೀಲನ ಮನೆ ಎಲ್ಲಿ ಅದೆ? ೨೫. ಆ ಹಡಗವು ಎಲ್ಲಿಂದ ಬರುತ್ತಾ ಇದೆ?

೯ನೇ ಪಾಠ.

ಚತುರ್ಥಿ.

Dative Case.

೪೨. ನಾಮಪದದ ಹಿಂದೆ to ಅಥವಾ for ಎಂಬ ಅವ್ಯಯವು ಬಂದರೆ, ಆ ನಾಮಪದಕ್ಕೆ ಬಹುಶಃ ಚತುರ್ಥೀ ವಿಭಕ್ತಿ ಬರುತ್ತದೆ. ಉದಾ:

I will show this book *to Râma* ನಾನು ಈ ಪುಸ್ತಕವನ್ನು ರಾಮನಿಗೆ ತೋರಿಸುವೆನು.

I am doing this *for Râma* ನಾನು ಇದನ್ನು ರಾಮನಿಗೋಸ್ಕರ ಮಾಡುತ್ತಿದ್ದೇನೆ.

೪೩. Like, unlike, near ಎಂಬ ವಿಶೇಷಣಗಳ ಮುಂದೆ ಚತುರ್ಥೀ ವಿಭಕ್ತಿ ಬರುತ್ತದೆ; ಮತ್ತು ಆ ಚತುರ್ಥೀದರ್ಶಕ to ಬಹುತರ ಗುಪ್ತ ಇರುತ್ತದೆ.

೪೪. ಸರ್ವನಾಮದ ದ್ವಿತೀಯಾವಿಭಕ್ತಿಯ ರೂಪದ ಹಿಂದೆ to ಅಥವಾ for ಬಂದರೆ, ಚತುರ್ಥಿಯಾಗುತ್ತದೆ. ಉದಾ:

He will give the money *to me* ಅವನು ಆ ಹಣವನ್ನು ನನಗೆ ಕೊಡುವನು.

೪೫. ಕೆಳಗೆ ಬರೆದ ಕ್ರಿಯಾಪದಗಳ ಮುಂದೆ to ಎಂಬ ಅವ್ಯಯವನ್ನು ಸಾಧಾರಣವಾಗಿ ಬಿಟ್ಟುಬಿಡಬಹುದು. ವಿಶೇಷವಾಗಿ I, thou, he, she, it

ಎಂಬ ಸರ್ವನಾಮಗಳ ಚತುರ್ಥೀ ರೂಪಗಳ ಹಿಂದೆ to ಎಂಬದನ್ನು ಲೋಪ ಮಾಡುವ ರೂಢಿಯು ಬಹಳ ಉಂಟು. To ಲೋಪಮಾಡುವದಾದರೆ, ಹಾಗು ಕರ್ಮವು ನಾಮಪದವಿದ್ದರೆ, ಚತುರ್ಥ್ಯಂತ ಶಬ್ದವನ್ನು ಕರ್ಮದ ಹಿಂದೆ ಇಡಬೇಕು.

ಉದಾ: He was showing the house *to me*

ಅಥವಾ He was showing *me* the house ಅವನು ನನಗೆ ಮನೆಯನ್ನು ತೋರಿಸುತ್ತಿದ್ದನು.

ಆದರೆ ಕರ್ಮಪದವು ಸರ್ವನಾಮವಿದ್ದರೆ, ಚತುರ್ಥ್ಯಂತ ಶಬ್ದವನ್ನು ಅದರ ಮುಂದೆ ಇಡಬೇಕಾಗುತ್ತದೆ; ಇಂಥಲ್ಲಿ ಚತುರ್ಥಿಯ ಹಿಂದೆ to ಬೇಕು.

ಉದಾ: He was showing it *to me* ಅವನು ಅದನ್ನು ನನಗೆ ತೋರಿಸುತ್ತಿದ್ದನು.

೪೬. ಶಬ್ದಸಂಗ್ರಹ ೯.

To tell	ಹೇಳು.	To al-low′	(ಅಪ್ಪಣೆ) ಕೊಡು.
To send	ಕಳುಹು.	To bring	ತಾ.
To lend	ಕಡಾ ಕೊಡು.	To fetch	೧. (ಹೋಗಿ) ತಾ; ೨. ಬೆಲೆ ಬರು.
To fine	ದಂಡಾ ಕಟ್ಟು.	To pro′mise	ಮಾತು ಕೊಡು, ವಚನಕೊಡು.
To ask	ಕೇಳು.	To cost	ಬೆಲೆ ಬೀಳು, ಕ್ರಯ ಬೀಳು.
To show	ತೋರಿಸು.	To reach	೧. (ಕೈಚಾಚಿ) ಕೊಡು; ೨. ಮುಟ್ಟು.
To pay	(ಸಂಬಳ) ಕೊಡು.	To hand	(ಕೈ ಎತ್ತಿ) ಕೊಡು.
To give	ಕೊಡು.	To grant	(ಬಿನ್ನಹಮಾಡಿಕೊಂಡರೆ) ಕೊಡು.
To of′fer	ತಕ್ಕೋ ಅನ್ನು, ಕೊಡಲಿಕ್ಕೆ ಹೋಗು, —ಬರು.	To for-give′[2] To par′don	ಕ್ಷಮಿಸು.
To re-fuse′[1]	ಒಲ್ಲೆನ್ನು, ಇಲ್ಲೆನ್ನು, ಬೇಡನ್ನು.	To owe (೬)	ಋಣಿಯಾಗಿರು.
To de-ny′	ಅಲ್ಲೆನ್ನು, ಅಲ್ಲಗಳೆ.	To envy	ಉರಿ, ಅಸೂಯೆಪಡು, ಹೊಟ್ಟೇಕಿಚ್ಚುಮಾಡು.
To grudge	ಅಸಂತೋಷದಿಂದ ಕೊಡು.	To make	ಮಾಡು.

[1] To refuse ಎಂಬ ಕ್ರಿಯಾಪದವನ್ನು, 'ಯಾರಾದರೂ ಏನಾದರೂ ಬೇಡಿದರೆ, ಅದನ್ನು ಕೊಡುವದಿಲ್ಲ' ಎಂಬ ಅರ್ಥದಿಂದ ಪ್ರಯೋಗಿಸುತ್ತಾರೆ. To deny ಎಂಬದನ್ನು 'ಹೀಗೆ ಹೇಳಲಿಲ್ಲ, ಈ ಮಾತು ಅಲ್ಲ' ಎಂಬ ಅರ್ಥದಿಂದ ಪ್ರಯೋಗಿಸುತ್ತಾರೆ.

[2] To forgive ಎಂಬ ಶಬ್ದವನ್ನು ದೊಡ್ಡ ತಪ್ಪುಗಳ ಬಗ್ಗೆ ದಯವಿಟ್ಟು ಕ್ಷಮಿಸಬೇಕೆಂದು ಪ್ರಾರ್ಥಿಸುವಾಗ ಉಪಯೋಗಿಸುತ್ತಾರೆ. To pardon ಎಂಬದನ್ನು ಕ್ಷುಲ್ಲಕ ಸಂಗತಿಗಳ ಸಂಬಂಧದಿಂದ ಕ್ಷಮೆ ಬೇಡುವವಾದರೆ ಪ್ರಯೋಗಿಸುವರು.

Free′dom,[1] Li′ber-ty	ಸ್ವತಂತ್ರತೆ, ಬಿಡುಗಡೆ.	An o′range	ಕಿತ್ತಳೇ ಹಣ್ಣು.
		Sin	ಪಾಪ.
A pray′er	ಪ್ರಾರ್ಥನೆ.	Me′rit	ಪುಣ್ಯ.
A fa′vour	ಉಪಕಾರ.	A re-quest′	ಬಿನ್ನಹ.
An in′ju-ry	೧. ಅನ್ಯಾಯ; ೨. ಅಪಾಯ, ಕೇಡು.	Leave	ರಜಾ, ಅಪ್ಪಣೆ.
Du′ty	ಕರ್ತವ್ಯ.	A′ny	ಯಾರಾದರೂ, ಏನಾದರೂ.
A vi′sit	ಭೆಟ್ಟಿ.	An of-fence′	ಅಪರಾಧ.
To′tal	ಒಟ್ಟು.	A slave	ಗುಲಾಮ, ದಾಸ.
A har′bour	ರೇವು, ಬಂದರ.	All	ಎಲ್ಲ.
Wa′ges[2]	ಕೂಲಿ, ಸಂಬಳ.	ಬಟ್ಟಲ	a cup.
ಅರ್ಜಿ	a pe-ti′tion.	ಪ್ರಶ್ನೆ	a ques′tion.
ಅಪರಾಧಿ	an of-fend′er.	ಉತ್ತರ	an an′swer[3].

ಭಾಷಾಂತರಪಾಠ ೯.

೪೭. 1. The ship will reach the harbour. 2. Will you reach *me* that orange? 3. I pardon *thee*[4] this offence. 4. Will you not pardon me? 5. Who will pardon my sins? 6. Who will tell *us* our duty? 7. God will forgive *us* our sins. 8. God will forgive you. 9. They do not forgive an injury. 10. Thou

[1] Freedom ಎಂಬ ಶಬ್ದವು 'ಯಾರೊಬ್ಬರ ಆತಂಕವಿಲ್ಲದೆ ಬರೇ ನಮ್ಮ ಸ್ವಾಭಾವಿಕವಾದ ಅಧಿಕಾರಗಳನ್ನು ನಡಿಸೋಣ' ಎಂಬ ಅರ್ಥವನ್ನು ಸೂಚಿಸುತ್ತದೆ; ಆದರೆ liberty ಎಂಬದರಿಂದ 'ಮೊದಲು ಅಂಕಿತದೊಳಗಿದ್ದದ್ದು ಬಿಡುಗಡೆ ಹೊಂದಿತೆಂಬ' ಗರ್ಭಿತಾರ್ಥವು ಹೊರಡುತ್ತದೆ.

[2] ಈ ಶಬ್ದವು ಬಹುವಚನದಲ್ಲಿದ್ದು ಏಕವಚನದಂತೆ ಇದರ ಪ್ರಯೋಗವಾಗುತ್ತದೆ. ಕೂಲಿ ಕುಂಬಳಿ ಮುಂತಾದ ಕೀಳ ತರದ ಕೆಲಸಗಳನ್ನು ಮಾಡುವ ಬಗ್ಗೆ ದೊರೆಯುವ ಸಂಬಳಕ್ಕೆ ಈ ಶಬ್ದವನ್ನು ಹಚ್ಚುತ್ತಾರೆ. ಸರಕಾರೀ ಉದ್ಯೋಗಸ್ಥರ ಸಂಬಳಕ್ಕೆ pay ಅಥವಾ salary ಅನ್ನುತ್ತಾರೆ. ಮತ್ತು ವೈದ್ಯರು, ವಕೀಲರು ಮುಂತಾದವರಿಗೆ ಕೊಡಬೇಕಾಗುವ ಹಣಕ್ಕೆ fee ಅನ್ನುತ್ತಾರೆ. ಇದೇ ಮೇರೆಗೆ ಶಾಲೆಗಳಲ್ಲಿ ಹುಡುಗರು ಕಲಿಯುವ ಬಗ್ಗೆ ಕೊಡಬೇಕಾಗುವ ಹಣಕ್ಕೆ ಸಹ fee ಅನ್ನುವರು.

[3] ಈ ಶಬ್ದದೊಳಗಿನ w ದ ಉಚ್ಚಾರವಾಗುವದಿಲ್ಲ.

[4] ಕ್ರಿಸ್ತೀಜನರ ಬೈಬಲ್ ಎಂಬ ಧರ್ಮಪುಸ್ತಕದೊಳಗೆ thou, thee, thy ಎಂಬ ರೂಪಗಳು ಬಹಳವಾಗಿ ಪ್ರಯೋಗಿಸಿಯವೆ. ಇದಲ್ಲದೆ, you ಎಂಬದಕ್ಕೆ ಬದಲಾಗಿ ಅಲ್ಲಲ್ಲಿ ye ಎಂಬದನ್ನು ಪ್ರಯೋಗಿಸಿಯದೆ.

wilt grant *me* life and favour. 11. I shall grant *him* his request. 12. He grants it *to me.* 13. Your master will grant *you* leave. 14. Why do you grudge *them* their wages? 15. What will thy[1] wages be? 16. The wages of sin is death. 17. The master will allow *the slave* his liberty. 18. We allow *him* a small sum of money. 19. Will you not promise *your friend* a visit? 20. He will not deny *you* anything. 21. He refuses *us* bread. 22. Do you envy *me* my riches? 23. Will you fetch *me* my umbrella? 24. What will this table fetch? 25. The judge will fine *her* ten rupees. 26. Your father will not refuse *you* the small sum of four rupees. 27. Shall I ask *you* a question? 28. *To which* of those boys shall I give these oranges? 29. *To whom* will you tell this news? 30. What will this cradle cost? 31. He has always freedom.

೧. ನಾನು ನನ್ನ ಅರ್ಜಿಯನ್ನು ನಿಮಗೆ ತೋರಿಸುವೆನು. ೨. ತಾವು ಆ ಪುಸ್ತಕವನ್ನು ನನಗೆ ಕೊಡುವಿರಾ? ೩. ಆ ಪುಸ್ತಕವನ್ನಷ್ಟು ನನಗೆ ತಂದು ಕೊಡುತ್ತೀಯಾ? ೪. ಈ ಸೂಜಿಗಳನ್ನು ಆಕೆಗೆ ಕೊಡುವಿಯಾ? ೫. ನೀನು ನಿನ್ನ ಚಾಕು ನನಗೆ ಒಂದು ಕ್ಷಣ ಹೊತ್ತು[2] ಕೊಡುತ್ತೀಯಾ? ೬. ಒಂದು ಕುರ್ಚಿಗೆ ಎಷ್ಟು ಬೆಲೆ ಬೀಳುತ್ತದೆ? ೭. ನಾಲ್ಕು ಕುರ್ಚಿಗಳಿಗೆ ನಾನು ಎಷ್ಟು ಕ್ರಯ ಕೊಡಬೇಕಾಗುವದು? ೮. ಈ ಕುದುರೆಗೆ ಎಷ್ಟು ಬೆಲೆ ಬಂದೀತು? ೯. ನಾನು ಆತನಿಗೆ ಹತ್ತು ಕಿತ್ತಳೀ ಹಣ್ಣುಗಳನ್ನು ಕಳುಹುವೆನು. ೧೦. ನಾನು ಸೇವಕರಿಗೆ ಸಂಬಳ ಕೊಡುವೆನು. ೧೧. ನಾನು ಅವನಿಗೆ ಉತ್ತರ ಕೊಡುವೆನು. ೧೨. ಅವನು ನಿನಗೆ ಏನು ಉತ್ತರ ಕೊಡುತ್ತಾನೆ? ೧೩. ನಾನು ಆಕೆಗೆ ಕೆಲವು ಪ್ರಶ್ನಗಳನ್ನು ಕೇಳುತ್ತಿದ್ದೆನು. ೧೪. ಅವನು ನಿನಗೆ ಐದು ರೂಪಾಯಿ[3] (ಸಂಬಳ) ಕೊಡುವನು. ೧೫. ನಾನು ನಿನಗೇನಾದರೂ ಕೊಡಬೇಕಾಗಿದೆಯೋ?[4] ೧೬. ನೀನು ನನಗೆ ಏಳು ರೂಪಾಯಿ ಕೊಡತಕ್ಕದ್ದು[5]. ೧೭. ನಾನು ಈ ಪತ್ರವನ್ನು ಯಾರಿಗೆ ಕೊಡಲಿ? ೧೮. ನಾನು ಯಾರ ಉಪಕಾರ ನೆನಸಲಿ? ೧೯. ಪತ್ರವು ಅವನಿಗೆ ಯಾವಾಗ ಮುಟ್ಟುವದು? ೨೦. ನೀನು ಪುಣೆಗೆ[6]

1) ಪುಟ ೨೯, ಟಿಪ್ಪಣಿ ೪ ನೋಡು. 2) For a moment. 3) ರೂಪಾಯಿ = a rupee.
4) Do I owe you anything? 5) You owe me seven rupees. 6) ಪುಣೆ = Poona.

ಯಾವಾಗ ಮುಟ್ಟುವಿ? ೨೧. ಈ ಹಡಗವು ಆ ದೇಶಕ್ಕೆ ಯಾವಾಗ ಮುಟ್ಟುವದು? ೨೨. ಆ ಲೆಕ್ಕಣಿಕೆಯನ್ನು ನನಗೆ (ಕೈಚಾಚಿ) ಕೊಡುತ್ತೀಯಾ? ೨೩. ನನಗೆ ಅಪ್ಪಣೆ ಕೊಡುತ್ತೀರಾ? ೨೪. ಅವನು ನನ್ನನ್ನು ಕ್ಷಮಿಸಲಿಕ್ಕಿಲ್ಲ. ೨೫. ನಾನು ಆ ಅಪರಾಧಿಯನ್ನು ಕ್ಷಮಿಸಲಿಕ್ಕಿಲ್ಲ. ೨೬. ನನಗೆ ಸ್ವಲ್ಪ ಹಣ ಕಡಾ ಕೊಡುತ್ತೀರಾ? ೨೭. ಅದನ್ನು ನನಗೆ ಹೇಳುವಿಯಾ? ೨೮. ಇದನ್ನು ಆಕೆಗೆ ಕೊಡುವಿಯಾ? ೨೯. ಅವನು ನಿನಗೆ ಐದು ರೂಪಾಯಿ ಕೊಡಲಿಕ್ಕೆ ಬರುವನು. ೩೦. ಅವನು ನನಗೆ ಒಂದು ಬಟ್ಟಲ ಹಾಲು ಕೊಡುತ್ತಾನೆ[1]. ೩೧. ಈ ಟೊಪ್ಪಿಗೆಗೆ ನೀನು ಏನು ಕೊಟ್ಟಿ?

೧೦ನೇ ಪಾಠ.

ಸ್ವತಃ

Self.

೪೮. I, thou, he, she, it ಎಂಬ ಸರ್ವನಾಮಗಳ ಕೆಲವು ವಿಭಕ್ತೀ ರೂಪಗಳಿಗೆ self ಎಂಬ ಶಬ್ದವನ್ನು ಹಚ್ಚಿದರೆ ಅವುಗಳ ಅರ್ಥವು ಸ್ವತಃ ಎಂತಾಗುತ್ತದೆ. ಉದಾ:

ಏಕವಚನ.		ಬಹುವಚನ.	
I myself	ನಾನೇ.	We ourselves	ನಾವೇ.
Thou thyself / You yourself	ನೀನೇ.	You yourselves	ನೀವೇ.
He himself	ಅವನು ತಾನೇ.	They themselves	ಅವರು ತಾವೇ. / ಅವು ತಾವೇ.
She herself	ಅವಳು ತಾನೇ.		
It itself	ಅದು ತಾನೇ.		

ಉದಾ: He *himself* will write ಅವನು ತಾನೇ ಬರೆಯುವನು.

[1] To offer.

೪೯. ಈ ಶಬ್ದಗಳನ್ನು ಕರ್ತೃಪದದಿಂದ ಬೇರೆಮಾಡಿ ವಾಕ್ಯದ ಕೊನೆಗೆ ಹಾಕುವ ರೂಢಿಯು ಬಹಳ ಉಂಟು. ಉದಾ:

I do not like it *myself* ಅದು (ಸ್ವತಃ) ನನ್ನ ಮನಸಿಗೆ ಬರುವದಿಲ್ಲ.

೫೦. ಕರ್ಮಸ್ಥಾನದಲ್ಲಿ ಈ ಶಬ್ದಗಳನ್ನು ಇಟ್ಟರೆ, ಇವುಗಳ ಅರ್ಥವು ತನ್ನನ್ನು ತಾನೇ, ತನಗೆ ತಾನೇ ಎಂತಾಗುತ್ತದೆ. ಉದಾ:

He is hurting *himself* ಅವನು ತನಗೆ ತಾನೇ ನೋವು ಮಾಡಿಕೊಳ್ಳುತ್ತಲಿದ್ದಾನೆ.

೫೧. ಸ್ವಂತ ಎಂಬದಕ್ಕೆ own ಎಂಬ ವಿಶೇಷಣವನ್ನು ಪ್ರಯೋಗಿಸುವರು. ಅದು I, thou, he, she, it ಎಂಬವುಗಳ ಷಷ್ಠೀವಿಭಕ್ತಿಯ ಮುಂದೆ ಬರುತ್ತದೆ. ಉದಾ:

This is my *own* book ಇದು ನನ್ನ ಸ್ವಂತ ಪುಸ್ತಕವು.

೫೨. ಶಬ್ದಸಂಗ್ರಹ ೧೦.

A gen′tle-man	ಸಭ್ಯ ಗೃಹಸ್ಥ.	A purse	(ಹಣದ) ಚೀಲ.
A la′dy	ದೊರೆಸಾನಿ, ಸಭ್ಯಸ್ತ್ರೀ, ಕುಲೀನ—.	Mer′cy	ದಯೆ.
A wound	ಗಾಯ.	To dress	ಪೋಷಾಕು ಹಾಕಿಕೊ
To wound	ಗಾಯಮಾಡು.	ಅತಿಥಿ, ಅಭ್ಯಾಗತ	a guest.
ಮಸಿ ಒತ್ತುವ ಕಾಗದ, ಒತ್ತಕರಡು	blot′ting-pa-per.	ಚಿತ್ರ	a pic′ture[1].
ಪರಕೀಯ ಮನುಷ್ಯ	a stran′ger.	ಐಶ್ವರ್ಯವಂತ ಮಾಡು	to en-rich′.
ಕಲಿಸು	to teach.		
ತೂಗು	to weigh.	ತೂಕ	weight.

[1] ಶಬ್ದದ ಕೊನೆಯಲ್ಲಿರುವ -ture ಎಂಬದರ ಉಚ್ಚಾರ 'ಚರ್' ಆಗುತ್ತದೆ.

ಭಾಷಾಂತರಪಾಠ ೧೦.

೫೨. 1. He will not hide *himself.* 2. The girl was amusing *herself,* 3. How will you amuse *yourselves?* 4. The gentlemen will amuse *themselves.* 5. Who will praise *himself?* 6. I believe it *myself.* 7. You are frightening *yourself.* 8. Who will recommend *himself?* 9. The child is hurting *itself.* 10. She was doing it *herself.* 11. You do not believe it *yourselves.* 12. My husband and *myself* were reading. 13. You do not believe it *yourself.* 14. You *yourself* will reward him. 15. Will you dress *yourself?* 16. I was dressing[1] his wound. 17. You do not see your *own* faults. 18. Is that his *own* purse? 19. You have got my book, where is your *own?* 20. God is mercy *itself*[2].

೧. ಅವನು ತಾನೇ ಬರಲಿಕ್ಕಿಲ್ಲ. ೨. ಆಕೆಯು ತಾನೇ ಹಾಡುತ್ತಿದ್ದಳು. ೩. ಆ ದೊರೆಸಾನಿಯು ತನ್ನ ಹೆಣ್ಣುಮಕ್ಕಳಿಗೆ ಕಲಿಸುತ್ತಿದ್ದಳು. ೪. ಅವನು ತಾನೇ ಆ ಪೆಟ್ಟಿಗೆಯನ್ನು ತೂಗುತ್ತಿದ್ದನು. ೫. ಅವನು ತಾನೇ ತನ್ನ ಗಾಯವನ್ನು ತೊಳಕೊಳ್ಳುತ್ತಿದ್ದನು. ೬. ನೀನು ಯಾಕೆ ಪೋಷಾಕು ಹಾಕಿಕೊಳ್ಳುವದಿಲ್ಲ? ೭. ಈ ಪತ್ರದ ತೂಕವನ್ನು ನೀನು ಹ್ಯಾಗೆ ತೆಗೆಯುವಿ[3]? ೮. ನಾನು ಈ ಕೆಲಸವನ್ನು ಸ್ವತಃ ಮಾಡುತ್ತಿರುವದಿಲ್ಲ. ೯. ಅವನು ಸ್ವತಃ ನಿನ್ನನ್ನು ಕೇಳುವನು. ೧೦. ಅವನು ಸ್ವತಃ ನನಗೆ ಕೆಲವು ಚಿತ್ರಗಳನ್ನು ತೋರಿಸುತ್ತಿದ್ದನು. ೧೧. ಅವನು ನಿನಗೆ ಏನು ಕಲಿಸುತ್ತಿರುತ್ತಾನೆ[4]? ೧೨. ಇವು ಯಾರ ಚಿತ್ರಗಳು? ೧೩. ಅವು ನನ್ನವಲ್ಲ. ೧೪. ಇದು ನಿನ್ನ ಸ್ವಂತ ಚೀಲವೋ? ೧೫. ಆ ದೌತಿಯು ನಿನ್ನದೋ? ೧೬. ಅದನ್ನು ನನಗೆ ಒಂದು ಕ್ಷಣಹೊತ್ತು ಕೊಡುತ್ತೀಯಾ? ೧೭. ಈ ಮಸಿ-ಒತ್ತುವ-ಕಾಗದವು ಯಾರದು? ೧೮. ಈ ಬಂಡಿಯು ಯಾರದು? ೧೯. ಈ ಮನೆಯ ಯಜಮಾನರು ಯಾರು? ೨೦. ಅದು ನಮ್ಮ ಸ್ವಂತ ಮನೆಯು. ೨೧. ಅವನು ತನಗೆ ತಾನೇ ಗಾಯ

---

[1] To dress a wound = ಗಾಯ ತೊಳೆದು ಮಲಂಪಟ್ಟಿ ಹಚ್ಚಿ ಕಟ್ಟೋಣ.
[2] ಮೂರ್ತಿಮಂತ, ಸಾಕ್ಷಾತ್. [3] To find. [4] To teach, to tell, to ask, to give ಎಂಬವು ದ್ವಿಕರ್ಮಕ ಕ್ರಿಯಾಪದಗಳು.

ಮಾಡಿಕೊಳ್ಳುತ್ತಲಿದ್ದಾನೆ. ೨೨. ಈತನೇ ನಿನ್ನ ಅತಿಥಿಯೋ? ೨೩. ಆತನು ಪರಕೀಯ ಮನುಷ್ಯನು. ೨೪. ನೀನು ಐಶ್ವರ್ಯವಂತನಾಗುತ್ತಿದ್ದೀ. ೨೫. ನಾವು ನಮ್ಮ ಮಕ್ಕಳ ಮೇಲೆ ಪ್ರೀತಿಮಾಡುತ್ತೇವೆ. ೨೬. ನೀನೇ ಹೋಗುವಿಯಾ? ೨೭. ನಾನೇ ನಿನಗೆ ಪತ್ರಾ ಬರೆಯುವೆನು. ೨೮. ನಿನಗೆ ಏನು ಬೇಕು? ೨೯. ಇಂಥ ಸಜ್ಜನನು ನಮಗೆ ಎಲ್ಲಿ ದೊರಕುವನು? ೩೦. ಇಂಥ ಉದ್ಯೋಗವು ನಿನ್ನ ಮನಸಿಗೆ ಹ್ಯಾಗೆ ಬರುತ್ತದೆ?

೧೧ನೇ ಪಾಠ.

ವಿಶೇಷಣಗಳ ತಾರತಮ್ಯಭಾವ.

Comparison of Adjectives.

೫೪. ಇಂಗ್ಲಿಷದಲ್ಲಿ ವಿಶೇಷಣಗಳ ತಾರತಮ್ಯಭಾವವನ್ನು ತೋರಿಸುವದಾದರೆ, ಅವುಗಳಿಗೆ ಪ್ರತ್ಯಯಗಳನ್ನು ಹಚ್ಚುತ್ತಾರೆ.

ವಿಶೇಷಣದ ಮೂಲ ರೂಪವು Positive degreeಯಲ್ಲಿರುತ್ತದೆ. ಒಂದು ವಸ್ತುವಿನಲ್ಲಿ ಮತ್ತೊಂದಕ್ಕಿಂತ ಯಾವದಾದರೊಂದು ಗುಣವು ಹೆಚ್ಚಿಗಿದೆ ಎಂದು ತೋರಿಸುವದಕ್ಕೆ Comparative degreeಯನ್ನು ಉಪಯೋಗಿಸುತ್ತಾರೆ. ಎರಡಕ್ಕಿಂತ ಹೆಚ್ಚು ವಸ್ತುಗಳೊಳಗಿನ ಒಂದು ವಸ್ತುವಿನಲ್ಲಿ ಉಳಿದ ಎಲ್ಲವುಗಳಿಗಿಂತ ಯಾವದಾದರೊಂದು ಗುಣವು ಹೆಚ್ಚಿಗಿದೆ ಎಂದು ತೋರಿಸುವದಕ್ಕೆ Superlative degreeಯನ್ನು ಉಪಯೋಗಿಸುತ್ತಾರೆ.

೫೫. ಒಂದೇ ಅವಯವವುಳ್ಳ ಅಥವಾ ಅಂತ್ಯದಲ್ಲಿ ಸ್ವರವಿರುವಂಥ ಕೆಲವು ಎರಡು ಅವಯವಗಳುಳ್ಳ ವಿಶೇಷಣಗಳಿಗೆ *er, est* ಎಂಬ ಪ್ರತ್ಯಯಗಳನ್ನು ಹಚ್ಚುವದರಿಂದ ಅನುಕ್ರಮವಾಗಿ Comparative ಮತ್ತು Superlative degreeಗಳಾಗುತ್ತವೆ. ಉದಾ:

Positive.	*Comparative.*	*Superlative.*
Great	great*er*	great*est*

೫೬. *Er, est* ಎಂಬ ಪ್ರತ್ಯಯಗಳನ್ನು ಹಚ್ಚುವಾಗ ಮೊದಲನೇ ಪುಸ್ತಕದ ೫ನೇ, ೭ನೇ, ೮ನೇ, ಕಲಮುಗಳಲ್ಲಿ ಹೇಳಿದ ನಿಯಮಗಳನ್ನು ಅನುಸರಿಸಬೇಕು. ಉದಾ: .

Hot	ಬಿಸಿ	hot*ter*	hot*test*
Happy	ಸುಖಿ	happ*ier*	happ*iest*
Wise	ಬುದ್ಧಿವಂತ	wis*er*	wis*est*

೫೭. ಎರಡು ವಸ್ತುಗಳನ್ನು ಸರಿ ಹಚ್ಚಿ ನೋಡುವಾಗ ಅವುಗಳನ್ನು ಒಂದೇ ವಿಭಕ್ತಿಯಲ್ಲಿಡಬೇಕು. ಮತ್ತು ವಿಶೇಷಣಕ್ಕೆ *er* ಎಂಬ ಪ್ರತ್ಯಯವನ್ನು ಹಚ್ಚಿ Comparative degree ಮಾಡುವಾಗ ಮುಂದೆ *than* (ಇಂತ) ಎಂಬ ಸಮುಚ್ಚಾಯಕಾವ್ಯಯವನ್ನು ಹಾಕಬೇಕು. ಉದಾ:

He is wiser than *I* ಅವನು ನನಗಿಂತ ಬುದ್ಧಿವಂತನು.

You love *him* more than *me* ನೀನು ನನಗಿಂತ ಅವನ ಮೇಲೆ ಹೆಚ್ಚು ಪ್ರೀತಿ ಮಾಡುತ್ತೀ.

He is kinder *to you* than *to me* ಅವನ ದಯವು ನನಗಿಂತ ನಿನ್ನ ಮೇಲೆ ಹೆಚ್ಚು ಅದೆ.

ಇಂತ ಎಂಬ ಪ್ರತ್ಯಯವು ಕನ್ನಡದಲ್ಲಿ ಉಪಸರ್ಗಾವ್ಯಯವದೆ. ಆದರೆ than ಎಂಬದು ಇಂಗ್ಲಿಷದಲ್ಲಿ ಸಮುಚ್ಚಾಯಕಾವ್ಯಯವಾಗುತ್ತದೆ. ಯಾಕಂದರೆ, ಮೊದಲನೇ ವಾಕ್ಯದಲ್ಲಿ than ಎಂಬ ಶಬ್ದವು he is wiser ಮತ್ತು I am ಎಂಬ ಎರಡು ವಾಕ್ಯಗಳನ್ನು ಕೂಡಿಸುತ್ತದೆ.

೫೮. Est ಎಂಬ ಪ್ರತ್ಯಯವನ್ನು ಹಚ್ಚುವಾಗ ವಿಶೇಷಣದ ಹಿಂದೆ the ಎಂಬ ಉಪಪದವೂ ಮುಂದೆ ಷಷ್ಠೀವಿಭಕ್ತಿಯೂ ಬರುತ್ತವೆ. ಈ ಷಷ್ಠೀವಿಭಕ್ತಿಯ ಅರ್ಥವು ಅಲ್ಲಿ, ಒಳಗೆ, ಇಂತ ಎಂತಾಗುತ್ತದೆ. ಉದಾ:

Socrates was *the* wisest *of* the Athenians ಸಾಕ್ರೆಟಿಸನು ಅಥೀನಿಯನ್ ಜನರೊಳಗೆ (ಎಲ್ಲರಿಗಿಂತ) ಬುದ್ಧಿವಂತನಿದ್ದನು.

೫೯. Than ಎಂಬ ಶಬ್ದದಿಂದ ಕೂಡಿದ ಎರಡು ವಾಕ್ಯಗಳಲ್ಲಿ ಒಂದರೊಳಗಿನ ಒಂದು ನಾಮಪದವು ಎರಡನೇ ವಾಕ್ಯದೊಳಗೆ ತಿರಿಗಿ ಬಂದರೆ, ಅದಕ್ಕೆ ಬದಲಾಗಿ ಏಕವಚನವಿದ್ದಲ್ಲಿ that ಎಂಬ ಶಬ್ದವನ್ನೂ, ಬಹುವಚನವಿದ್ದಲ್ಲಿ those ಎಂಬದನ್ನೂ ಪ್ರಯೋಗಿಸಬೇಕು. ಕ್ರಿಯಾಪದವಿರಲು, ಅದಕ್ಕೆ ಬದಲಾಗಿ do ಎಂಬ ಕ್ರಿಯಾಪದವನ್ನು ಉಪಯೋಗಿಸಬೇಕು, ಇಲ್ಲವೆ ಅಧ್ಯಾಹಾರ ಮಾಡಬೇಕು.

ಉದಾ: Your coat is bigger than *that* of your brother ನಿನ್ನ ತಮ್ಮನ ಅಂಗಿಗಿಂತ ನಿನ್ನ ಅಂಗಿಯು ದೊಡ್ಡದು.

He knows more than you (*do*) ನಿನಗಿಂತ ಅವನು ಹೆಚ್ಚಿಗೆ ಬಲ್ಲನು.

೬೦. ಶಬ್ದಸಂಗ್ರಹ ೧೧.

No'ble	೧. ಉದಾರ; ೨. ಕುಲೀನ, ಘನತೆಯುಳ್ಳ.	Ea'sy	ಸುಲಭವಾದ.
Mild	ಶಾಂತ, ಸೌಮ್ಯ.	Light	ಹಗುರ.
Dif'fer-ent	ಬೇರೆ.	Pre'cious	ಬೆಲೆಯುಳ್ಳ.
Size	ಆಕಾರಮಾನ, ಉದ್ದಗಲ, ಆಳತೆ, ಪರಿಮಾಣ.	Rain	ಮಳೆ.
		A ru'by	ಮಾಣಿಕ.
Mer'cu-ry	ಪಾದರಸ, ಪಾರಜ.	A pearl	ಮುತ್ತು.
A jew'el	ರತ್ನ.	The world[2]	ಜಗತ್ತು, ಲೋಕ.
A sap'phire	ನೀಲ.	A ray	ಕಿರಣ.
A shrub	ಪೊದೆ, ಕಂಟಿ.	A mer'chant	ವರ್ತಕ.
An herb[1]	ವನಸ್ಪತಿ.	ವಜ್ರ	a di'a-mond.
ವರ್ಗ	a class.	ಪಚ್ಚ	an e'me-rald.
ಶಾಲೆ	a school.	ಸುಂದರವಾದ, ರಮಣೀಯವಾದ	love'ly.
ಪೃಥ್ವಿ, ಭೂಲೋಕ	the earth[2].		

[1] ಯಾವ ಗಿಡದ ಬೇರು ಪ್ರತಿ ವರುಷಕ್ಕೆ ಒಣಗಿ ಗಿಡ ಸಾಯುತ್ತದೋ ಆ ಗಿಡವು. ಕೆಲವು ತರದ ಪಲ್ಯಕ್ಕೂ, ಔಷಧೀ ವನಸ್ಪತಿಗಳಿಗೂ, ಸಕಲ ತರದ ಹುಲ್ಲಿಗೂ ಈ ಶಬ್ದವನ್ನು ಹಚ್ಚುತ್ತಾರೆ. ಈ ಶಬ್ದದೊಳಗಿನ h ದ ಉಚ್ಚಾರವಾಗುವದಿಲ್ಲ.

[2] The 'earth' ಎಂಬದರಿಂದ 'ಪೃಥ್ವಿಯ ಬಹಿರಂಗ ಸ್ವರೂಪ, ಭೂರಚನೆ' ಮುಂತಾದವುಗಳ ಬೋಧವಾಗುತ್ತದೆ; ಆದರೆ the 'world' ಎಂಬದರಿಂದ 'ಜನರಿಂದ ವಾಸವಾಗಿರುವ ಭೂಮಿ, ಜಗತ್ತು' ಎಂಬ ಅರ್ಥವು ಹೊರಡುತ್ತದೆ.

ಭಾಷಾಂತರಪಾಠ ೧೧.

೬೧. 1. Ráma is tall*er* than Góvinda. 2. Hari is the tall*est* of the three. 3. The leaves of this tree are not larg*er* than those of that shrub. 4. Oil is light*er* than water. 5. Mercury is heav*ier* than water. 6. You will get a reward. 7. His clothes are clean*er* than yours. 8. The sun is bright*er* than the moon. 9. The rays of the moon are mild*er* than those of the sun. 10. These lessons are eas*ier* than those. 11. The ruby is a precious stone[1] of a red colour. 12. Pearls are of different sizes. 13. Some merchants are rich*er* than princes. 14. The inhabitants of Europe are brav*er* than those of Asia. 15. Who is the strong*er* of the two? 16. You are bold*er*[2] than you were. 17. Some poor men are happ*ier* than kings. 18. Rain-water is pur*er* than the water of lakes and rivers. 19. Silver is cheap*er* than gold. 20. Your stick is short*er* than Ràma's. 21. My uncle's dog is big*ger* than mine. 22. Sapphire is next in hardness to the diamond. 23. Queen Victoria had a very noble heart.

೧. ಕೆಲವು ಪಶುಗಳಿಗೆ ಇತರ ಪಶುಗಳಿಗಿಂತ ಹೆಚ್ಚು ಬುದ್ಧಿ[3] ಇರುತ್ತದೆ. ೨. ಎಲ್ಲ ವಸ್ತುಗಳಲ್ಲಿ ವಜ್ರವು ಕಠಿಣವಾದದ್ದು. ೩. ಪಚ್ಚದ ವರ್ಣವು ಹಸುರು. ೪. ಈ ಮನುಷ್ಯನು ನನಗಿಂತ ಬಡವನು. ೫. ನಿಮ್ಮ ಕನ್ನಡಿಗಿಂತ ನಮ್ಮ ಕನ್ನಡಿಯು ದಪ್ಪವದೆ. ೬. ನಿನ್ನ ತಂದೆಗಿಂತ ನಿನ್ನ ಕಕ್ಕನು ಐಶ್ವರ್ಯವಂತನಿದ್ದಾನೆ. ೭. ಕೆಲವು ಹೆಂಗಸರು ಗಂಡಸರಿಗಿಂತ ಧಿಟ್ಟರಿರುತ್ತಾರೆ. ೮. ನೀನು ಅಶಕ್ತನು; ನಿನ್ನ ತಂಗಿಯು ನಿನಗಿಂತ ಅಶಕ್ತಳು. ೯. ಆ ಬಾವಿಗಿಂತ ಈ ಬಾವಿಯು ಆಳವಾಗಿಲ್ಲವೋ? ೧೦. ಆ ಹುಡುಗನು ಎಲ್ಲರೊಳಗೆ ಎತ್ತರನಿದ್ದಾನೆ. ೧೧. ಅವನಿಗಿಂತ ನೀನು ಎತ್ತರ ಇದ್ದೀಯಾ? ೧೨. ಅನೇಕ ಹುಡುಗರ ಕೈಗಳು ಸ್ವಚ್ಛವಿರುವದಿಲ್ಲ. ೧೩. ಆ ಎಲ್ಲ ಚಾಕುಗಳಿಗಿಂತ ಇದು ಹದನವಿತ್ತು. ೧೪. ತಾಮ್ರಕ್ಕಿಂತ ಬಂಗಾರವು ತುಟ್ಟಿ ಇರುತ್ತದೆ.

[1] A precious stone=ರತ್ನ, ಮಣಿ. [2] Bold ಎಂಬ ಶಬ್ದದ ಮೂಲ ಅರ್ಥ 'ಧಿಟ್ಟ'; ಆದರೆ ಈಗ ಅದರ ಅರ್ಥವು ಸಾಧಾರಣವಾಗಿ 'ಸೊಕ್ಕಿನ' ಎಂತ ಆಗುತ್ತದೆ. [3] ಪಶುಗಳ ಬುದ್ಧಿ=instinct ಮನುಷ್ಯರ ಬುದ್ಧಿ=reason.

೧೫. ಬಂಗಾರಕ್ಕಿಂತ ಕಬ್ಬಿಣವು ಬಿರುಸಿರುತ್ತದೆ. ೧೬. ಪೃಥ್ವಿಗಿಂತ ಸೂರ್ಯನು ದೊಡ್ಡವನು. ೧೭. ಆ ಹುಡುಗಿಗಿಂತ ನಿಮ್ಮ ಹುಡುಗಿಯು ಜಾಣೆ. ೧೮. ಆ ಹುಡುಗನ ಅಂಗಿಯು ನನ್ನ ಅಂಗಿಗಿಂತ ಸಣ್ಣದು. ೧೯. ಈ ಪುಷ್ಟ ಮನುಷ್ಯನ ಅಂಗಿಯು ಎಲ್ಲ ಅಂಗಿಗಳಿಗಿಂತ ದೊಡ್ಡದು. ೨೦. ಈ ಶಾಲೆಯೊಳಗಿನ ಯಾವತ್ತು ವರ್ಗಗಳಲ್ಲಿ ಈ ವರ್ಗವು ಉತ್ತಮವಾದದ್ದು. ೨೧. ಇದಕ್ಕಿಂತ ಅದು ರಮಣೀಯವಾದದ್ದು. ೨೨. ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿ ಇಲ್ಲ[1]. ೨೩. ಇಕೋ ನೋಡಿರಿ[2], ಈ ಹೊಸ ತೊಟ್ಟಿಲವು ನಿಮ್ಮ ತೊಟ್ಟಿಲಿಗಿಂತ ಚಂದವದೆ. ೨೪. ಪೇರಲಹಣ್ಣಿಗಿಂತ ಮಾವಿನ ಹಣ್ಣು ಹೆಚ್ಚು ರುಚಿಕರವಾದದ್ದು.

೧೨ನೇ ಪಾಠ.

ವಿಶೇಷಣಗಳ ತಾರತಮ್ಯಭಾವ (ಮುಂದೆ ಸಾಗಿಸಿದ್ದು).

Comparison of Adjectives *(continued)*.

೬೨. ಎರಡು ಅಥವಾ ಹೆಚ್ಚು ಅವಯವಗಳುಳ್ಳ ವಿಶೇಷಣಗಳ ತಾರತಮ್ಯಭಾವವನ್ನು ತೋರಿಸುವದಾದರೆ, ಹಿಂದೆ more ಹೆಚ್ಚು most ಅತಿ ಎಂಬ ಶಬ್ದಗಳನ್ನು ಹಾಕಬೇಕು. ಉದಾ:

Positive.	*Comparative.*	*Superlative.*
Gen'er-ous ಉದಾರವಾದ	*more* generous	*most* generous.

೬೩. ಕೆಲವು ವಿಶೇಷಣಗಳ ತಾರತಮ್ಯಭಾವದರ್ಶಕರೂಪಗಳು ನಿಯಮದಂತೆ ಆಗುವದಿಲ್ಲ. ಉದಾ:

Positive.		*Comparative.*	*Superlative.*
Good	ಒಳ್ಳೇ	bet'ter	best.
Bad	ಕೆಟ್ಟ	worse	worst.
Lit'tle	ಸ್ವಲ್ಪ	less	least.
Much[3]	ಬಹಳ	more	most.
Ma'ny	ಬಹಳ, ಅನೇಕ	more	most.
Old	ಮುದಿ, ಹಳೆ	old'er eld'er	old'est. eld'est.

[1] None dearer than mother, nothing more tasty than salt. [2] Look here, or Behold! [3] Many ಎಂಬ ವಿಶೇಷಣವು ಸಂಖ್ಯೆಯನ್ನೂ much ಎಂಬದು ಪರಿಮಾಣವನ್ನೂ ತೋರಿಸುತ್ತವೆ. ಉದಾ: Many men ಅನೇಕ ಜನರು, much sugar ಬಹಳ ಸಕ್ಕರೆ.

೬೪. Older, oldest ಎಂಬ ರೂಪಗಳನ್ನು ಯಾವದಾದರೊಂದು ಪ್ರಾಣಿಗಾಗಲಿ ಪದಾರ್ಥಕ್ಕಾಗಲಿ ಹಚ್ಚಬಹುದು. Elder ಎಂಬ ಶಬ್ದದ ಅರ್ಥವು ಹಿರೆ ಎಂತಲೂ, eldest[1]ದ ಅರ್ಥವು ಎಲ್ಲರಲ್ಲಿ ಹಿರೆ ಎಂತಲೂ ಆಗುತ್ತದೆ. Old ಎಂಬ ಶಬ್ದವನ್ನು ವಯಸ್ಸು ಹೇಳುವಾಗ ಸಹ ಉಪಯೋಗಿಸುತ್ತಾರೆ.

ಉದಾ: **The child is three years *old*** ಕೂಸು ಮೂರು ವರುಷದ್ದು.

How *old* are you? ನಿನ್ನ ವಯಸ್ಸು ಎಷ್ಟು?

ಅಥವಾ, ನಿನಗೆ ಎಷ್ಟು ವರುಷಗಳಾಗಿವೆ?

ಈ ಮೇರೆಗೆ olderದ ಅರ್ಥವು ವಯಸ್ಸಿನಿಂದ ಹೆಚ್ಚಿನ ಅಥವಾ ದೊಡ್ಡ ಎಂತಾಗುತ್ತದೆ.

ಉದಾ: **I am *older* than you** ನಾನು ನಿನಗಿಂತ (ವಯಸ್ಸಿನಿಂದ) ದೊಡ್ಡವನು.

೬೫. ಶಬ್ದಸಂಗ್ರಹ ೧೨.

Di'li-gent	ಜಾಗ್ರತೆಯುಳ್ಳ, ಉದ್ಯೋಗಿ, ತತ್ಪರ, ಆಸಕ್ತ.	De-sir'a-ble	ಇಷ್ಟ, ಬೇಕಾದ.
Whole'some	ಆರೋಗ್ಯ, ಹಿತಕರ.	Ig'no-rant	ಅಜ್ಞಾನಿಯಾದ, ತಿಳಿಗೇಡಿ.
Gay	ಉಲ್ಲಾಸವುಳ್ಳ, ಸೊಗಸಿನ.	Learn'ed	ವಿದ್ವಾಂಸನಾದ.
Va'lu-a-ble	ಬೆಲೆಯುಳ್ಳ.	A drink	ಕುಡಿಯುವ ಪದಾರ್ಥ, ಪಾ[ನ.
Cost'ly	ಬಹಳ ಕ್ರಯದ.	Friend'ship	ಸ್ನೇಹ, ಗೆಳೆತನ.
Po-lite'	ಆದರಶೀಲ, ಸಭ್ಯ, ಉಪಚಾರದ, ಮರ್ಯಾದೆಯುಳ್ಳ.	Con'duct	ನಡತೆ.
Youth	೧. ಹರೆ, ಪ್ರಾಯ; ೨. ಹರೆಯದವ.	Child'hood	ಚಿಕ್ಕತನ, ಬಾಲ್ಯ.
To pre-fer'	(ಹೆಚ್ಚು) ಮನಸಿಗೆ ಬರು.	Old age	ಮುಪ್ಪು.

---

[1] Elder, eldest ಎಂಬ ಶಬ್ದಗಳನ್ನು ಒಂದೇ ಕುಟುಂಬದೊಳಗಿನ ಮನುಷ್ಯರಿಗೆ ಮಾತ್ರ ಹಚ್ಚಬಹುದು; ಉದಾ: My elder brother ನನ್ನ ಅಣ್ಣ; my eldest son ನನ್ನ ಹಿರೇ ಮಗನು. Elderದ ಮುಂದೆ than ಎಂಬ ಸಮುಚ್ಚಾಯಕಾವ್ಯಯವು ಬರುವದಿಲ್ಲ. He is elder than I ಎಂಬದು ತಪ್ಪು, he is older than I ಅನ್ನಬೇಕು.

ಮುಖಸ್ತುತಿ ಮಾಡು	to flat'ter.	ಕಠಿಣ, ಗಡಚು	dif'fi-cult.
ಮುಖಸ್ತುತಿ ಮಾಡುವವ	a flat'ter-er.	ಬುದ್ಧಿ, ಜಾಣತನ	wis'dom.
ವಯಸ್ಸು	age.	ಜ್ಞಾನ	knowl'edge.
ಚಂಚಲ	fickle.	ಅಜ್ಞಾನ	ig'no-rance.

ಭಾಷಾಂತರಪಾಠ ೧೨.

೬೬. 1. These children are *more* attentive and diligent than those. 2. This boy is the *most* diligent of all. 3. Some poor men are *more* honest than some rich men. 4. Are the richest persons the *most* honest? 5. Water is the *most* wholesome drink. 6. Will you give me a glass of water? 7. He is the *gayest* of the gay. 8. Good books are *more* valuable than fine clothes. 9. Is not milk *more* wholesome than wine? 10. This is the *most* useful of all those books. 11. He is *more* polite than his wife. 12. Friends are *better* than flatterers. 13. The *oldest* friends are the *best.* 14. My *eldest* brother is the *oldest* of those officers. 15. What is your *eldest* brother doing? 16. This farmer has much corn. 17. His conduct is *worse* than that of his younger brother. 18. This book is *more* costly than yours. 19. Iron is the *most* useful of metals. 20. The Greeks were *more* learned than the Romans. 21. What is *more* desirable than virtue?

೧. ನಿಮ್ಮ ತಮ್ಮನಿಗೆ ಎಷ್ಟು ವರುಷ? ೨. ಗೋವಿಂದನಿಗಿಂತ ರಾಮನು (ವಯಸ್ಸಿನಿಂದ) ದೊಡ್ಡವನು. ೩. ನಿಮ್ಮ ಅಕ್ಕ ಎಲ್ಲಿ ಇದ್ದಾಳೆ? ೪. ಆ ಪೊದೆಗಿಂತ ಈ ಗಿಡವು ಹಳೇದು. ೫. ಆ ಮನೆಯು ಎಲ್ಲ ಮನೆಗಳಲ್ಲಿ ಹಳೇದು. ೬. ಈ ಕೂಸು ಒಂದು ವರ್ಷದ್ದು. ೭. ನಿಮ್ಮ ಹಿರಿಯರು[1] ಏನು ಮಾಡುತ್ತಿದ್ದಾರೆ?

[1] Father.

೮. ಆ ನಾಲ್ಕು ಮಂದಿ ಅಣ್ಣತಮ್ಮಂದಿರೊಳಗೆ ಎಲ್ಲರಿಗೂ ಹಿರಿಯವನು ಎಲ್ಲಿರುತ್ತಾನೆ? ೯. ಅವನಿಗೆ ಮನೆಗಳು ಬಹಳ ಅವೆ. ೧೦. ಈ ಹೆಂಗಸು ಬಹಳ ಉದ್ಯೋಗಿಯು. ೧೧. ನನಗೆ ಹೆಚ್ಚು ಅನ್ನ ಬೇಕು. ೧೨. ಈ ಊರಿಗಿಂತ ಆ ಹಳ್ಳಿಯು ಚೆಲೋದು. ೧೩. ಹೆಂಗಸರಿಗಿಂತ ಗಂಡಸರು ಗಟ್ಟಿಗರಿರುತ್ತಾರೆ. ೧೪. ಬಂಗಾರಕ್ಕಿಂತ ಕಬ್ಬಿಣವು ಹೆಚ್ಚು ಉಪಯೋಗವುಳ್ಳದ್ದು. ೧೫. ಆ ಕೆಲಸವು ಹೆಚ್ಚು ಕಠಿಣವಾದದ್ದು. ೧೬. ಬುದ್ಧಿಗಿಂತ ಹೆಚ್ಚಿನದು ಯಾವದು? ೧೭. ಜ್ಞಾನಕ್ಕಿಂತ ಹೆಚ್ಚು ಇಷ್ಟವಾದದ್ದ್ಯಾವದು? ೧೮. ಪೃಥ್ವಿಗಿಂತ ಚಂದ್ರನು[1] ಸಣ್ಣವನು. ೧೯. ಶ್ರೀಮಂತ ಜನರೆಲ್ಲರು ವಿದ್ವಾಂಸರಾಗಿರುತ್ತಾರೋ? ೨೦. ನೀನು ಅವನ ಮುಖಸ್ತುತಿ ಯಾಕೆ ಮಾಡುತ್ತೀ?

೧೩ನೇ ಪಾಠ.

ಕ್ರಿಯಾವಿಶೇಷಣಗಳು.

Adverbs.

೭೭. ಅನೇಕ ವಿಶೇಷಣಗಳಿಗೆ *ly* ಎಂಬ ಪ್ರತ್ಯಯವನ್ನು ಹಚ್ಚುವದರಿಂದ ಕ್ರಿಯಾವಿಶೇಷಣಗಳಾಗುತ್ತವೆ[2]. ಉದಾ:

Wise ಜಾಣ, **wise*ly*** ಜಾಣತನದಿಂದ.

೭೮. True ನಿಜವಾದ, ಇದರಿಂದ tru*ly* ನಿಜವಾಗಿ; due ಯೋಗ್ಯವಾದ, ಇದರಿಂದ du*ly* ಯೋಗ್ಯವಾಗಿ ಎಂಬ ಕ್ರಿಯಾವಿಶೇಷಣಗಳಾಗುತ್ತವೆ.

೭೯. ಕ್ರಿಯಾವಿಶೇಷಣಗಳು ಬಹುತರವಾಗಿ ಅವುಗಳ ಸಂಬಂಧವಿರುವ ಕ್ರಿಯಾಪದಗಳ ಮುಂದೆ ಬರುತ್ತವೆ. ಉದಾ:

He reads *slowly* ಅವನು ಮೆಲ್ಲಗೆ ಓದುತ್ತಾನೆ.

---

[1] ಕನ್ನಡದಲ್ಲಿ 'ಚಂದ್ರ' ಪುಲ್ಲಿಂಗವೆಂದು ತಿಳುಕೊಳ್ಳುತ್ತಾರೆ. ಆದರೆ ಇಂಗ್ಲಿಷದಲ್ಲಿ ಅದು ಸ್ತ್ರೀಲಿಂಗವೆಂದು ತಿಳಿಯುತ್ತಾರೆ; ಮತ್ತು ಒಮ್ಮೊಮ್ಮೆ ಅದನ್ನು ನಪುಂಸಕಲಿಂಗದಂತೆ ಸಹ ಉಪಯೋಗಿಸುವರು.

[2] ಇಂಗ್ಲಿಷದಲ್ಲಿ ಕ್ರಿಯಾವಿಶೇಷಣವು ಕ್ರಿಯಾಪದಕ್ಕಾಗಲಿ, ಮತ್ತೊಂದು ಕ್ರಿಯಾವಿಶೇಷಣಕ್ಕಾಗಲಿ, ಗುಣವಿಶೇಷಣಕ್ಕಾಗಲಿ ಸಂಬಂಧಿಸಿರುತ್ತದೆ.

ಪ್ರಶ್ನಾರ್ಥಕ ಕ್ರಿಯಾವಿಶೇಷಣಗಳು ಮತ್ತು not ಎಂಬ ಕ್ರಿಯಾವಿಶೇಷಣವು, ಇವುಗಳ ಬಗ್ಗೆ ಹಿಂದೆ ಹೇಳಿಯದೆ.

೭೦. ಕ್ರಿಯಾಪದವು ಸಕರ್ಮಕವಿದ್ದರೆ, ಕ್ರಿಯಾವಿಶೇಷಣವನ್ನು ಕರ್ಮಪದದ ಮುಂದೆ ಇಡಬೇಕು. ಉದಾ:

He reads the book *slowly* ಅವನು ಆ ಪುಸ್ತಕವನ್ನು ಮೆಲ್ಲಗೆ ಓದುತ್ತಾನೆ.

೭೧. ಎರಡು ಮೂರು ಕ್ರಿಯಾವಿಶೇಷಣಗಳು ಒಂದೇ ಕ್ರಿಯಾಪದಕ್ಕೆ ಸಂಬಂಧಿಸಿರಲಾಗಿ, ಮೊದಲು ಸ್ಥಲವಾಚಕ, ತರುವಾಯ ರೀತಿವಾಚಕ, ಆ ಮೇಲೆ ಕಾಲವಾಚಕ, ಈ ಮೇರೆಗೆ ಬರುವವು. ಉದಾ:

He was standing *here quietly yesterday* ಅವನು ನಿನ್ನೆ ಇಲ್ಲಿ ಸುಮ್ಮನೆ ನಿಂತಿದ್ದನು.

ಈ ನಿಯಮವನ್ನು ಯಾವಾಗಲೂ ಅನುಸರಿಸುತ್ತಾರೆಂದು ಹೇಳಕೂಡದು.

೭೨. ಕ್ರಿಯಾವಿಶೇಷಣವು ಒಂದು ವಿಶೇಷಣಕ್ಕಾಗಲಿ ಬೇರೊಂದು ಕ್ರಿಯಾವಿಶೇಷಣಕ್ಕಾಗಲಿ ಸಂಬಂಧಿಸಿದ್ದರೆ, ಆ ಕ್ರಿಯಾವಿಶೇಷಣವನ್ನು ಇದರ ಹಿಂದೆ ಇಡಬೇಕು. ಉದಾ:

Very good ಬಹಳ ಒಳ್ಳೇ.
Very wisely ಬಹಳ ಜಾಣತನದಿಂದ.

೭೩. ಮುಂದೆ ಬರೆದಿರುವ ನಿಶ್ಚಯಾರ್ಥಕ, ಕಾಲವಾಚಕ ಮುಂತಾದ ಹಲವು ಕ್ರಿಯಾವಿಶೇಷಣಗಳು ಬಹುತರವಾಗಿ ಮುಖ್ಯ ಕ್ರಿಯಾಪದದ ಹಿಂದೆ ಬರುತ್ತವೆ.

Cer'tain-ly	ನಿಜವಾಗಿ.	Re'al-ly, In-deed'	ನಿಜವಾಗಿ.
Sure'ly	ನಿಶ್ಚಯವಾಗಿ.		
Doubt'less	ನಿಃಸಂಶಯವಾಗಿ.	Chief'ly, Es-pe'cial-ly, Prin'ci-pal-ly	ಮುಖ್ಯವಾಗಿ.
Un-doubt'ed-ly	ನಿಃಸಂದೇಹವಾಗಿ.		

Al'most, Near'ly	ಸ್ವಲ್ಪ ತಪ್ಪಿ, ಬಹುತರ.	Ex-ceed'ing-ly	ಅತಿಶಯವಾಗಿ, ಬಹಳವಾಗಿ.
Quite	ತೀರ, ಪೂರಾ, ಅಗದಿ, ಅಪ್ಪಟ.	Scarce'ly	ಕ್ವಚಿತವಾಗಿ.
Mere'ly, Sim'ply	ಕೇವಲ, ಮಾತ್ರ, ಬರೇ.	Hard'ly	ಪ್ರಯಾಸದಿಂದ.
Of'ten	ಬಾರಿಬಾರಿಗೆ, ಅನೇಕ ಸಾರಿ.	Ve'ry [1]	ಬಹಳ, ಮಹಾ.
Al'ways	ಯಾವಾಗಲೂ.	Sel'dom, Rare'ly, Scarce'ly ev'er	ಕ್ವಚಿತವಾಗಿ, ಅಪರೂಪವಾಗಿ.
Nev'er	ಎಂದಿಗೂ ಇಲ್ಲ.	Gen'er-al-ly	ಸಾಧಾರಣವಾಗಿ.
Ev'er	ಎಂದಿಗೂ, ಯಾವಾಗಲೂ, ಎಂದಾದರೂ.	U'su-al-ly	ವಾಡಿಕೆಯಾಗಿ.

೭೪. Enough [2] ಬೇಕಾದಷ್ಟು, ಸಾಕಾದಷ್ಟು ಎಂಬ ಕ್ರಿಯಾವಿಶೇಷಣವು ಯಾವ ಗುಣವಾಚಕಕ್ಕೆ ಸಂಬಂಧಿಸಿರುತ್ತದೋ ಅದರ ಮುಂದೆ ಬರುತ್ತದೆ. ಮತ್ತು ಆ ಗುಣವಾಚಕವಾದರೂ ಬಹುಶಃ ನಾಮಪದದ ಮುಂದೆ ಇರುತ್ತದೆ.

ಉದಾ: This house is large *enough* ಈ ಮನೆಯು ಬೇಕಾದಷ್ಟು ದೊಡ್ಡದದೆ.

೭೫. ಶಬ್ದಸಂಗ್ರಹ ೧೩.

Here	ಇಲ್ಲಿ, ಇತ್ತ.	Yes'ter-day	ನಿನ್ನೆ.
There	ಅಲ್ಲಿ, ಅತ್ತ.	To-day'	ಈಹೊತ್ತು, ಇಂದು.
Now	ಈಗ.	To-mor'row	ನಾಳೆ.
Just now	ಇದೇ ಈಗ.	Bad'ly	ಕೆಟ್ಟ ರೀತಿಯಿಂದ.

[1] ಇದು ಯಾವಾಗಲೂ ವಿಶೇಷಣಕ್ಕಾಗಲಿ ಕ್ರಿಯಾವಿಶೇಷಣಕ್ಕಾಗಲಿ ಸಂಬಂಧಿಸಿರುತ್ತದೆ. ಉದಾ: *Very* good. *very* often.

[2] ಈ ಶಬ್ದವು ಒಮ್ಮೊಮ್ಮೆ ನಾಮಪದವು, ಒಮ್ಮೊಮ್ಮೆ ವಿಶೇಷಣವು ಆಗುತ್ತದೆ. ಉದಾ: I have *enough* ನನ್ನಲ್ಲಿ ಬೇಕಾದಷ್ಟು ಅದೆ. We have bread *enough* ನಮಗೆ ಬೇಕಾದಷ್ಟು ರೊಟ್ಟಿ ಅದೆ.

Then	ಆಗ.	Se-vere'ly	ಕಠೋರತನದಿಂದ.
Out	ಹೊರಗೆ.	Im-me'di-ate-ly	ಕೂಡಲೆ, ಸಂಗಡಲೆ.
Be-fore'	ಹಿಂದೆ, ಪೂರ್ವದಲ್ಲಿ.	A foe	ವೈರಿ, ಹಗೆ.
For'ward	ಮುಂದೆ.	A fit	ರೋಗದ ಜೋರು, ಸನ್ನಿ ವಿರೋಣ.
Up	ಮೇಲೆ.	Mi'ser-y	ಕಷ್ಟ, ದುಃಖ.
Down	ಕೆಳಗೆ.	Mad'ness	ಹುಚ್ಚು.
Hur'ried-ly	ಅವಸರದಿಂದ.	An'ger	ಸಿಟ್ಟು, ಕೋಪ.
To-geth'er	ಏಕತ್ರವಾಗಿ, ಒಟ್ಟುಗೂಡಿ.	To de-vour'	ಗಪಗಪ ತಿನ್ನು, ಹರ ಕೊಂಡು ತಿನ್ನು.
Right'e-ous (ರೈಚಸ್)	ಪುಣ್ಯಶೀಲ, ಧಾರ್ಮಿಕ, ನೀತಿವಂತ.	Care'ful-ly	ಜಾಗ್ರತೆಯಿಂದ.
Whole (ಹೋಲ್)	ಎಲ್ಲ, ಯಾವತ್ತು, ಇಡಿ.	A dream	ಕನಸು.
A mis-take'	ತಪ್ಪು.	Im-pa'tient-ly	ಆತುರದಿಂದ.
ಹೀಗೆ, ಇಷ್ಟು	so [1].	(ತಪ್ಪದೆ) ನೇಮಿಸಿದ ಹೊತ್ತಿಗೆ, ತಕ್ಕ ಸಮಯಕ್ಕೆ	punc'tu-al-ly,
ಒಳಗೆ	in.		
ಒಮ್ಮೊಮ್ಮೆ, ಆಗಾಗ್ಗೆ	some'times.	ಆಶ್ಚರ್ಯಕರವಾದ	won'der-ful.
ತಾಸುತಾಸಿಗೆ	hour'ly [2].	ತಿರಿಗಿ ಬರು	to re-turn.
ದಿನಾಲು	dai'ly [2].	ತಿರಿಗಿ	back.
ತಿಂಗತಿಂಗಳಿಗೆ	month'ly [2].	ತೀವ್ರ	fast.
ವರುಷವರುಷಕ್ಕೆ	year'ly [2].	ತಿರುಗಿ, ಪುನಃ	a-gain'.

[1] ಇದು ಒಮ್ಮೊಮ್ಮೆ ದರ್ಶಕಸರ್ವನಾಮ ಸಹ ಆಗುತ್ತದೆ. ೧ನೇ ಪುಸ್ತಕ, ಕಲಮು ೬೫ ನೋಡು.

[2] ಈ ನಾಲ್ಕು ಶಬ್ದಗಳು ವಿಶೇಷಣಗಳು ಸಹ ಆಗುತ್ತವೆ; ಆಗ ಅವುಗಳ ಅರ್ಥಗಳು ತಾಸು ತಾಸಿಗೆ ಆಗುವ, ದಿನಂಪ್ರತಿಯು, ತಿಂಗತಿಂಗಳಿನ, ಪ್ರತಿವರುಷದ ಎಂತ ಅನುಕ್ರಮವಾಗಿ ಆಗುತ್ತವೆ. ಉದಾ: Hourly prayers ತಾಸು ತಾಸಿಗೆ ಆಗುವ ಪ್ರಾರ್ಥನೆಗಳು; a daily paper ದಿನಂಪ್ರತಿ ಹೊರಡುವ ವರ್ತಮಾನ ಪತ್ರ; a monthly magazine ತಿಂಗತಿಂಗಳಿಗೆ ಹೊರಡುವ ಸಮಾಚಾರ ಪುಸ್ತಕ; his yearly income ಅವನ ಪ್ರತಿ ವರುಷದ ಆದಾಯ.

ಭಾಷಾಂತರಪಾಠ ೧೩.

೭೬. 1. The good boy reads the whole lesson *carefully.* 2. *Where* shall I go? 3. He will *not* swim. 4. You write *very badly.* 5. The master was punishing the disobedient boy *severely.* 6. We were going *there hurriedly yesterday.* 7. Will you come *here to-morrow?* 8. I shall bring him *here immediately.* 9. He is sitting *there impatiently.* 10. *Certainly* this was a righteous man. 11. Your father will *undoubtedly* punish you. 12. *Indeed* this is a *very* bad thing. 13. The gentleman will *surely* come. 14. The dishonest man will *really* not pay you anything. 15. Anger is *often* a short fit of madness. 16. I *almost* hate him. 17. I was *merely* taking my blotting-paper. 18. You were *nearly* making a mistake. 19. He is *quite* right. 20. The hungry man is devouring his food. 21. I *rarely* see you and John *together.* 22. He is a foe to virtue. 23. Misery is *often* the fruit of vice. 24. Wisdom and youth *seldom* go *together*[1].

೧. ನೀನು ತೀವ್ರವಾಗಿ ನಡೆಯುತ್ತೀ. ೨. ಅವನು ಬಹಳ ಎತ್ತರನಿದ್ದಾನೆ. ೩. ನಾನು ಇಲ್ಲಿ ಇದ್ದೇನೆ. ೪. ನಾನೇ ಅಲ್ಲಿಗೆ ಹೋಗುವೆನು. ೫. ಅವನು ನಿಶ್ಚಯವಾಗಿ ತಿರಿಗಿ ಬರುವನು. ೬. ಅವನು ನಿನ್ನ ಹಣವನ್ನು ನಿನಗೆ ತಿರಿಗಿ ಕೊಡನೆಂಬದು ನಿಶ್ಚಯವು. ೭. ಇದು ಬಹು ಆಶ್ಚರ್ಯಕರವಾದ ಮಾತೇ ಸರಿ. ೮. ಇದೇನು ಬಹಳ ಕಠಿಣವಾದ ಕೆಲಸವಲ್ಲೆಂಬದು ನಿಜವು. ೯. ಅವನು ನಿನಗಿಂತ ದೊಡ್ಡವನು. ೧೦. ಆ ಮುತ್ತು ಬಹಳ ಸಣ್ಣದು. ೧೧. ನಾನು ನನ್ನ ಚಾಕು ಮಾತ್ರ ತೆಗೆದುಕೊಳ್ಳುತ್ತಿದ್ದೆನು. ೧೨. ಅವನು ಎಂದಾದರೂ ಸುಳ್ಳು ಹೇಳುವನೋ? ೧೩. ನೀನು ಅಲ್ಲಿ ಎಂದಿಗೂ ಇರಲಿಕ್ಕಿಲ್ಲ. ೧೪. ನಾನು ತಿರಿಗಿ ಹೀಗೆ ಎಂದಿಗೂ ಮಾಡಲಿಕ್ಕಿಲ್ಲ. ೧೫. ಅವನು ನನಗೆ ಹೀಗೆ ಹೇಳುತ್ತಾನೆ. ೧೬. ಅವನು ಹೀಗೆ ಅನ್ನುತ್ತಾನೆ. ೧೭. ಆಕೆಗೆ ಹೀಗೆ

[1] Go together ಇದರ ಭಾಷಾಂತರ 'ಕೂಡಿ ಇರುತ್ತವೆ' ಎಂತ ಮಾಡಬೇಕು.

ತೋರುತ್ತದೆ. ೧೮. ರಾಮನು ವಿದ್ವಾಂಸನು; ಗೋವಿಂದನಾದರೂ ಅಂಥವನೇ. ೧೯. ಆ ಹಣ್ಣು ಇಷ್ಟು ಸೀ ಅದೆಯೋ? ೨೦. ಅವನು ಇಷ್ಟು ಜಾಣನಿದ್ದಾನೆ. ೨೧. ನೀನು ಯಾವಾಗಲೂ ಹೀಗೆ ಅನ್ನುತ್ತೀ. ೨೨. ನನಗೆ ನಿಜವಾಗಿ ಈ ಮಾತು ಗೊತ್ತಿಲ್ಲ. ೨೩. ಅವನ ಅಣ್ಣನು ಇಲ್ಲಿಗೆ ಯಾವಾಗಲೂ ಬರುತ್ತಾನೆ. ೨೪. ಅವನು ಯಾವಾಗಲೂ ನನಗೆ ಆ ಚಿತ್ರಗಳನ್ನು ತೋರಿಸುತ್ತಾನೆ. ೨೫. ನಿನ್ನ ಸ್ನೇಹಿತನು ಪದೇಪದೇ ನನ್ನನ್ನು ಅಲ್ಲಿಗೆ ಕರೆಯುತ್ತಾನೆ. ೨೬. ನಾವು ಒಮ್ಮೊಮ್ಮೆ ಚಹಾ ಕುಡಿಯುತ್ತೇವೆ; ಒಮ್ಮೊಮ್ಮೆ ಹಾಲು ಕುಡಿಯುತ್ತೇವೆ. ೨೭. ಅವನು ಒಳಗೆ ಇದ್ದಾನೆ. ೨೮. ಅವರು ಮುಂದೆ ಹೋಗುತ್ತಾರೆ. ೨೯. ನಾನು ನಿನ್ನನ್ನು ದಿನಾಲು ಅಲ್ಲಿ ನೋಡುತ್ತೇನೆ. ೩೦. ಅವನಿಗೆ ತಿಂಗಳಿಗೆ ಸಂಬಳವೇನು? ೩೧. ನಾನು ನಾಳೆಗೆ ನಿಶ್ಚಯವಾಗಿ ಹೋಗುತ್ತೇನೆ. ೩೨. ಅವನು ಮಹಾ ಟಕ್ಕನಿದ್ದಾನೆ. ೩೩. ಆಕೆಯು ಬಹಳ ಮೆಲ್ಲಗೆ ನಡೆಯುತ್ತಾಳೆ. ೩೪. ನಾನು ಇಲ್ಲಿಗೆ ತಪ್ಪದೆ ನೇಮಿಸಿದ ಹೊತ್ತಿಗೆ ಬರುತ್ತೇನೆ. ೩೫. ಅಲ್ಲಿ ಎಷ್ಟು ಮಂದಿ ಹೆಂಗಸರಿದ್ದರು?

೧೪ನೇ ಪಾಠ.

ಕ್ರಿಯಾವಿಶೇಷಣಗಳ ತಾರತಮ್ಯಭಾವ.

Comparison of Adverbs.

೭೭. ವಿಶೇಷಣಗಳಿಗೆ *ly* ಎಂಬ ಪ್ರತ್ಯಯವು ಹತ್ತಿ ಆದ ಕ್ರಿಯಾವಿಶೇಷಣಗಳಲ್ಲಿ ಅನೇಕ ಕ್ರಿಯಾವಿಶೇಷಣಗಳ ತಾರತಮ್ಯಭಾವವನ್ನು ವಿಶೇಷಣಗಳಂತೆ more, most ಎಂಬ ಶಬ್ದಗಳಿಂದ ತೋರಿಸುವರು. ಉದಾ:

Positive.	*Comparative.*	*Superlative.*
Wise'ly	*more* wise'ly	*most* wise'ly.

೭೮. ಕೆಲವು ಕ್ರಿಯಾವಿಶೇಷಣಗಳಿಗೆ *er, est* ಎಂಬ ಪ್ರತ್ಯಯಗಳು ಹತ್ತುತ್ತವೆ. ಉದಾ:

Positive.		*Comparative.*	*Superlative.*
Soon	ಬೇಗ	soon*er*	soon*est*.
Of'ten	ಪದೇಪದೇ	often*er*	often*est*.
Near [1]	ಸಮೀಪ	near*er*	near*est* ಅಥವಾ next.

೭೯. ಕೆಲವು ಕ್ರಿಯಾವಿಶೇಷಣಗಳ ರೂಪಗಳು ನಿಯಮದಂತೆ ಆಗುವದಿಲ್ಲ. ಉದಾ:

Positive.		*Comparative.*	*Superlative.*
Well	ಚನ್ನಾಗಿ, ನೆಟ್ಟಗೆ	bet'ter	best.
Ill, Bad'ly	ಕೆಟ್ಟ	worse	worst.
Lit'tle	ಸ್ವಲ್ಪ, ತುಸು	less	least.
Much	ಬಹಳ	more	most.
Far	ದೂರ	farth'er	farth'est.
Forth	ಮುಂದೆ	furth'er	furth'est.

೮೦. ಶಬ್ದಸಂಗ್ರಹ ೧೪.

Wil'ling-ly	ಸಂತೋಷದಿಂದ.	Fre'quent-ly	ಪದೇಪದೇ, ಮೇಲಿಂದ ಮೇಲೆ.
Un-wil'ling-ly	ಮನಸ್ಸಿಲ್ಲದೆ.	Con'stant-ly	ಸದಾ, ನಿರಂತರ, ಯಾವಾಗಲೂ.
Dis-tinct'ly	ಸ್ಪಷ್ಟವಾಗಿ.	Mer'ri-ly	ಉಲ್ಲಾಸದಿಂದ.
Cor-rect'ly	ಶುದ್ಧವಾಗಿ.	Sweet'ly	ಮಧುರವಾಗಿ, ಸೀಯಾಗಿ.
Fool'ish-ly	ಮೂಢತನದಿಂದ.	Just'ly	ನ್ಯಾಯವಾಗಿ, ಸರಿಯಾಗಿ.

[1] Near ಎಂಬದು ವಿಶೇಷಣ ಸಹ ಆಗುತ್ತದೆ. ಆಗ ಅದರ ಮುಂದೆ ಚತುರ್ಥಿವಿಭಕ್ತಿ ಬರುತ್ತದೆ. ಹಾಗು ಆ ಚತುರ್ಥಿಯು ಹಿಂದಿನ to ಗುಪ್ತವಿರುತ್ತದೆ. ಉದಾ: My friend sits *near me* ನನ್ನ ಸ್ನೇಹಿತನು ನನ್ನ ಹತ್ತರ ಕೂತುಕೊಳ್ಳುತ್ತಾನೆ. Like = ಸಮವಾದ, ಅಂಥ; unlike = ಅಸಮಾನ, ಭಿನ್ನ ಎಂಬ ವಿಶೇಷಣಗಳ ಮುಂದೆ ಬರುವ ಚತುರ್ಥಿಯು to ಅದರೂ ಗುಪ್ತವಿರುತ್ತದೆ.

Di'li-gent-ly	ತತ್ಪರವಾಗಿ, ಆಸಕ್ತಿಯಿಂದ.	Sud'den-ly	ಅಕಸ್ಮಾತ್ತಾಗಿ, ಫಕ್ಕ
Per'fect-ly	ಸಂಪೂರ್ಣವಾಗಿ, ಪೂರಾ.	Strict'ly	೧. ಬಿಗಿಯಾಗಿ; ೨. ಕ ವಾಗಿ, ಸರಿಯಾದ ರೀತಿಯ
Great'ly	ಬಹಳವಾಗಿ.	To pro-nounce'	ಉಚ್ಚರಿಸು.
Gent'ly	ಸೌಮ್ಯವಾಗಿ, ಮೆಲ್ಲಗೆ, ನಮ್ರಭಾವದಿಂದ.	To sat'is-fy	ಸಮಾಧಾನಮಾಡು, ತೃಪ್ತಿಪಡಿಸು.
A word	ಶಬ್ದ, ಮಾತು.	To un'der-stand"	ತಿಳಿ, ಗ್ರಹಿಸಿಕೊಳ್ಳು.
A sen'tence	ವಾಕ್ಯ.	To a-larm'	೧. ಬೆದರಿಸು; ೨. ಸೂಚಿಸಿ ಎಚ್ಚರಗೊ ಎಬ್ಬಿಸು.
A cus'tom	ನಡತೆ, ಪದ್ಧತಿ, ವಾಡಿಕೆ.	Bar'bar-ous	ಕಾಡ, ಕ್ರೂರ
An or'na-ment	ಒಡವೆ, ಭೂಷಣ, ಆಭರಣ	An ac'ci-dent	ಅಕಸ್ಮಾತ್ತಾಗಿ ಸಂಭ ಸಂಗತಿ, ಅಪಾಯ.
Rent	ಬಾಡಿಗೆ.	Tax	ತೆರಿಗೆ, ಕಂದಾಯ.
Toll, duty	ಸುಂಕ.		

ಭಾಷಾಂತರಪಾಠ ೧೪.

೮೧. 1. We pay our rent monthly. 2. I often writ letter to my cousin. 3. I seldom get an answer. 4. T lion's greatest ornament is his beautiful mane. 5. The bi are singing merrily. 6. We never had such an accid before. 7. This accident will greatly alarm his frien 8. Most[1] people like horses. 9. What is like thee?[2] 10. T accident is not unlike my dream. 11. This story is not unl yours. 12. The house stands[3] near the river. 13. Will y come nearer? 14. I now see him *more* frequently than befo 15. You write *more* correctly than most boys of your cla 16. You learn your lessons well. 17. John learns them *bet*

[1] Most ಎಂಬ ವಿಶೇಷಣದ ಹಿಂದೆ the ಎಂಬ ಉಪಪದವು ಅವಶ್ಯವಾಗಿ ಬೇಕಾಗುವದಿಲ್ಲ.

[2] ಪುಟ ೨೮, ಟಿಪ್ಪಣಿ 4 ನೋಡು.

[3] ಇಲ್ಲಿ stands ಎಂಬದರ ಭಾಷಾಂತರ 'ಅದೆ' ಎಂತ ಮಾಡಬೇಕು.

18. Which animal do you like *best?* 19. Will you pronounce that word again *more* distinctly? 20. I will perfectly satisfy you. 21. You hardly understand the sentence. 22. We have many barbarous customs. 23. His daughter sings beautifully. 24. I will learn *more* diligently. 25. My parents will *most* willingly grant my request.

೧. ನಾವು ನಿಮಗೆ ಸಂತೋಷದಿಂದ ಸಹಾಯಮಾಡುವೆವು. ೨. ರೊಟ್ಟಿಯವನು ನಾಳೆಗೆ ಇದಕ್ಕೂ ಬೇಗ ಬರುವನು. ೩. ಚಿಗರಿಯು ಹೆಚ್ಚು ದೂರ ಹೋಗುತ್ತಿತ್ತು. ೪. ಅವನ ಓದೋಣ ಕೆಟ್ಟದು, ಬರೆಯೋಣವು ಅದಕ್ಕೂ ಕೆಟ್ಟದು. ೫. ಎಲ್ಲರಿಗಿಂತ ಬೇಗ ಯಾರು ಹೋಗುವರು? ೬. ನಾವು ಸಾಧಾರಣವಾಗಿ ದಿನಾಲು ಎರಡು ಪಾಠಗಳನ್ನು ಕಲಿಯುತ್ತೇವೆ. ೭. ಯಾವ ಹುಡುಗನು ತನ್ನ ಪಾಠವನ್ನು ಚನ್ನಾಗಿ (ತಯಾರು) ಮಾಡುತ್ತಾನೆ? ೮. ಕಾರಕೂನನು ಆ ಪತ್ರವನ್ನು ಬಹಳ ಜಾಗ್ರತೆಯಿಂದ ಬರೆಯುತ್ತಿದ್ದನು. ೯. ನೀನು ಯಾವಾಗಲೂ ಕೆಲಸದಲ್ಲಿರುತ್ತೀ. ೧೦. ನಮ್ಮ ಉಪ್ಪಾರನು ಈ ಕೆಲಸವನ್ನು ಇದಕ್ಕೂ ಬೇಗ ಮಾಡುವನು. ೧೧. ನಿನ್ನ ಅಕ್ಷರ[1] ಬಹಳ ಕೆಟ್ಟವು. ೧೨. ಅವನು ನನಗೆ ಈ ಪ್ರಶ್ನವನ್ನು ಪದೇಪದೇ ಕೇಳುತ್ತಿರುತ್ತಾನೆ. ೧೩. ಎಷ್ಟೋ ಜನರು ಮಾತಾಡುವದು ಬಹಳ, ಮಾಡುವದು ಸ್ವಲ್ಪ. ೧೪. ನೀನು ಬಹಳ ಆಲೋಚನೆ ಮಾಡುತ್ತೀ. ೧೫. ಈ ಹಣ್ಣುಗಳು ಬಹಳ ಸೀಯಾಗಿವೆ. ೧೬. ನಿಮ್ಮ ಹುಡುಗನು ಶುದ್ಧವಾಗಿ ಬರೆಯುತ್ತಾನೆ. ೧೭. ಅವನು ಯಾವಾಗಲೂ ಸತ್ಯ ಮಾತಾಡುತ್ತಾನೆ. ೧೮. ನೀನು ಅವನನ್ನು ಹ್ಯಾಗೆ ತೃಪ್ತಿಬಡಿಸುವಿ? ೧೯. ಅವನು ನಿನಗೆ ಎಂದಾದರೂ ಭೆಟ್ಟಿಯಾಗುತ್ತಾನೋ? ೨೦. ಅವನು ಇದೇ ಈಗ ಇಲ್ಲಿದ್ದನು.

[1] ಅಕ್ಷರ = handwriting.

೧೫ನೇ ಪಾಠ.

ವಿಧ್ಯರ್ಥ.

Imperative Mood.

೮೨. ಕ್ರಿಯಾಪದದ ಮೂಲರೂಪದಿಂದ ಎರಡೂ ವಚನಗಳಲ್ಲಿ ವಿಧ್ಯರ್ಥದ ಅರ್ಥವಾಗುತ್ತದೆ[1].

ಉದಾ: Write ಬರೆ ಅಥವಾ ಬರೆಯಿರಿ.

ಇಲ್ಲಿ ದ್ವಿತೀಯಪುರುಷವು ಅಧ್ಯಾಹೃತವದೆ ಎಂದು ತಿಳುಕೊಳ್ಳಬೇಕು.

ಅಪ್ಪಣೆಯು ಅವಶ್ಯವಾದದ್ದಿದ್ದರೆ, do ಎಂಬ ಸಹಾಯಕ್ರಿಯಾಪದವನ್ನು ಪ್ರಯೋಗಿಸಿ ಅದನ್ನು ಗಟ್ಟಿಯಾಗಿ ಉಚ್ಚರಿಸಬೇಕು.

ಉದಾ: Do write ಬರೆ, ಬರೆ ಬರೆ ಅಥವಾ ಬರೆಯಿರಿ ಬರೆಯಿರಿ.

೮೩. ನಿಷೇಧಾರ್ಥದಲ್ಲಿ Do not write ಬರೆಯಬೇಡ ಎಂತ ಪ್ರಯೋಗವಾಗುತ್ತದೆ. ಇಲ್ಲಿ do ಎಂಬದು ಕೇವಲ ಸಹಾಯಕ್ರಿಯಾಪದವೇ ಹೊರ್ತು ಅದು ನಿಶ್ಚಯಾರ್ಥದಂತೆ ಆವಶ್ಯಕತೆಯನ್ನು[2] ತೋರಿಸುವದಿಲ್ಲ.

೮೪. To be, to have ಎಂಬ ಧಾತುಗಳ ವಿಧಿರೂಪಗಳು be, have ಎಂತ ಆಗುತ್ತವೆ.

---

[1] ವಿಧ್ಯರ್ಥದಲ್ಲಿ ಸರ್ವನಾಮದ ಮೇಲೆ ವಿಶೇಷ ಜೋರು ಇದ್ದರೆ, ಅದನ್ನು ಅಧ್ಯಾಹಾರ ಮಾಡದೆ ಗಟ್ಟಿಯಾಗಿ ಉಚ್ಚರಿಸಬೇಕು. ಉದಾ:

ಅಥವಾ, *You* write, / Do *you* write } ನೀನೇ ಬರೆ.

Do not *you* write ನೀನು ಬರೆಯಬೇಡ.

[2] ನಿಶ್ಚಯದರ್ಶಕ ವಿಧ್ಯರ್ಥದಲ್ಲಿ do ಎಂಬ ಸಹಾಯಕ್ರಿಯಾಪದವು ಆವಶ್ಯಕತೆಯನ್ನು ತೋರಿಸುವಂತೆಯೇ ಅದನ್ನು ವರ್ತಮಾನ ಭೂತಕಾಲಗಳಲ್ಲಿ ಕ್ರಿಯೆಯ ಮೇಲೆ ಜೋರು ಕೊಡುವದಕ್ಕಾಗಿ ಉಪಯೋಗಿಸುತ್ತಾರೆ. ಉದಾ: I *do* write ನಾನು ಬರೆದೇ ಬರೆಯುತ್ತೇನೆ; I *did* write ನಾನು ನಿಶ್ಚಯವಾಗಿ ಬರೆದೆನು. ಆದರೆ ಪ್ರಶ್ನಾರ್ಥಕವಾಕ್ಯಗಳಲ್ಲಿಯೂ ಎಲ್ಲ ತರದ ನಿಷೇಧಾರ್ಥಕ ವಾಕ್ಯಗಳಲ್ಲಿಯೂ do ಎಂಬದರ ಅರ್ಥವೇ ಆಗುವದಿಲ್ಲ.

ಇಂಗ್ಲಿಷ ಭಾಷೆಯೊಳಗೆ ವಿಧ್ಯರ್ಥದ ರೂಪಗಳು ಪ್ರಥಮ, ತೃತೀಯ ಪುರುಷ ಗಳಲ್ಲಿ ಇಲ್ಲ. ಅವುಗಳಿಗೆ ಬದಲಾಗಿ ಮುಂದೆ ಬರೆದ ರೂಪಗಳನ್ನು ರೂಢಿಯಲ್ಲಿ ಪ್ರಯೋಗಿಸುವದು ಬಹಳ.

Let me write	ನಾನು ಬರೆಯುವೆ.
Let us write	ನಾವು ಬರೆಯೋಣ.
Let him, her, it write	ಅವನು, ಅವಳು, ಅದು ಬರೆಯಲಿ.
Let them write	ಅವರು, ಅವು ಬರೆಯಲಿ.

೮೫. ಪ್ರಶ್ನಾರ್ಥಕವಾಕ್ಯವನ್ನು ಒಮ್ಮೊಮ್ಮೆ ಬಿನ್ನಹ ಮಾಡಿಕೊಳ್ಳುವದ ಕ್ಕಾಗಲಿ, ಒಬ್ಬರಿಗೆ ಯಾವದಾದರೊಂದು ಕೆಲಸಮಾಡು ಎಂದು ಮರ್ಯಾದೆ ಯಿಂದ ಹೇಳುವದಕ್ಕಾಗಲಿ, ವಿಧ್ಯರ್ಥದಂತೆ ಪ್ರಯೋಗಿಸುವರು. ಉದಾ:

Will you read? ಸ್ವಲ್ಪ ಓದುತ್ತೀರಾ? ಓದು ನೋಡೋಣ.

೮೬. ತನಗಿಂತ ಕಡಿಮೆ ಯೋಗ್ಯತೆಯುಳ್ಳ ಮನುಷ್ಯನಿಗೆ ಅಪ್ಪಣೆಮಾಡು ವಾಗ, ಮಾತಿನ ಕಠೋರತನವನ್ನು ಕಳೆದುಬಿಡುವದಕ್ಕಾಗಿ ವಿಧ್ಯರ್ಥದ ವಾಕ್ಯ ಗಳಲ್ಲಿಯೂ, ಅದೇ ಅರ್ಥದ ಪ್ರಶ್ನಾರ್ಥಕವಾಕ್ಯಗಳಲ್ಲಿಯೂ please ಇಲ್ಲವೆ if you please ಎಂಬ ಶಬ್ದಗಳನ್ನು ಹಾಕುವ ರೂಢಿಯು ಸಭ್ಯವಾದ ಸಂಭಾ ಷಣದಲ್ಲಿ ಬಹಳ. ಉದಾ:

Please, hand me that pen-knife	ಆ ಚಾಕು ಅಷ್ಟು ಇತ್ತಲಾಗ ಕೊಡು.
Bring me some water, if you please	ನನಗೆ ಒಂದಿಷ್ಟು ನೀರು ತಂದುಕೊಡು.
Will you, please, give me that book?	ಆ ಪುಸ್ತಕವನ್ನಷ್ಟು ನನಗೆ ಕೊಡುತ್ತೀರಾ?

೮೭. ಶಬ್ದಸಂಗ್ರಹ ೧೫.

Thought, A thought	ಆಲೋಚನೆ, ವಿಚಾರ.	The com'pa-ny	ಸಹವಾಸ, ಸಂಗತಿ.
		Good com'pa-ny	ಒಳ್ಳೇ ಸಂಗತಿ.
An ap-pear'ance (VI)	ಮುದ್ರೆ, ಸ್ವರೂಪ.	To de-fraud'	ಮೋಸಗೊಳಿಸು, —ಮಾಡು, ವಂಚಿಸು.
An oint'ment (IV)	ತೈಲ.	To trans-late'	ಭಾಷಾಂತರಮಾಡು.
Pa'tri-ot-ism	ಸ್ವದೇಶಾಭಿಮಾನ.	To ex-plain'	ಅರ್ಥ ಹೇಳು, ತಿಳಿಸಿಕೊಡು.

Si′lence	೧. ಮೌನ, ಗಪ್ ಚುಪ್ ಇರೋಣ; ೨. ಶಾಂತತೆ.
Si′lent	ಸುಮ್ಮನಾದ.
Theft [1]	ಕಳವು, ತುಡುಗು.
Robbery [1]	ಸುಲಿಗೆ, ಲೂಟಿ.
Aft′er-wards	ತರುವಾಯ.
To be-have′	ನಡಕೊಳ್ಳು.
To treat	ನಡಿಸು.
To hon′our	ಸನ್ಮಾನಿಸು, ಮಾನ ಕೊಡು.
To con-si′der	ಆಲೋಚಿಸು, ತಿಳಿದುನೋಡು.
To a-void′	ತಪ್ಪಿಸು, ವರ್ಜಿಸು, ಜರಿ.
To en-cour′age	ಉತ್ತೇಜನಕೊಡು, ಧೈರ್ಯಗೊಳಿಸು, ಹುರಿದುಂಬಿಸು.
To com-mit	(ಕೆಟ್ಟ ಕೆಲಸ) ಮಾಡು.
Pi′ous	ಭಕ್ತಿವಂತ, ಧರ್ಮಿಷ್ಠ.
Polite	ಆದರಶೀಲ, ಸಭ್ಯ, ಮರ್ಯಾದೆಯುಳ್ಳ.

ಭಾಷಾಂತರಪಾಠ ೧೫.

೮೮. 1. *Do* not *steal.* 2. *Do* not *tell* lies. 3. *Do* not *kill.* 4. *Do* not *defraud.* 5. *Honour* your father and mother. 6. *Remember* this well. 7. *Do* not *behave* foolishly. 8. *Avoid* the company of wicked men. 9. He wants good company. 10. A good name is very precious. 11. *Let us help* our friends. 12. *Let us* not *encourage* flatterers. 13. Patriotism is one of the noblest virtues. 14. Shall I ever again see such holy men? 15. I shall never do so again. 16. *Let them* not *shut* the shop so soon. 17. Why do you call him back so soon? 18. I do not want so much rice. 19. Where do you keep your books? 20. Why do you place your book here? 21. *You explain* this sentence to him. 22. *Be* silent. 23. *Consider* well. 24. *Treat* him kindly. 25. He has always a noble [2] appearance. 26. What are your thoughts? 27. *Do give* some bread to that poor man. 28. Do virtue and vice ever go together? 29. *Do* not *beat* the dog, it will bite you. 30. *Be* pious, and you will be happy. 31. *Please, give* me some ointment.

[1] Theft ಅಂದರೆ ಗುಪ್ತರೀತಿಯಿಂದ ಕದಿಯೋಣ. Robbery ಅಂದರೆ ಬಲುಮೆಯಿಂದ ಅಪಹಾರಮಾಡೋಣ, ಸುಲುಕೊಳ್ಳೋಣ, ಲೂಟೀಮಾಡೋಣ. [2] Noble=ಭವ್ಯ, ಗಂಭೀರ.

೧. ಓದು. ೨. ನೀನೇ ಓದು. ೩. ನೀವೇ ಹೋಗಿರಿ. ೪. ಈ ಪುಸ್ತಕವನ್ನು ಅವನಿಗೆ ಕೊಡು. ೫. ನಿನ್ನ ಆಲೋಚನೆಗಳನ್ನು ನನಗೆ ಹೇಳು. ೬. ನಾಳೆ ಬರಬೇಡ. ೭. ತೀವ್ರವಾಗಿ ತಿರಿಗಿ ಬಾ. ೮. ಬಾಗಿಲು ಇಕ್ಕು. ೯. ನಿಮ್ಮ ಪುಸ್ತಕಗಳನ್ನು ಮುಚ್ಚಿರಿ. ೧೦. ನಾವು ಅವನಿಗೆ ಇನಾಮು ಕೊಡೋಣ. ೧೧. ಅವನಿಗೆ ವೈದ್ಯನ ಮನೆ ತೋರಿಸು. ೧೨. ಕೆಳಗೆ ಕೂತುಕೊಳ್ಳಿರಿ. ೧೩. ಮುಂದೆ ಬಾ. ೧೪. ರಾಮನನ್ನು ಇಲ್ಲಿಗೆ ಕಳುಹು. ೧೫. ನಾವು ಹೊರಗೆ ಹೋಗೋಣ. ೧೬. ದುಷ್ಟ ಜನರನ್ನು ಹೊಗಳಬೇಡಿರಿ. ೧೭. ನಾವು ಆ ಕೆಲಸವನ್ನು ಸಂತೋಷದಿಂದ ಮಾಡೋಣ. ೧೮. ಈ ಅರಿವೆಗಳನ್ನಷ್ಟು ಸೆಳೆ[1]. ೧೯. ನನಗೆ ಬೇಡ. ೨೦. ಹೀಗೋ? ೨೧. ಹೌದು, ಹಾಗೇ. ೨೨. ನನಗೆ ಹೀಗೆ ತೋರುತ್ತದೆ. ೨೩. ನೀನು ನಿನ್ನ ತಪ್ಪು ಮುಚ್ಚಿಕೊಳ್ಳಬೇಡ. ೨೪. ನನಗೆ ಮತ್ತಿಷ್ಟು ಮಸಿ ಕೊಡು. ೨೫. ಅವನನ್ನು ನಂಬಬೇಡ. ೨೬. ಆ ಹಾಲು ಕುಡಿ. ೨೭. ಅವನನ್ನು ಇಲ್ಲಿ ತಾ. ೨೮. ನೀನಾದರೂ ಅವನನ್ನು ಕರೆ. ೨೯. ನೀನು ನಿನ್ನ ಪುಸ್ತಕವನ್ನು ತೆರೆ. ೩೦. ಆ ಶಬ್ದವನ್ನು ತಿರಿಗಿ ಉಚ್ಚರಿಸು. ೩೧. ನಾನು ನಿನಗೆ ಒಂದು ಮಾತು ಹೇಳುತ್ತೇನೆ[2]. ೩೨. ಸುಳ್ಳು ಮಾತಾಡಬೇಡ. ೩೩. ಈ ವಾಕ್ಯದ ಭಾಷಾಂತರಮಾಡು. ೩೪. ನನ್ನನ್ನು ಕ್ಷಮಿಸಿರಿ. ೩೫. ಮತ್ತಿಷ್ಟು ಸಮೀಪ ಬಾ.

೧೬ನೇ ಪಾಠ.

ಸಂಬೋಧನ.

Vocative Case.

೮೯. ಪ್ರಥಮಾವಿಭಕ್ತಿಯನ್ನು ಸಂಬೋಧನದಂತೆ ಸಹ ಪ್ರಯೋಗಿಸುತ್ತಾರೆ. ಒಮ್ಮೊಮ್ಮೆ ಸಂಬೋಧನದ ಹಿಂದೆ O = ಏ ಎಂಬ ಸಂಬೋಧಕಾವ್ಯಯವು ಬರುತ್ತದೆ. ಇಂಗ್ಲಿಷದಲ್ಲಿ ಸಂಬೋಧನವಿಭಕ್ತಿಯು ಕನ್ನಡದಂತೆ ವಾಕ್ಯದ ಆರಂಭದಲ್ಲಿ, ಮಧ್ಯದಲ್ಲಿ, ಇಲ್ಲವೆ ಅಂತ್ಯದಲ್ಲಿ ಬರಬಹುದು. ಅದಕ್ಕೆ ಉಪಪದವು ಹತ್ತುವದಿಲ್ಲ.

---

1) Wash.

2) ಇಂಥಲ್ಲಿ ಇಂಗ್ಲಿಷದೊಳಗೆ ಭವಿಷ್ಯತ್ಕಾಲವನ್ನು ಹಾಕಬೇಕು.

೯೦. ಶಬ್ದಸಂಗ್ರಹ ೧೬.

To bind	ಕಟ್ಟು.	Form'er	ಮೊದಲಿನ, ಮುಂಚಿನ.
To re-peat'	ತಿರಿಗಿ ಅನ್ನು.	In'do-lent	ಆಲಸ್ಯವುಳ್ಳ, ಸೋಮಾರಿಯಾದ.
A claim	ಹಕ್ಕು, ಬಾಧ್ಯತೆ.	Brav'er-y, Va'lour	ಶೌರ್ಯ, ಪರಾಕ್ರಮ.
To act	ಕೆಲಸ ಮಾಡು, ವರ್ತಿಸು.	Ab-surd'	ತಿಳಿಗೇಡಿತನದ, ಅಸಂಬದ್ಧ.
To for-sake'	ಕೈಬಿಡು, ಬಿಟ್ಟು ಬಿಡು, ತ್ಯಜಿಸು.	ಅಯ್ಯಾ, ರಾಯರೇ	sir[1].
ಭಾಷಣ, ಮಾತು	a speech.	ಅಮ್ಮಾ, ಅಮ್ಮನವರೇ	ma'dam[1].

ಭಾಷಾಂತರಪಾಠ ೧೬.

೯೦. 1. Do not run away, *soldiers!* 2. Remember your former valour, *soldiers!* 3. Do not bind that man, *soldiers!* he is our friend. 4. You have no wisdom, *citizens!* 5. Hear me more attentively, *my friends!* 6. Do not do absurd things, *my son!* 7. You are indolent, *Ráma!* 8. You are acting wisely, *Robert!* 9. How many[2] are you, *my good girl?* 10. Do not forsake my law. 11. Friends and flatterers will forsake the unhappy monarch. 12. *Gópál,* do not repeat these words. 13. Kunti, was not Bhimsen's bravery praiseworthy? 14. Sir, please consider his claims. 15. Baburao, be always kind, polite, and gentlemanly to all.

೧. ಎಲಾ ತಮ್ಮಾ, ಜಿನದತ್ತನ ಮಾತು ಕೇಳು. ೨. ರಾಮಾ, ನೀನು ಏನು ಮಾಡುತ್ತಿದ್ದೀ? ೩. ಆ ಮೇಲೆ ನೀನು ಎಲ್ಲಿಗೆ ಹೋಗುವಿ? ೪. ಗಣಪತೀ, ಈ ನೀರು ಬಿಸಿ ಅವೆ. ೫. ಅಪ್ಪಾ[3], ಗವಳಿಗನು ಹಾಲು ಎಲ್ಲಿಂದ ತರುತ್ತಾನೆ?

---

1) ಸಂಬೋಧನವಿಭಕ್ತಿಯ ಹೊರ್ತು ಈ ಎರಡು ಶಬ್ದಗಳ ಪ್ರಯೋಗವು ಆಗುವದಿಲ್ಲ. Madam ಎಂಬ ಶಬ್ದವನ್ನು ಮದುವೆಯಾದ ಸ್ತ್ರೀಯರಿಗೆ ಮಾತ್ರ ಹಚ್ಚುತ್ತಾರೆ. ಮದುವೆಯಾಗದ ಸ್ತ್ರೀಯರಿಗೂ ಸಣ್ಣ ಹೆಣ್ಣುಮಕ್ಕಳಿಗೂ miss ಗಂಡುಮಕ್ಕಳಿಗೆ master ಅನ್ನಬೇಕು.

2) ಎಷ್ಟು ಮಂದಿ.

3) papa! ಅವ್ವ = mamma.

೬. ತುಳಸೀ, ಯಾಕೆ ಅಳುತ್ತೀಯೇ? ೭. ಮಕ್ಕಳಿರಾ, ಈ ಮಾತು ಚನ್ನಾಗಿ ನೆನಪಿನಲ್ಲಿಡಿರಿ. ೮. ಮಗುವೇ, ನಾನ್ಯಾರು, ನನ್ನ ಹೆಸರೇನು? ೯. ಈ ಹಡಗವು ಯಾರದು? ೧೦. ಗೆಳೆಯಾ, ನೀನು ನಿನ್ನೆ ಎಲ್ಲಿ ಹೋಗುತ್ತಿದ್ದಿ? ೧೧. ಆ ಬಡ-ಪ್ರಾಣಿಯ ಗಂಡನು ಆಕೆಯ ಕೈಬಿಟ್ಟು ಹೋಗುತ್ತಿದ್ದನು. ೧೨. ಅಯ್ಯಾ, ನಾನು ಹೋಗಲಾ? ೧೩. ರಾಯರೇ, ನನಗೆ ಅಪ್ಪಣೆ ಕೊಡುತ್ತೀರಾ? ೧೪. ಅವ್ವನವರೇ, ತಮ್ಮದೇನು ಅಪ್ಪಣೆ? ೧೫. ನೀನು ಅವನಿಗೆ ಎಷ್ಟು ಕೊಡತಕ್ಕದ್ದು?

೧೭ನೇ ಪಾಠ.

ಭೂತಕಾಲದಲ್ಲಿ ಕ್ರಿಯಾಪದಗಳನ್ನು ನಡಿಸುವ ರೀತಿ.

Conjugation of Verbs in the Past Tense.

೯೨. ಇಂಗ್ಲಿಷದಲ್ಲಿ ಕ್ರಿಯಾಪದಗಳನ್ನು ನಡಿಸುವ ವಿಧಗಳು ಎರಡು; ಅವುಗಳಿಗೆ Weak Conjugation ಎಂತಲೂ Strong Conjugation ಎಂತಲೂ ಅನ್ನುತ್ತಾರೆ. ವರ್ತಮಾನ ಕಾಲಕ್ಕೆ *ed* ಪ್ರತ್ಯಯ ಹತ್ತಿ ಭೂತಕಾಲ, ಭೂತ ಕೃದ್ವಾಚಕಗಳಾಗುವ ಕ್ರಿಯಾಪದಗಳು ಮೊದಲನೇ ವಿಧದವು. ಉದಾ:

ವರ್ತಮಾನ.	ಭೂತ.	ಭೂತಕೃದ್ವಾಚಕ.
Melt	melt*ed*[1]	melt*ed*

ಇಂಗ್ಲಿಷದಲ್ಲಿ ಒಟ್ಟಿಗೆ ಸುಮಾರು ೪೦೦೦ ಕ್ರಿಯಾಪದಗಳುಂಟು; ಅವುಗಳಲ್ಲಿ ಈ ತರದವೇ ಬಹಳ.

[1] ಕ್ರಿಯಾಪದದ ಅಂತ್ಯದ ಉಚ್ಚಾರವು ಕ್, ಶ್, ಪ್, ಸ್, ಚ್, ಅಥವಾ ಫ್ (*f*) ಇದ್ದರೆ, *ed* ಎಂಬ ದನ್ನು ಟ್ ದಂತೆ ಉಚ್ಚರಿಸಬೇಕು. ಹ್ಯಾಗಂದರೆ— To crush ನಜ್ಜುಗುಜ್ಜುಮಾಡು, crush*ed*; to tax ತೆರಿಗೆ ಕಟ್ಟು, tax*ed*. ಕ್ರಿಯಾಪದದ ಕೊನೆಯ ಉಚ್ಚಾರವು ಟ ಅಥವಾ ಡ್ ಇದ್ದರೆ, *ed* ಪ್ರತ್ಯಯದ ಉಚ್ಚಾರವು ಎಡ್ ಆಗುತ್ತದೆ. ಉದಾ: To rest ವಿಶ್ರಮಿಸು rest*ed*; to hate ಹಗೆ ಮಾಡು, hat*ed*; to fade ಬಾಡು, fad*ed*. ಬೇರೆ ಕಡೆಯಲ್ಲಿ [illegible]ದ ಉಚ್ಚಾರವು ಡ್ ಆಗುತ್ತದೆ. ಉದಾ: To fear, fear*ed*; to play, play*ed*; to cry, cri*ed*; to love, lov*ed*.

೯೩. *Ed* ಎಂಬ ಪ್ರತ್ಯಯವನ್ನು ಹಚ್ಚುವಾಗ ೧ನೇ ಪುಸ್ತಕದೊಳಗಿನ ೫, ೬, ೭, ೮ನೇ ಕಲಮುಗಳಲ್ಲಿ ಹೇಳಿದ ನಿಯಮಗಳನ್ನು ಅನುಸರಿಸಬೇಕು. ಉದಾ:

ವರ್ತಮಾನ.	ಭೂತ.	ಭೂತಕೃದ್ವಾಚಕ.
Nod	nod*d*ed	nod*d*ed
Permit	permit*t*ed	permit*t*ed
Cry	cr*i*ed	cr*i*ed
Hate	hate*d*	hate*d*

೯೪. Weak Conjugationದ ಕ್ರಿಯಾಪದಗಳನ್ನು ಭೂತಕಾಲದಲ್ಲಿ ಹ್ಯಾಗೆ ನಡಿಸಬೇಕೆಂಬದನ್ನು ಕೆಳಗೆ ಬರೆದ ಉದಾಹರಣದಿಂದ ತಿಳುಕೊಳ್ಳಬೇಕು.

To learn ಎಂಬ ಕ್ರಿಯಾಪದದ ಭೂತಕಾಲ.

ಏಕವಚನ.	ಬಹುವಚನ.
1. I learn*ed*	We learn*ed*
2. Thou learn*edst*	You learn*ed*
3. He, she, it learn*ed*	They learn*ed*

ಭೂತಕಾಲದಲ್ಲಿ *ed* ಪ್ರತ್ಯಯ ಹತ್ತಿದ ಕ್ರಿಯಾಪದಗಳಿಗೆ ದ್ವಿತೀಯಪುರುಷ ಏಕವಚನದಲ್ಲಿ *st* ಎಂಬ ಪ್ರತ್ಯಯವು ಹತ್ತುತ್ತದೆ, *est* ಹತ್ತುವದಿಲ್ಲ.

೯೫. ಭೂತಕಾಲವನ್ನು ಹೋದ ಕಾಲದಲ್ಲಿ ನಡೆಯುತ್ತಿದ್ದ ನಿತ್ಯಕ್ರಿಯೆಯನ್ನು ತೋರಿಸುವದಕ್ಕೆ ಪ್ರಯೋಗಿಸುವರು. ಹ್ಯಾಗಂದರೆ—

He learned ಅವನು ಕಲಿತನು, ಅಥವಾ ಅವನು ಕಲಿಯುತ್ತಿದ್ದನು.

೯೬. ನಿಷೇಧಾರ್ಥಕ ವಾಕ್ಯಗಳಲ್ಲಿಯೂ ಪ್ರಶ್ನಾರ್ಥಕ ವಾಕ್ಯಗಳಲ್ಲಿಯೂ do ಎಂಬ ಸಹಾಯಕ್ರಿಯಾಪದದ ಭೂತಕಾಲವಾದ did ಎಂಬದನ್ನು ಪ್ರಯೋಗಿಸಿ ಮುಖ್ಯ ಕ್ರಿಯಾಪದದ ಮೂಲರೂಪವನ್ನೇ ಇಡಬೇಕು. ಉದಾ:

He *did* not *learn* ಅವನು ಕಲಿಯಲಿಲ್ಲ.

Did he *learn?* ಅವನು ಕಲಿತನೋ?

೯೭. ಕನ್ನಡದಲ್ಲಿ ಒಮ್ಮೊಮ್ಮೆ ಭೂತಕಾಲದ ಅರ್ಥವಿರಲಾಗಿ ಭವಿಷ್ಯತ್ ಕಾಲದ ರೂಪವನ್ನು ಪ್ರಯೋಗಿಸುವರು. ಇಂಥಲ್ಲಿ ಇಂಗ್ಲಿಷದೊಳಗೆ ಭೂತಕಾಲವನ್ನೇ ಉಪಯೋಗಿಸಬೇಕು. ಉದಾ:

ಕಾಶಿಯಲ್ಲಿ ಒಬ್ಬ ವಿದ್ವಾಂಸನು ಇರುವನು A certain learned man lived in Benares.

೯೮. ಶಬ್ದಸಂಗ್ರಹ ೧೭.

To dis-cov′er[1]	ಶೋಧಿಸಿ ತೆಗೆ, ಗೊತ್ತು ಹಚ್ಚು.	To vi′sit	ಭೆಟ್ಟಿಯಾಗು.
To in-vent′[1]	ಹುಟ್ಟಿಸು, ಕಲ್ಪಿಸು.	At first	ಮೊದಲು.
To co′py	ನಕಲು ಬರೆ, — ಮಾಡು.	At last	ಕಟ್ಟಕಡೆಗೆ.
To ru′in	ನಾಶಮಾಡು, ಹಾಳು ಮಾಡು.	To dis-turb′	ತೊಂದರೆಪಡಿಸು, ಅಡ್ಡಿಮಾಡು.
To de-cline′	ಬೇಡೆಂದು ಹೇಳು, ಒಲ್ಲೆನ್ನು.	Print′ing	ಛಾಪಿಸೋಣ.
To con-fess′	ಒಪ್ಪಿಕೊಳ್ಳು.	An art	ಕಲೆ, ವಿದ್ಯೆ.
To rec′og-nise	ಗುರುತು ಹಿಡಿ.	A plan′tain	ಬಾಳೇಹಣ್ಣು.
To as-ton′ish	ಆಶ್ಚರ್ಯಪಡಿಸು.	Gun′pow-der	ಮದ್ದು.
To con′tra-dict″	ಅಲ್ಲವೆನ್ನು, ಮೊದಲು ಹೇಳಿದ್ದಕ್ಕೆ ವಿರುದ್ಧ ಮಾತಾಡು.	A bul′let, a ball	ಗುಂಡು.
To wrong	ಅನ್ಯಾಯಮಾಡು.	An en′e-my	ಹಗೆ, ಶತ್ರು.
To waste	ಹಾಳುಮಾಡು, ಸುಮ್ಮನೇ ಖರ್ಚುಮಾಡು.	A steam′-en-gine	ಉಗಿಯ ಯಂತ್ರ.
To fin′ish	ತೀರಿಸು.	A pri′son-er	ಸೆರೆಯಾಳು, ಕೈದಿ.

[1] To discover = ಇದ್ದ ವಸ್ತುವನ್ನು ಹುಡುಕಿ ತೆಗೆ, — ಬಹಿರ[illegible]ಕ್ಕೆ ತಾ. To invent = ಇಲ್ಲದ್ದನ್ನು ಹುಟ್ಟಿಸು, ಯಾವದೊಂದು ಹೊಸ ಯುಕ್ತಿ ತೆಗೆ.

Al'to-geth''er	ಪೂರಾ, ಒಟ್ಟಿಗೆ, ಕೇವಲ.	**An of'fer**	ಕೊಡಲಿಕ್ಕೆ ಬರೋಣ, (ಮಾನ್ಯ, ಇಲ್ಲವೆ ಅವಮಾನ್ಯ ಮಾಡುವದಕ್ಕಾಗಿ) ಮುಂದಿಟ್ಟ ವಸ್ತು,—ಆಲೋಚನೆ.
Foul	೧. ಹೊಲಸು; ೨. ಕೆಟ್ಟ,		
Flat'ly	ಸ್ಪಷ್ಟವಾಗಿ, ಖಂಡಿತವಾಗಿ.	**At once**	ಕೂಡಲೆ, ಒಮ್ಮೆಲೆ.
ಅರ್ಥ	**the mean'ing.**	ನೊಂದಿಸು	**to ex-tin'guish, to put out.**
ನಾಯಕ, ಮುಖ್ಯಸ್ಥ	**a lead'er.**	ಮಿಠಾಯಿ	**sweet'meats.**

ಭಾಷಾಂತರಪಾಠ ೧೭.

೯೯. 1. He visit*ed* me and I visit*ed* him almost daily. 2. We generally work*ed* and play*ed* together. 3. The poor workman ruin*ed* himself. 4. The prisoner confess*ed* his crime at last. 5. We recognis*ed* him at once. 6. I finish*ed* my work at last. 7. The captain *did* not like me at first. 8. Columbus discover*ed* America. 9. Gutenberg invent*ed* the art of printing. 10. Who invent*ed* the steam-engine? 11. I *did* not write a letter to my aunt yesterday. 12. Why *did* you disturb the officer? 13. I cop*ied* my letter again. 14. I declin*ed* his offer. 15. I *did* not suspect you. 16. Love your enemies. 17. The news of the accident astonish*ed* him greatly. 18. I offer*ed* him some plantains. 19. He ow*ed* a large sum of money to the lawyer. 20. You wrong me[1]. 21. The young man contradict*ed* him flatly. 22. He was altogether wrong. 23. He *did* not satisfy me. 24. Why *did* you waste so much money? 25. The soldiers wast*ed* much gunpowder and many bullets.

[1] ನೀವು ನನ್ನ ಮೇಲೆ ಅನ್ಯಾಯಮಾಡುತ್ತೀರಿ.

೧. ನಾನು ಅವರಿಗೆ ಆಗಾಗ್ಗೆ ಭೆಟ್ಟಿಯಾಗುತ್ತಿದ್ದೆನು. ೨. ನಾರಾಯಣನೂ ಗೋವಿಂದನೂ ಬಹುತರವಾಗಿ ಕೂಡಿ ಆಡುತ್ತಿದ್ದರು. ೩. ನಾನು ಅವನಿಗೆ ತೊಂದರೆ ಕೊಡಲಿಲ್ಲ. ೪. ಆ ಕೂಸಿನ ಮೇಲೆ ನನ್ನ ಪ್ರೀತಿ ಬಹಳ ಇತ್ತು. ೫. ನೀನು ನನಗೆ ಬಹಳ ಹೆದರುತ್ತಿದ್ದಿ. ೬. ಅವನು ನನಗೆ ತನ್ನ ಹೊಸ ಅರಿವೆಗಳನ್ನು ತೋರಿಸಿದನು. ೭. ಅವನು ತನ್ನ ತಪ್ಪು ಒಪ್ಪಿಕೊಂಡನು. ೮. ನಾನು ಅವನ ಗುರುತು ಹಿಡಿಯಲಿಲ್ಲ. ೯. ಅವನು ನನ್ನ ಮೇಲೆ ಸಂಶಯ ಇಟ್ಟನು. ೧೦. ನ್ಯಾಯಾಧೀಶನು ಅವನನ್ನು ಕ್ಷಮಿಸಿದನು. ೧೧. ಆ ಜನರು ಸಂಗಡಲೇ ಅವರನ್ನು ಸೋಲಿಸಿದರು. ೧೨. ಹುಡುಗರು ತಮ್ಮ ಪಾಠಗಳನ್ನು ಮುಗಿಸಿದರು. ೧೩. ಸೇವಕನು ದೀವಿಗೆ ನೊಂದಿಸಿದನು. ೧೪. ಸಿಪಾಯರು ಶತ್ರುಗಳ ಮುಖ್ಯಸ್ಥನಿಗೆ ಗಾಯಮಾಡಿದರು. ೧೫. ಅವನು ಪೋಷಾಕು ಹಾಕಿಕೊಂಡನು[1]. ೧೬. ಈ ವಾಕ್ಯದ ಅರ್ಥವನ್ನು ಹೇಳು[2]. ೧೭. ಹುಡುಗರು ಶಬ್ದಗಳನ್ನು ಚನ್ನಾಗಿ ಉಚ್ಚರಿಸಲಿಲ್ಲ. ೧೮. ನಮ್ಮ ಶಿಕ್ಷಕನು ನಮಗೆ ಬಹಳ ಉತ್ತೇಜನ ಕೊಟ್ಟನು. ೧೯. ಅವನು ಕೆಟ್ಟ ರೀತಿಯಿಂದ ನಡೆಯುತ್ತಿದ್ದನು. ೨೦. ಅವನು ಯಾವಾಗಲೂ ನನ್ನನ್ನು ತಪ್ಪಿಸುತ್ತಿದ್ದನು. ೨೧. ಗುರುಗಳು ಹುಡುಗರಿಗೆ ವಾಕ್ಯದ ಅರ್ಥವನ್ನು ತಿಳಿಸಿ ಹೇಳಿದರು. ೨೨. ನಮ್ಮ ಸೇವಕನು ನಿಮ್ಮ (ಹಣದ) ಚೀಲಕ್ಕೆ ಕೈಹಚ್ಚಲಿಲ್ಲ. ೨೩. ನಾವು ಅವನ ಉಪಕಾರ ಬಹಳ ನೆನಸಿದೆವು. ೨೪. ನಾನು ಅವನಿಗೆ ಹೀಗೆ ಕೇಳಿದೆನು. ೨೫. ಅವನು ಹಣವನ್ನು ಸುಮ್ಮನೇ ಖರ್ಚುಮಾಡಿದನು.

---

[1] He dressed himself. [2] Give (me) the meaning of this sentence; ಇಲ್ಲಿ to tell ಎಂಬ ಕ್ರಿಯಾಪದವನ್ನು ಉಪಯೋಗಿಸಿದರೆ, ಅದರ ಮುಂದೆ ಚತುರ್ಥೀವಿಭಕ್ತಿಯು (me, him, *etc.*) ಅವಶ್ಯ ಬೇಕು. ಹ್ಯಾಗಂದರೆ— Tell me the meaning of this sentence. ಈ ನಿಯಮಕ್ಕೆ to tell the truth, to tell a story ಮುಂತಾದವುಗಳು ಅಪವಾದಗಳು.

೧೮ನೇ ಪಾಠ.

Strong Conjugation.

೧೦೦. ಯಾವ ಕ್ರಿಯಾಪದಗಳ ಭೂತಕಾಲ ಭೂತಕೃದ್ವಾಚಕಗಳು *ed* ಪ್ರತ್ಯಯ ಹತ್ತದೆ ಮೂಲ ಶಬ್ದಗಳಲ್ಲಿಯೇ ರೂಪಾಂತರ ಹೊಂದಿ ಆಗುತ್ತವೆಯೋ ಅವು Strong Conjugationದ ಕ್ರಿಯಾಪದಗಳೆಂದು ತಿಳುಕೊಳ್ಳಬೇಕು. ಉದಾ:

ವರ್ತಮಾನ.	ಭೂತ.	ಭೂತಕೃದ್ವಾಚಕ.
Do	*did*	*done*

ಇಂಗ್ಲಿಷದಲ್ಲಿ ಇಂಥಾ ಕ್ರಿಯಾಪದಗಳು ಸುಮಾರು ಇನ್ನೂರು ಉಂಟು. ಅವುಗಳಲ್ಲಿ ಒಂದೇ ಅವಯವವುಳ್ಳವು ಬಹಳ; ಮತ್ತು ಎರಡು ಅವಯವಗಳುಳ್ಳ ಕೆಲವು ಕ್ರಿಯಾಪದಗಳು ಒಂದು ಅವಯವದ ಕ್ರಿಯಾಪದಗಳಿಗೆ ಉಪಸರ್ಗಗಳು ಹತ್ತಿ ಆಗಿರುತ್ತವೆ. ಉದಾ:

ವರ್ತಮಾನ.	ಭೂತ.	ಭೂತಕೃದ್ವಾಚಕ.
Give	gave	giv′en
For-give′	for-gave′	for-giv′en

೧೦೧. ಈ ಕ್ರಿಯಾಪದಗಳು ಭೂತಕಾಲದಲ್ಲಿ ನಡಿಸಲಿಕ್ಕೆ ಬರುವ ಹಾಗೆ ಇವುಗಳ ಭೂತಕಾಲದ ಸಾಧಾರಣವಾದ ರೂಪಗಳನ್ನು ಬಾಯಪಾಠವೇ ಮಾಡಬೇಕು; ಅಂದರೆ ಏನೂ ತೊಂದರೆಯಾಗದು. ಭೂತಕಾಲದ ರೂಪದ ಅಂತ್ಯಾಕ್ಷರವು *e* ಇದ್ದರೆ, ದ್ವಿತೀಯಪುರುಷದ ಏಕವಚನದಲ್ಲಿ *st* ಎಂಬ ಪ್ರತ್ಯಯವನ್ನೂ, ಇರದಿದ್ದರೆ *est* ಎಂಬ ಪ್ರತ್ಯಯವನ್ನೂ ಹಚ್ಚಬೇಕು; ಮತ್ತು ವರ್ತಮಾನಕಾಲದಲ್ಲಿ ಈ ಪ್ರತ್ಯಯವನ್ನು ಹಚ್ಚುವಾಗ ಮಾಡತಕ್ಕ ಹೆಚ್ಚುಕಡಿಮೆಗಳನ್ನೆಲ್ಲ ಭೂತಕಾಲದಲ್ಲಿ ಸಹ ಮಾಡಬೇಕು. ಉದಾ:

ವರ್ತಮಾನ.	ಭೂ[illegible]	ದ್ವಿ. ಪು. ಏ. ವ.
Write	[illegible]rote	wrot*est*
Run	ran	runn*est*
Be-get′ (ಹುಟ್ಟಿಸು, [illegible])	be-got′	be-got′*test*

☞ Did, was, had ಎಂಬವುಗಳ ದ್ವಿತೀಯಪುರುಷದ ಏಕವಚನಗಳು ನಿಯಮಕ್ಕೆ ವಿರೋಧ[illegible] [illegible]did*st*, was*t*, had*st* ಆಗುತ್ತವೆ.

೧೦೨. Strong Conjugationದ ಕ್ರಿಯಾಪದಗಳಲ್ಲಿ ಮುಖ್ಯವಾದವು ಕೆಳಗೆ ಬರೆದವೆ: —

ವರ್ತಮಾನಕಾಲ.	ಭೂತಕಾಲ.	ಭೂತಕೃದ್ವಾಚಕ.
Go	went	gone
Sit	sat	sat
Run	ran	run
Come	came	come
Stand	stood	stood
Fall	fell	fal'len
Hear	heard	heard
Sleep	slept	slept
Teach	taught	taught
Sing	sang	sung
Dig	dug	dug
Spit ಉಗುಳು	spat, spit	spit
See	saw	seen
Take	took	ta'ken
Buy	bought	bought
Sell	sold	sold
Fly [1] ಹಾರು	flew	flown
Flee ಓಡು	fled	fled

[1] To fly ಎಂಬ ಕ್ರಿಯಾಪದದ ಅರ್ಥವು ಒಮ್ಮೊಮ್ಮೆ ಓಡು... ಸಹ ...ಗುತ್ತದೆ.

ವರ್ತಮಾನಕಾಲ.	ಭೂತಕಾಲ.	ಭೂತಕೃದ್ವಾಚಕ.
Read	read	read
Write	wrote	writ'ten
Beat	beat	beat'en, beat
Do	did	done
Catch	caught	caught
Swim	swam	swum
Sink	sank	sunk
Kneel ಮೊಣಕಾಲೂರು	knelt	knelt
Shine	shone	shone
Throw	threw	thrown
Bring	brought	brought
Drink	drank	drunk
Grow	grew	grown
Shut	shut	shut
Fight	fought	fought
Lie ಬೀಳು	lay	lain
Lay ಇಡು	laid	laid
Speak	spoke	spo'ken
Send	sent	sent
Lend	lent	lent
Build	built	built
Hide	hid	hid'den, hid

ವರ್ತಮಾನಕಾಲ.	ಭೂತಕಾಲ.	ಭೂತಕೃದ್ವಾಚಕ.
Know	knew	known
Show, shew	showed, shewed	shown, shewn
Be	was	been
Eat	ate	eat'en
Cut	cut	cut
Think	thought	thought
Have	had	had
Make	made	made
Sweep	swept	swept
Spin	spun	spun
Break	broke	bro'ken
Be-come'	be-came'	be-come'
Weep	wept	wept
Swear	swore	sworn
Spend	spent	spent
Hurt	hurt	hurt
Tear	tore	torn
Drive	drove	driv'en
Creep	crept	crept
Blow	blew	blown
Win	won	w[illegible]n
Lose	lost	[illegible]st

ವರ್ತಮಾನಕಾಲ.	ಭೂತಕಾಲ.	ಭೂತಕೃದ್ವಾಚಕ.
Shake	shook	sha′ken
Get	got	got, got′ten
For-get′	for-got′	for-got′ten
Burn	burnt, burned	burnt, burned
Rise [1]	rose [1]	ris′en [1]
Set	set	set
Say	said	said
Tell	told	told
Give	gave	giv′en
Cost	cost	cost
For-give′	for-gave′	for-giv′en
Bite	bit	bit′ten, bit
Feel	felt	felt
Find	found	found
Sow	sowed	sown
Mow	mowed	mown
Pay	paid	paid
Saw	sawed	sawn
Put	put	put
Steal	stole	stol′en
Weave	wove	wov′en
Bind	bound	bound

1) ಇಲ್ಲಿ ಜ ಉಚ್ಚಾ[illegible]ವು [illegible]ಗುತ್ತದೆ.

ವರ್ತಮಾನಕಾಲ.		ಭೂತಕಾಲ.	ಭೂತಕೃದ್ವಾಚಕ.
Ring	(ಗಂಟೆ) ಬಾರಿಸು, ಗಣಗಣಿಸು.	rang	rung
Ride	ಕುದುರೆಯ ಮೇಲೆ — ರಥದಲ್ಲಿ — ಕೂತುಕೊಂಡು ಹೋಗು.	rode	rid'den
Spill	೧. ಚೆಲ್ಲು; ೨. ಸೂಸು.	spilt	spilt
Sting	(ಕೊಂಡಿಯಿಂದ) ಕಚ್ಚು, ದಂಶನಮಾಡು.	stung	stung
Swell	೧. ಉಬ್ಬು; ೨. ಬಾಯು.	swelled	swol'len
Wear	೧. ಧರಿಸು; ೨. ಸವಿಸು.	wore	worn
A-rise'	೧. ಏರು; ೨. ಉದಯವಾಗು; ೩. (ಮಲಗಿ) ಏಳು.	a-rose'	a-ris'en
A-wake'	೧. ಎಚ್ಚರಾಗು; ೨. ಎಚ್ಚರಮಾಡು.	a-woke'	a-waked'
Bear	ಹಡೆ, ಹೆರು.	bore	born[1]
Bear	೧. ಹೊರು; ೨. ಸೈರಿಸು, ತಾಳು.	bore	borne
Be-gin'	ಆರಂಭಿಸು.	be-gan'	be-gun'
Be-hold'	ನೋಡು.	be-held'	be-held'
Bend	೧. ಬಾಗು; ೨. ಬಾಗಿಸು.	bent	bent
Be-seech'	ಸೆರಗೊಡ್ಡಿ ಬೇಡಿಕೊ.	be-sought'	be-sought'
Chide	ಜಬರಿಸು, ಗದರಿಸು, ಗುಲ್ಲು ಮಾಡು, ಸಿಟ್ಟು—.	chid	chid'den
Choose	ಆರಿಸಿಕೊಳ್ಳು.	chose	cho'sen
Clothe	ತೊಡಿಸು, ಅರಿವೆ ಹಾಕು	clothed, clad	clothed, clad
Crow	(ಕೋಳಿ) ಕೂಗು.	crowed, crew	crowed
Draw	ಜಗ್ಗು, ಎಳೆ.	drew	drawn

[1] Born = ಹುಟ್ಟಿದ, ಎಂಬುದು ಭೂತಕೃದ್ವಾಚಕ ವಿಶೇಷಣವು; ಇದು ಕ್ರಿಯಾಪದದ ಮುಂದೆ ಬರುತ್ತದೆ. ಉದಾ: It is *born* ಅದು ಹುಟ್ಟಿ ಅದೆ. ಅನ್ಯ ಕೃದ್ವಾಚಕಗಳಂತೆ ಇದರಿಂದ To bear ಎಂಬ ಕ್ರಿಯಾಪದದ ಪೂರ್ಣವರ್ತಮಾನ, ಪೂರ್ಣಭೂತ ಮುಂತಾದ ಕಾಲಗಳನ್ನು ಸಾಧಿಸಲಾಗದು. ಅಂಥ ಕಾಲಗಳು ಬೇಕಾದರೆ, To bring forth, To give birth ಎಂಬ ಅದೇ ಅರ್ಥದ ಬೇರೆ ಕ್ರಿಯಾಪದಗಳನ್ನು ಪ್ರಯೋಗಿಸಬೇಕು.

	ವರ್ತಮಾನಕಾಲ.	ಭೂತಕಾಲ.	ಭೂತಕೃದ್ವಾಚಕ.
Dream	೧. ಕನಸು ಬೀಳು; ೨. ಕನಸಿನಲ್ಲಿ ಕಾಣು.	dreamt	dreamt
Dwell	ಇರು, ವಾಸಮಾಡು.	dwelt	dwelt
Feed	ಹೊಟ್ಟೆಗೆ ಹಾಕು, ಮೇಯಿಸು.	fed	fed
Spread	೧. ಹಾಸು, ಹರವು; ೨. ಹಬ್ಬು.	spread	spread
Fling	ಒಗೆ, ಬಿಸಾಡು.	flung	flung
For-sake′	ಕೈಬಿಡು, ತ್ಯಜಿಸು.	for-sook′	for-sa′ken
Freeze	ಗಟ್ಟಿಯಾಗು, ಹೆಪ್ಪುಗಟ್ಟು, ಹೆರೆ.	froze	fro′zen
Gild	ಮುಲಾಮುಮಾಡು, ಬಂಗಾರದ ನೀರು ಕೊಡು.	gilt	gilt
Grind	ಬೀಸು.	ground	ground
Hang	೧. ತೂಗಹಾಕು; ೨. ತೂಗಾಡು.	hung	hung
Hang [1]	ಗಲ್ಲಿಗೆ ಹಾಕು.	hanged	hanged
Hold	೧. ಹಿಡಿ; ೨. ಹಿಡಿಸು.	held	held
Keep	೧. ಇಡು; ೨. ಕಾಯು; ೩. ಸಾಕು.	kept	kept
Lead	ಹಾದೀ ತೋರಿಸು, ಕೈಹಿಡುಕೊಂಡು ಹೋಗು, ಒಯ್ಯು.	led	led
Leave	ಬಿಡು.	left	left
Thrust	೧. ದೂಡು; ೨. ಜಡಿ, ತುರುಕು, ತಿವಿ.	thrust	thrust
Mean	೧. ಉದ್ದೇಶಿಸು. ಮನಸ್ಸಿನಲ್ಲಿರು; ೨. ಅರ್ಥವಾಗು.	meant	meant
Meet	೧. ಭೆಟ್ಟಿಯಾಗು; ೨. ಕೊಡು.	met	met
Seek	ಅರಸು, ಹುಡುಕು.	sought	sought
Shear	ಕತ್ತರಿಸು.	sheared	shorn
Shoe	ನಾಲುಕಟ್ಟು.	shod	shod
Shoot	ಗುಂಡು ಹಾಕಿ ಹೊಡೆ.	shot	shot
Wring	೧. ಹಿಂಡು; ೨. ಒಡಮು[illegible].	wrung	wrung
Wind	೧. ಊದು; ೨. ತಿರು[illegible], ಕೀಲೀ ಕೊಡು [2]; ೩. ಸುತ್ತು.	wound	wound

[1] ಇದು weak con[illegible]gati[illegible]ಪದವು. [2] Wind the clock ಗಡಿಯ[illegible]ಳಕ್ಕೆ ಕೀಲೀ ಕೊಡು.

೧೦೩. ಶಬ್ದಸಂಗ್ರಹ ೧೮.

A lamb	ಕುರಿಮರಿ.
An in'sect	ಹುಳ.
An auc-tion-eer'	ಲಿಲಾವುಗಾರ.
A pre'sent	ಕಾಣಿಕೆ, ಸಂಭಾವನೆ.
A fork [1]	ಮುಳ್ಳು.
Last night	ನಿನ್ನೆ ರಾತ್ರಿ.
To-night'	ಈಪೊತ್ತು ರಾತ್ರಿ.
Al'so	ಕೂಡ, ಸಹ.
Oth'er [2] (ಅದರ್)	ಎರಡನೇ.
A bow	ವಂದನೆ.
To de-ceive'	ಮೋಸಗೊಳಿಸು, —ಮಾಡು, ವಂಚಿಸು.
To o-mit'	ಬಿಟ್ಟುಬಿಡು, ಮಾಡದೆ ಇರು.
Fear'ful	ಭಯಂಕರವಾದ.
Flat [3]	ಸಪಾಟು, ಸಮವಾದ.
Slow'ly	ಮೆಲ್ಲಗೆ, ಸಾವಕಾಶ.
Sev'er-al	ಹಲವು, ಅನೇಕ.
A-way'	ದೂರ.

ಭಾಷಾಂತರಪಾಠ ೧೮.

೧೦೪. 1. I like little lambs better than any other animals. 2. The best and wisest of men sometimes deceive themselves. 3. Most men see the faults of others sooner than their own. 4. You always see the faults of others; do you ever see your own? 5. A rich man is often the slave of his riches. 6. Those birds will leave our garden altogether. 7. The boys *caught* some flies and other insects. 8. The auctioneer *sold* all those things. 9. My friend *sent* me a present. 10. The girl *hurt* herself. 11. T[illegible] old woman *told* her many stories. 12. You omitted several wo[illegible]. 13. Will you return to-night? 14. His eldest son *became* a [illegible]lor. 15. My brother *lost* his

[1] ಇದಕ್ಕೆ ಒಂದು ಕಡೆಗೆ ಲೋಹದ ಹಿಡಿಕೆ ಮತ್ತೊ[illegible]ದು ಕಡೆಗೆ ಎರಡು ಮೂರು ಮುಳ್ಳುಗಳಿದ್ದು ಇದನ್ನು ಯುರೋಪದ ಜನರು ಊಟಾ ಮಾಡುವಾಗ [illegible]ನ್ನುವ ಪದಾರ್ಥಗಳನ್ನು ಹಿಡಿಯುವದಕ್ಕೂ ಎತ್ತುವದಕ್ಕೂ ಉಪಯೋಗಿಸುವರು.

[2] ಬೇರೆ ಯಾವನಾದರೊಬ್ಬ, ಮತ್ತೊಬ್ಬ = another; [illegible]ಬ[illegible]ಲ್ಲಿ) ಎರಡನೇ = the other. Another ಎಂಬುದು ಒಂದೇ ಶಬ್ದವದೆ, ಇದರ ಉಚ್ಚಾರ 'ಅನದರ್' [illegible]ಆಗುತ್ತದೆ.

[3] Flat-roofe[illegible] houses = ಮಾಳಿಗೇಮನೆಗಳು.

stick. 16. They *lost* all their money. 17. All[1] the children *were* there. 18. I *fell* down and *hurt* my knees. 19. Will you tell them so? 20. *Did* you ever see so[2] wise a judge? 21. Who ever *saw* such a monarch? 22. I never *heard* such a thing before. 23. *Did* you ever hear such a wonderful story before? 24. Is he so bad? 25. Which of you *broke* the window? 26. He *gave* me some handkerchiefs. 27. Several of those old houses *had* flat roofs. 28. I *bought* some knives and forks. 29. I *paid* the man seven rupees. 30. The little boy *got* a new satchel. 31. *Did* you ever see a lion? 32. Give me a glass of water. 33. He *made* me a bow. 34. He *did* not say a word. 35. The servant *swept* my room. 36. Who *ate* those mangoes? 37. The old man *drove* the dog away. 38. The cat *caught* some mice last night. 39. Who *broke* this lamp? 40. The sun *shone* and the birds *sang* merrily.

೧. ಈ ಚಂದವಾದ ಕನ್ನಡಿಯನ್ನು ನೀನು ಒಡೆದೆಯಾ? ೨. ಇಲ್ಲ ಸ್ವಾಮಿ, ನಾನು ಒಡೆಯಲಿಲ್ಲ. ೩. ಹೀಗೆ ನಿಮಗೆ ಯಾರು ಹೇಳಿದರು? ೪. ನನಗೇ ನಿನ್ನ ಮೇಲೆ ಸಂಶಯ ಬಂತು. ೫. ನನಗೆ ಹೀಗೆ ತೋರಿತು. ೬. ರಾಮನು ಸಹ ಹೀಗೆ ಅಂದನು. ೭. ಈ ಹುಡುಗಿಯು ಯಾರ ಮಗಳು? ೮. ಆಕೆ ನಮ್ಮ ನೆರೆಮನೆಯವರ ಮಗಳು. ೯. ಬಳಿಕ ನೀವು ಎಲ್ಲಿ ಹೋದಿರಿ? ೧೦. ನಿನಗೆ ನೆನಪಿಲ್ಲವೋ? ೧೧. ಆತನಿಗಿಷ್ಟು ಮುತ್ತುಗಳನ್ನು ಕೊಡುತ್ತೀಯಾ? ೧೨. ನೀವು ಅವುಗಳನ್ನು ಯಾಕೆ ತಿರಿಗಿ ಕೊಡುತ್ತೀರಿ? ೧೩. ಅವುಗಳ ಬೆಲೆ ಏನು? ೧೪. ಅವನ ಹತ್ತರ ಬಹಳ ವಜ್ರಗಳಿದ್ದವು. ೧೫. ಆ ಸದ್ಗುಣವುಳ್ಳ ಪುರುಷನು ಇಂಥಾದು ಎಂದಿಗೂ ಮಾಡಲಿಲ್ಲ. ೧೬. ಕೈದಿಗೆ

[1] The ಎಂಬ ಉಪಪದವು all ಎಂಬ ವಿಶೇಷಣದ ಮುಂದೆ ಬರುತ್ತದೆ.

[2] So ಎಂಬ ಕ್ರಿಯಾವಿಶೇಷಣವು ಒಂದು ವಿಶೇಷಣಕ್ಕೆ ಸಂಬಂಧಿಸಿದ್ದು ಮುಂದೆ ನಾಮಪದವಿದ್ದರೆ, a ಅಥವಾ an ಎಂಬ ಉಪಪದವು ಆ ವಿಶೇಷಣದ ಮುಂದೆ ಬರುತ್ತದೆ. ಬಹುವಚನದಲ್ಲಿ ಇಂಥ ಕಡೆಯಲ್ಲಿ so ಎಂಬದಕ್ಕೆ ಬದಲಾಗಿ such ಹಾಕುತ್ತಾರೆ. ಹ್ಯಾಗಂದರೆ—Such wise judges. Suchದ ಮುಂದೆ ಏಕವಚನ ನಾಮಪದವಿದ್ದರೆ, a ಅಥವಾ an ಎಂಬದು ವಿಶೇಷಣದ ಹಿಂದೆ ಬರುತ್ತದೆ. ಉದಾ: Such a wise judge.

ಈ ಮಾತು ಗೊತ್ತಿತ್ತೋ? ೧೭. ಅಲ್ಲಿ ಎಷ್ಟು ಜನರಿದ್ದರು? ೧೮. ನಿನಗೆ ಎಷ್ಟು ರೂಪಾಯಿ ಬೇಕು? ೧೯. ನೀನು ಎಷ್ಟು ಸಕ್ಕರೆ ತಂದೆ? ೨೦. ಅವನು ಎಷ್ಟು ಎಣ್ಣೆ ಕೊಂಡನು? ೨೧. ಆಕೆ ಈ ಪುಸ್ತಕವನ್ನು ಆರಿಸಿ ತೆಗೆದಳು. ೨೨. ಅವನು ತುತೂರಿ ಊದಿದನು. ೨೩. ಗಾಳಿಯು ಬೀಸುತ್ತಿತ್ತು. ೨೪. ಈ ಗಡಿಗೆಯನ್ನು ಯಾರು ಒಡೆದರು? ೨೫. ಸಿಂಪಿಗನು ಅರಿವೆ ಹರಿದನು. ೨೬. ಬಂಡಿಯವನು ಸಂಗಡಲೇ ಬಂಡಿ ಹೊಡೆದನು. ೨೭. ಅವನನ್ನು ನಾಯಿ ಕಚ್ಚಿತು. ೨೮. ಹಾವು ಮೆಲ್ಲಗೆ ಹರಿದಾಡುತ್ತ ಹೋಗುತ್ತಿತ್ತು. ೨೯. ಆ ಕುರ್ಚಿಗೆ ನಾನು ಎರಡು ರೂಪಾಯಿ ಕೊಟ್ಟೆನು. ೩೦. ನೀನು ಇಷ್ಟು ಹಣ ಯಾಕೆ ಖರ್ಚುಮಾಡಿದೆ? ೩೧. ಅವನು ಎಲ್ಲಿ ಇದ್ದನು? ೩೨. ನೀನು ಆ ಹಣಾ ಯಾಕೆ ಕೈಗಡ ತಕ್ಕೊಂಡೆ? ೩೩. ನನಗೆ ರಾಮನ ಸಾಲ ಬಹಳ ಅದೆ. ೩೪. ಅವನು ನನಗೆ ಬಹಳ ಹಣ ಕೈಗಡ ಕೊಟ್ಟನು. ೩೫. ಇದನ್ನೆಲ್ಲ ನಿನಗೆ ಯಾರು ಕಲಿಸಿದರು? ೩೬. ಈ ಅಣ್ಣತಮ್ಮಂದಿರೆಲ್ಲರು ವಿದ್ವಾಂಸರಾಗಿದ್ದಾರೆ. ೩೭. ಅವರಲ್ಲಿ ಒಬ್ಬನು ನನ್ನ ಮೇಲೆ ಬಹಳ ಪ್ರೀತಿ ಮಾಡುತ್ತಿದ್ದನು. ೩೮. ನನಗೆ ಒಂದು ಭಯಂಕರವಾದ ಸಪ್ಪಳವು ಕೇಳಿಸಿತು. ೩೯. ಅವನು ನೀರು ಕುಡಿದನು. ೪೦. ನಿನಗೆ ಹಾದೀ ಯಾರು ತೋರಿಸಿದರು?

೧೯ನೇ ಪಾಠ.

ಪೂರ್ಣವರ್ತಮಾನಕಾಲ.

Present Perfect Tense.

೧೦೫. 'ಹೋದ ಕಾಲದಲ್ಲಿ [ಆ]ರಂಭಿಸಿದ ಕ್ರಿಯೆಯು ನಡೆಯುವ ಕಾಲದಲ್ಲಿ ಮುಗಿದದೆ, ಅಥವಾ ಹೋದ ಕಾಲ[ದಲ್ಲ]ಿ ಮಾಡಿದ ಕ್ರಿಯೆಯ ಫಲವು ನಡೆಯುವ ಕಾಲದಲ್ಲಿ ಸಿದ್ಧವಾಗಿದೆ' ಎಂಬ ಅರ್ಥ[ವಿ]ರಲಾಗಿ ಪೂರ್ಣವರ್ತಮಾನಕಾಲವನ್ನು ಪ್ರಯೋಗಿಸಬೇಕು. ಕ್ರಿಯಾಪದದ ಭೂ[ತ]ಕೃದ[ವಾ]ಚಕದ ಹಿಂದೆ to have ಎಂಬದರ ವರ್ತಮಾನಕಾಲವನ್ನು ಜೋಡಿಸುವದರಿಂ[ದ] ಕ್ರಿಯಾಪದದ ಪೂರ್ಣವರ್ತಮಾನಕಾ[ಲ]ವಾಗುತ್ತದೆ.

ಉದಾ: To write ಎಂಬದರ **ಪೂರ್ಣವರ್ತಮಾನಕಾಲ.**

ಏಕವಚನ.	ಬಹುವಚನ.
1. I have written	**We have written**
2. Thou hast written	**You have written**
3. He, she, it has written	**They have written**

ಇವುಗಳ ಅರ್ಥಗಳು ನಾನು ಬರೆದಿದ್ದೇನೆ, ನೀನು ಬರೆದಿದ್ದೀ ಇತ್ಯಾದಿ.

೧೦೬. ☞ ಒಮ್ಮೊಮ್ಮೆ ಇಂಗ್ಲಿಷದೊಳಗಿನ ಪೂರ್ಣವರ್ತಮಾನಕಾಲಕ್ಕೆ ಬದಲಾಗಿ ಕನ್ನಡದಲ್ಲಿ ಶುದ್ಧಭೂತಕಾಲವನ್ನು ಪ್ರಯೋಗಿಸಬೇಕಾಗುತ್ತದೆ.

ಉದಾ: **Where *have* you *been* all this time?** ಇಷ್ಟು ಹೊತ್ತು ನೀವು ಎಲ್ಲಿ ಇದ್ದಿರಿ?

ಇದೇ ಮೇರೆಗೆ to sit, to stand, to sleep ಮುಂತಾದ ಸ್ಥಿತಿವಾಚಕ ಕ್ರಿಯಾಪದಗಳಿರಲು, ಅಪೂರ್ಣವರ್ತಮಾನಕಾಲವಿದ್ದಲ್ಲಿ ಪೂರ್ಣವರ್ತಮಾನವನ್ನು ಹಾಕಬೇಕಾಗುತ್ತದೆ.

ಉದಾ: **Why *are* you *sitting* here?** ನೀನು ಇಲ್ಲಿ ಯಾಕೆ ಕೂತಿದ್ದೀ?

೧೦೭. ಇಂಗ್ಲಿಷದಲ್ಲಿ have been ಎಂಬದಕ್ಕೆ ಕ್ರಿಯಾಪದದ ವರ್ತಮಾನ ನ್ಯೂನವನ್ನು ಕೂಡಿಸುವದರಿಂದ ಒಂದು ಕಾಲವಾಗುತ್ತದೆ. ಅದರ ಅರ್ಥವೇನಂದರೆ, ಹೋದ ಕಾಲದಲ್ಲಿ ಆರಂಭಿಸಿದ ಕ್ರಿಯೆಯು ನಡೆಯುವ ಕಾಲದ ವರೆಗೆ ಸಾಗುತ್ತ ಬಂದದೆ, ಅದು ಇನ್ನೂ ಮುಗಿ...ಯೋ ಇಲ್ಲವೋ ತಿಳಿಯುವದಿಲ್ಲ. ಇದಕ್ಕೆ ಸಮಾನವಾದ ಕಾಲವು ಕನ್ನಡದಲ್ಲಿ ಇಲ್ಲ. ಆದರೆ, ಆಗಾಗ್ಗೆ ಕನ್ನಡದೊಳಗಿನ ಅಪೂರ್ಣವರ್ತಮಾನಕಾಲದ ಅರ್ಥವು ಹಾಗಾಗುತ್ತದೆ. ಆದಕಾರಣ ಇಂಗ್ಲಿಷದಿಂದ ಭಾಷಾಂತರಮಾಡುವಾಗ ಈ ಕಾಲವನ್ನು ಪ್ರಯೋಗಿಸಬೇಕು.

ಉದಾ: I have been writing ನಾನು ಬರೆಯುತ್ತಾ ಇದ್ದೇನೆ.

೧೦೮. ಶಬ್ದಸಂಗ್ರಹ ೧೯.

To fol'low	೧. ಅನುಸರಿಸು; ೨. ಹಿಂಬಾಲಿಸು.
A gen'er-al	ಸೇನಾಪತಿ, ದಳವಾಯಿ.
Troops	ದಂಡು, ಸೈನ್ಯ.
A prey	೧. ಬೇಟೆ, ಭಕ್ಷ್ಯ; ೨. ಲೂಟಿ.
The weath'er	ಋತುಮಾನದ ಗಾಳಿ, ಹವೆ.
Might	ಶಕ್ತಿ, ಬಲ.
Right	ಹಕ್ಕು, ಬಾಧ್ಯತೆ.
Tooth'ache	ಹಲ್ಲುನೋವು.
To load	ಹೇರು.
De-lay'	ತಡ.
Hay	ಒಣಹುಲ್ಲು.
Ad-vice'	ಉಪದೇಶ, ಬುದ್ಧಿಮಾತು.
Dan'ger-ous	ಅಪಾಯಕರ, ಗಂಡಾಂತರದ.
To con-ceal'	ಅಡಗಿಸು, ಬಚ್ಚಿಡು.
A pome'gran-ate 1)	ದಾಳಿಂಬೆ ಹಣ್ಣು.
(ಸಹಿಸುವ) ಧೈರ್ಯ	for'ti-tude.
ಗೊಂಬೆ	a doll, a pup'pet
ಹಿಟ್ಟು	flour, meal
ನಡತೆ	be-ha'vi-our.
Bu'si-ness	ಕೆಲಸ.
Chief, prin'ci-pal	ಮುಖ್ಯವಾದ.
An arch'er	ಬಿಲ್ಲುಗಾರ, ಧನುರ್ಧಾರಿ.
An ar'row	ಬಾಣ, ಅಂಬು.
Ar-riv'al	ಮುಟ್ಟುವದು, ತಲಪುವದು.
A pri'son	ಸೆರೆಮನೆ.
To ad-vise'	ಉಪದೇಶಮಾಡು, ಬುದ್ಧಿಹೇಳು.
Mo-ral'i-ty	ನೀತಿ, ಧರ್ಮ, ಸದಾಚಾರ.
To in-vite'	ಆವುತಣ ಹೇಳು.
To dis-grace'	ಅಪಮಾನಮಾಡು.
E'ven	ಸಹ, ಆದರೂ.
Yet, still	ಇನ್ನೂ.
To dis-re-gard'	ಅಲಕ್ಷ್ಯಮಾಡು, ಉಪೇಕ್ಷಿಸು.
To march	ಕೂಚುಮಾಡು, ಕ್ರಮವಾಗಿ ನಡೆ.
ಸೆರೆಯಲ್ಲಿಡು	to im-pris'on
ಪರದೇಶದವನು	a for'eign-er.
ದುಂದುಮಾಡು, ಹಾಳುಮಾಡು	to squan'der.

1) ಈ ಶಬ್ದದ ಉಚ್ಚಾರವನ್ನು ಎಷ್ಟೋ ಜನರು 'ಪಮ್‌ಗ್ರಾನೆಟ್' ಎಂತ ಸಹ ಮಾಡುತ್ತಾರೆ.

ಭಾಷಾಂತರಪಾಠ ೧೯.

೧೦೯. 1. We *have left* all and *followed* thee[1]. 2. The young lions seek their prey. 3. This weather will freeze the lakes and the rivers. 4. The general *has ordered* his troops to march. 5. The merchants *have loaded* the camels. 6. Will the bullocks draw that cart? 7. He *has shod* the horse. 8. The woman *has been grinding* corn. 9. The shepherds *have been shearing* the sheep. 10. We *have met* before. 11. Where *have* you *kept* the pomegranates? 12. He kept his word. 13. What do you mean? 14. The artisan is gilding the frame of the mirror. 15. That boy *has been flinging* stones. 16. She is feeding[2] the infant. 17. Fortitude *has forsaken* him. 18. The gardener *has watered* the plants. 19. I *have* not *seen* you before. 20. The boys *have learnt* their lessons. 21. I *have* never *had* the toothache. 22. Always do your duty. 23. What *has* the prisoner *done?* 24. What did he do? 25. How do you do?[3] 26. Make hay while the sun shines[4]. 27. Delay is always dangerous. 28. We have finished our work. 29. The thief *has concealed* the ornaments. 30. The owner *has* not *sold* the house. 31. You *have paid* the artist a large sum of money. 32. I *have* not *spent* even a rupee. 33. You *have forgotten* my advice. 34. He *has* not *finished* his dinner. 35. The bird *has flown.*

೧. ಅವನು ಒಳ್ಳೇ ಮಾವಿನ ಹಣ್ಣುಗಳನ್ನು ಆರಿಸಿ ತೆಗೆದಿದ್ದಾನೆ. ೨. ಇಲ್ಲಿ ಹತ್ತು ಮಾವಿನ ಹಣ್ಣುಗಳಿವೆ; ಇವುಗಳಲ್ಲಿ ನೀನು ಆರಿಸಿ ತೆಗೆದಂಥವು ಯಾವವು? ೩. ಆ ಹುಡುಗಿ ತನ್ನ ಗೊಂಬೆಗೆ ಬಟ್ಟೆಯನ್ನು ಉಡಿಸಿದ್ದಾಳೆ. ೪. ಅವನು ಇನ್ನೂ ಬಂದಿಲ್ಲ. ೫. ನಮ್ಮ ಅತಿಥಿಯು ಇದೇ ಈಗ ಹೊರಗೆ ಹೋಗಿದ್ದಾನೆ. ೬. ಆತನು ಈವೊತ್ತು ಇಲ್ಲಿ ಇಳುಕೊಳ್ಳುವನು[5]. ೭. ಕೋಳಿಯು ಕೂಗು

---

1) ಪುಟ ೬೫, ಟಿಪ್ಪಣಿ 4 ನ್ನು [illegible]. 2) ಉಣಿಸುತ್ತಿದ್ದಾಳೆ. 3) ನೀವು ಕ್ಷೇಮದಿಂದಿದ್ದೀರಾ? 4) ಗಾಳಿ [illegible]ಂದಾ[illegible]ರಿಕೊ. 5) Halt ಅಥವಾ stop.

ತ್ತದೆ. ೮. ಈ ಚಿತ್ರಗಾರನು ಒಂದು ಚಂದವಾದ ಚಿತ್ರವನ್ನು ತೆಗೆದಿದ್ದಾನೆ. ೯. ಕುದುರೆಗಳು ರಥವನ್ನು ಎಳೆಯುತ್ತವೆ. ೧೦. ನನಗೆ ಕನಸು ಬಿತ್ತು. ೧೧. ಅವರು ಮೊದಲು ಅಲ್ಲಿ ಇರುತ್ತಿದ್ದರು. ೧೨. ಅವನು ನಿನ್ನ ಉಂಗುರವನ್ನು ಕದ್ದಿದ್ದಾನೆ. ೧೩. ಅವನ ಟೊಪ್ಪಿಗೆ ಕೆಳಗೆ ಬಿತ್ತು. ೧೪. ಅವನು ತನ್ನ ಪಾಟಿ[1] ಒಡೆಕೊಂಡಿದ್ದಾನೆ. ೧೫. ನಿನ್ನನ್ನು ಯಾರು ಜಬರಿಸಿದರು? ೧೬. ಅವನಿಗೆ ಬಹಳ ಗ್ರಂಥಗಳು ಸಿಕ್ಕಿಯವೆ. ೧೭. ಅವನು ಎಷ್ಟೋ ಗ್ರಂಥಗಳನ್ನು ಶೋಧಿಸಿ ತೆಗೆದಿದ್ದಾನೆ. ೧೮. ನಾವು ಆ ಕೆಲಸವನ್ನು ಆರಂಭಿಸಿದ್ದೇವೆ. ೧೯. ನಿನ್ನ ಯಜಮಾನನು ಆ ಒಡವೆಗಳನ್ನು ಎಲ್ಲಿ ಇಟ್ಟಿದ್ದಾನೆ? ೨೦. ನಾನು ಇದನ್ನು ಅನುಭವಿಸಿದ್ದೇನೆ. ೨೧. ನಮ್ಮ ನೆರೆಮನೆಯ ಹುಡುಗಿಯು ಆ ಹಿಟ್ಟು ಚಲ್ಲಿದಳು. ೨೨. ಈ ಎಣ್ಣೆ ಯಾರು ಚಲ್ಲಿದರು? ೨೩. ನಾವು ನಿಮ್ಮನ್ನು ಕ್ಷಮಿಸಿದ್ದೇವೆ. ೨೪. ನಾನು ಅವನಿಗೆ ಹೀಗೆ ಹೇಳಿದ್ದೇನೆ. ೨೫. ಅವನು ನಿನಗೆ ಏನು ಕೊಟ್ಟಿದ್ದಾನೆ? ೨೬. ಈ ಸುದ್ದಿಯನ್ನು ನಿನಗೆ ಯಾರು ಹೇಳಿದರು? ೨೭. ನೀನು ಅವನ ಮೊದಲಿನ ಅಪರಾಧಗಳನ್ನು ಮರೆತುಬಿಟ್ಟಿದ್ದೀ. ೨೮. ಆ ಹುಡುಗನು ತನ್ನ ಬೆರಳುಗಳನ್ನು ಸುಟ್ಟುಕೊಂಡಿದ್ದಾನೆ. ೨೯. ಅವನು ತನ್ನ ಆಸ್ತಿಯನ್ನೆಲ್ಲ ಹಾಳು ಮಾಡಿಬಿಟ್ಟನು. ೩೦. ನಿನ್ನ ಕಿರೀ ಮಗನು ನನ್ನ ಹೊಸ ಅಂಗಿಯನ್ನು ಹರಿದಿದ್ದಾನೆ. ೩೧. ಆ ಪರಕೀಯ ಮನುಷ್ಯನು ಕೆಲವು ಪಕ್ಷಿಗಳನ್ನು ಹಿಡಿದಿದ್ದಾನೆ. ೩೨. ನಾನು ನಿನಗೆ ಈ ಮಾತು ಮುಂಚೆ ಹೇಳಿದ್ದೇನೆ. ೩೩. ನೀನು ಬಹಳ ಹಣ ಸಂಪಾದಿಸಿದ್ದೀ. ೩೪. ಅವರು ಆ ಅರಸನನ್ನು ಸೆರೆಯಲ್ಲಿಟ್ಟಿದ್ದಾರೆ. ೩೫. ಆ ವರ್ತಕನು ನನಗೆ ಬಹಳ ಸಹಾಯಮಾಡಿದ್ದಾನೆ. ೩೬. ಅವನಿಗೆ ಪಶ್ಚಾತ್ತಾಪವಾಗಲಿಲ್ಲ. ೩೭. ನಾನು ಅವನ ಗುರುತು ಹಿಡಿಯಲಿಲ್ಲ. ೩೮. ಒಂದು[2] ಕೋಳಿಗೆ ಒಂದು ರತ್ನವು ಸಿಕ್ಕಿತು. ೩೯. ಅವರು ಇಷ್ಟು ಧೈರ್ಯವನ್ನು ಮುಂಚೆ ಎಂದೂ ತೋರಿಸಲಿಲ್ಲ. ೪೦. ರಾವಣನು ಲಂಕಾಪಟ್ಟಣದ ಅರಸನಿದ್ದನು. ೪೧. ನಾವು ಅವನಿಗೆ ಬಹಳ ಉತ್ತೇಜನ ಕೊಟ್ಟೆವು. ೪೨. ನಾವು ಅವನಿಗೆ ಮನಗಾಣಿಸಿ ಕೊಟ್ಟಿದ್ದ[illegible]ರೆ. ೪೩. ಸೇನಾಪತಿಯು ನನ್ನನ್ನು ಕರೆದಿದ್ದಾನೆ. ೪೪. ಒಕ್ಕಲಿಗರು ಹೊಲ[illegible]ಳನ್ನು ಹರಗಿದ್ದಾರೆ. ೪೫. ಆ ಉದ್ಯೋಗಸ್ಥನು ನಿನ್ನ ಶಿಫಾರಸು ಮಾಡಿದ್ದಾನೆ. ೪೬. ಆ ಮುಂಡಾಸವು ನನಗೆ ಬಹಳ ತುಟ್ಟಿ ಬಿತ್ತು[3]. ೪೭. ಈಗ ಅದಕ್ಕೆ ಎ[illegible] ಬೆಲೆ ಬಂದೀತು? ೪೮. ಅವನ ನಡತೆ ನನ್ನ ಮನಸ್ಸಿಗೆ ಬರುವದಿಲ್ಲ. ೪೯. [illegible]ನು ನಿನಗೆ ಏನು ಹೇಳಿದೆನು?

---

[1] Slate. [2] ಒಂದು, ಒಂದಾನೊಂದು = a cert[illegible]

[3] I bought the turban very dear.

೫೦. ಕೆಲ ಜನರಿಗೆ ತಮ್ಮ ದೇಶಬಾಂಧವರಿಗಿಂತ ಪರದೇಶದವರು ಹೆಚ್ಚು ಸೇರುತ್ತಾರೆ.

೨೧ನೇ ಪಾಠ.

ಉಪಸರ್ಗಾವ್ಯಯಗಳು.

Prepositions.

೧೧೦. ಇಂಗ್ಲಿಷದಲ್ಲಿ ಉಪಸರ್ಗಾವ್ಯಯಗಳು ನಾಮಪದದ ಇಲ್ಲವೆ ಸರ್ವನಾಮದ ಹಿಂದೆ ಬರುತ್ತವೆ; ಮತ್ತು ಆ ನಾಮಪದವಾಗಲಿ ಸರ್ವನಾಮವಾಗಲಿ Objective case[1] ಆಗುತ್ತದೆ.

೧೧೧. From ಇಂದ ಎಂಬ ಉಪಸರ್ಗಾವ್ಯಯದಿಂದ ಒಮ್ಮೊಮ್ಮೆ ಪಂಚಮಿ, ಕ್ವಚಿತವಾಗಿ ಚತುರ್ಥೀವಿಭಕ್ತಿಯ ಅರ್ಥವಾಗುತ್ತದೆ. ಉದಾ:

He has come *from* Benares ಅವನು ಕಾಶಿಯಿಂದ ಬಂದಿದ್ದಾನೆ.

Dharwar is forty-eight miles *from* Belgaum ಧಾರವಾಡಕ್ಕೂ ಬೆಳಗಾವಿಗೂ ನಾಲ್ವತ್ತೆಂಟು ಮೈಲು.

೧೧೨. ಇಂಥಾದೊಂದು ನಿಯಮಿತವಾದ ಭೂತಕಾಲದಿಂದ ಈಗಿನವರೆಗೆ ಎಂಬ ಅರ್ಥವಿರಲಾಗಿ, ಇಂದ ಎಂಬದಕ್ಕೆ since ಎಂಬ ಉಪಸರ್ಗಾವ್ಯಯವನ್ನು ಪ್ರಯೋಗಿಸಬೇಕು. ಉದಾ:

I have not seen my brother *sinc*[illegible]*January* ಜನವರಿಯಿಂದ ನಾನು ನನ್ನ ತಮ್ಮನನ್ನು ಕಂಡಿಲ್ಲ.

---

[1] Accusative ದ್ವಿತೀಯಾ, Inst[illegible]mental ತೃತೀಯಾ, Dative ಚತುರ್ಥಿ, Ablative ಪಂಚಮಿ, Genitive (with of) ಷ[illegible], Locative ಸಪ್ತಮಿ, ಈ ವಿಭಕ್ತಿಗಳಿಗೆಲ್ಲ ಇಂಗ್ಲಿಷದಲ್ಲಿ Objective case ಅನ್ನಬಹುದು; [illegible]ಾಕಂದರೆ, ಇವುಗಳ ಹಿಂದೆ ಉಪಸರ್ಗಾವ್ಯಯಗಳು ಬರುತ್ತವೆ. ಇಂಗ್ಲಿಷ ಭಾಷೆಯಲ್ಲಿ ಈ ವಿಭ[illegible]ಳಿಗೆ ಪ್ರತ್ಯಯಗಳಿಲ್ಲದ್ದರಿಂದ ಆ ಪ್ರತ್ಯಯಗಳಿಗೆ ಬದಲಾಗಿ ಶಬ್ದಗಳ ಹಿಂದೆ ಉಪಸರ್ಗಾವ್ಯಯಗ[illegible] ಪ್ರಯೋಗಿಸುತ್ತಾರೆ.

ಆದರೆ ಬೇರೆ ಕಡೆಯಲ್ಲಿ ಕಾಲವಾಚಕನಾಮಪದಗಳ ಹಿಂದೆ from[1] ಎಂಬ ಅವ್ಯಯವನ್ನು ಪ್ರಯೋಗಿಸಬಹುದು. ಉದಾ:

From that time they loved each other ಅಂದಿನಿಂದ ಅವರು ಒಬ್ಬರ ಮೇಲೊಬ್ಬರು ಪ್ರೀತಿ ಮಾಡಹತ್ತಿದರು.

೧೧೩. In, into ಎಂಬ ಉಪಸರ್ಗಾವ್ಯಯಗಳಿಂದ ಸಪ್ತಮೀವಿಭಕ್ತಿಯ ಅರ್ಥವಾಗುತ್ತದೆ. ಹೊರಗಿಂದ ಒಳಗೆ[2] ಎಂದು ಗತಿ ತೋರಿಸುವದಾದರೆ into ಎಂಬದನ್ನೂ, ಒಂದೇ ಸ್ಥಳದಲ್ಲಿ ಇರುವಿಕೆ ಇಲ್ಲವೆ ಅದರಲ್ಲಿಯೇ ಸುಳಿದಾಟವಿದ್ದರೆ in ಎಂಬದನ್ನೂ ಪ್ರಯೋಗಿಸಬೇಕು. ಉದಾ:

He plunged his hand *into* the water ಅವನು ನೀರೊಳಗೆ ಕೈ ಎದ್ದಿದನು.
Many animals live *in* water ಅನೇಕ ಪ್ರಾಣಿಗಳು ನೀರೊಳಗಿರುತ್ತವೆ.
I went *into* the room ನಾನು ಕೋಣೆಯೊಳಗೆ ಹೋದೆನು.
I was *in* the room ನಾನು ಕೋಣೆಯಲ್ಲಿದ್ದೆನು.
I went *into* the garden ನಾನು ತೋಟದೊಳಗೆ ಹೋದೆನು.
He is walking *in* the garden ಅವನು ತೋಟದೊಳಗೆ ತಿರುಗಾಡುತ್ತಲಿದ್ದಾನೆ.

---

1) 'ಭೂತಕಾಲದಲ್ಲಿ ಆರಂಭಿಸಿದ ಯಾವದಾದರೊಂದು ಕ್ರಿಯೆಯು ವರ್ತಮಾನಕಾಲದಲ್ಲಿ ಮುಗಿದದೆ' ಎಂಬ ಅರ್ಥದಿಂದ fromವನ್ನಾಗಲಿ sinceವನ್ನಾಗಲಿ ಪ್ರಯೋಗಿಸಬಹುದು.

ಉದಾ: I have done this work *since* January;
ಅಥವಾ: I have done this work *from* January *till* now
ನಾನು ಈ ಕೆಲಸವನ್ನು ಜನವರಿಯಿಂದ ಈ ವರೆಗೆ ಮಾಡಿದ್ದೇನೆ. (ಮೊದಲನೇ ವಾಕ್ಯದಲ್ಲಿ ಕ್ರಿಯೆಯು ಮುಗಿದ ವೇಳೆಯನ್ನು ಹೇಳುವ [illegible] ಇಲ್ಲ.) ಆದರೆ ಆ ಕ್ರಿಯೆಯು ವರ್ತಮಾನಕಾಲವಲ್ಲದೆ ಬೇರೆ ಯಾವ ಕಾಲದಲ್ಲಾದರೂ ಮುಗಿಯುತ್ತಿ[illegible]ರೆ, from ಎಂಬದನ್ನೇ ಪ್ರಯೋಗಿಸಬೇಕು.

ಉದಾ: I did this work *from* [illegible]anuary *till* March.
ನಾನು ಈ ಕೆಲಸವನ್ನು ಜನವರಿಯಿಂದ ಮಾ[illegible] ವರೆಗೆ ಮಾಡಿದೆನು. ಇಲ್ಲಿ since ಎಂಬ ಅವ್ಯಯವನ್ನು ಪ್ರಯೋಗಿಸಲಾಗದು.

2) ಒಳಗಿಂದ ಹೊರಗೆ ಎಂಬ ಅರ್ಥವಿರಲಾಗಿ out of [illegible]ಬ ಸಂಯುಕ್ತಾವ್ಯಯವನ್ನು ಪ್ರಯೋಗಿಸಬೇಕು.

ಉದಾ: He drew his hand *out of* the wa[illegible] ಅವನು ತನ್ನ ಕೈ ನೀರೊಳಗಿಂದ ಹೊರಗೆ ತೆಗೆದನು.

೧೧೪. ಶಬ್ದಸಂಗ್ರಹ ೨೦.

A knot	ಗಂಟು.	U'su-al	ವಾಡಿಕೆಯ, ದಿನದ.
A no'ble-man	ಸರದಾರ, ಘನವಂತ.	To undo'	ಬಿಚ್ಚು.
A na'tion	ಜನಾಂಗ, ರಾಷ್ಟ್ರ.	To bruise	ಜಜ್ಜು.
A fruit'-gar-den, An or'chard	ಹಣ್ಣುದೋಟ.	To man'age	೧. ನಡಿಸು; ೨. ಸಂಬಾಳಿಸು; ೩. ಆಟೋಪದಲ್ಲಿಟ್ಟುಕೊ.
A com'pound	೧. ಪಟಾರ; ೨. ಮಿಶ್ರಣ.	To spoil	ಕೆಡಿಸು.
A noise	ಸದ್ದುಲ, ಸಪ್ಪಳ.	Rea'di-ly	೧. ಸಂತೋಷದಿಂದ; ೨. ಶೀಘ್ರವಾಗಿ.
The cha'rac-ter	೧. ಶೀಲ; ೨. ಕೀರ್ತಿ, ಹೆಸರು; ೩. ಸ್ವಭಾವ, ಲಕ್ಷಣ; ೪. ಅಕ್ಷರ.	To re-ceive'	೧. ತಕ್ಕೊಳ್ಳು, ಹೊಂದು; ೨. ಅಂಗೀಕರಿಸು.
A pas'sion	೧. ಮನೋವಿಕಾರ; ೨. ಮೋಹ; ೩. ಸಿಟ್ಟು.	Dread'ful-ly	ಭಯಂಕರವಾಗಿ.
A li'ar	ಸುಳ್ಳುಗಾರ.	No'bly	ದೊಡ್ಡ ಮನಸ್ಸಿನಿಂದ, ಔದಾರ್ಯದಿಂದ.
So-ci'ety	ಸಂಗತಿ, ಸಹವಾಸ.	Pru'dent-ly	ವಿವೇಕದಿಂದ.
Dirt	ಹೊಲಸು.	We[illegible]	ತೊಯ್ದು, ಒದ್ದೆ.
A toy	ಆಟದ ಒಡವೆ, ಆಟಿಗೆ.	Saf'fron	ಕೇಸರಿ.
Haste	ತ್ವರೆ.	Ev'er-y	ಪ್ರತಿ ಒಬ್ಬ, – ಒಂದು.
A fo'rest	ಅರಣ್ಯ, ಅಡ[illegible].	Ear'ly ವಿ.	ಮುಂಚಿತ ಬಂದ, ಬೇಗ –.
Va'ni-ty	[illegible] ಸುರಭಿಮಾನ.	Ear'ly ಕ್ರಿ. ವಿ.	ಮುಂ[illegible]ತವಾಗಿ, ಬೇಗನೇ.

Fri-vol'i-ty	ಲಘುತ್ವ, ತುಚ್ಛತೆ.	Late[1] ವಿ.	ತಕ್ಕ ಸಮಯ ಮೀರಿ ಬಂದ, ತಡವಾದ.
Wick'ed-ness	ದುಷ್ಟತನ, ದುರುಳತನ.	Late ಕ್ರಿ. ವಿ.	ತಡವಾಗಿ, ಹೊತ್ತುಮಾಡಿ.
An un-der-ta'king	ಕೈಕೊಂಡ ಕೆಲಸ.	Of late, Late'ly	ಇತ್ತಲಾಗಿ, ಇತ್ತಿತ್ತ.
Pe-cu'li-ar	೧. ಸ್ವಂತ; ೨. ಒಂದು ತರದ, ಅಸಾಧಾರಣ, ವಿಶೇಷ.	ಉರಿಮೋರೆಯ, ದುರ್ಮುಖವುಳ್ಳ	sul'len, gloom'y, mo-rose' (ಮೊರೋಸ್).
ಒಳಗೆ ಹೋಗು	to en'ter.	ಒಣಗಿದ, ಬತ್ತಿದ	dry.
ಕಮಲ	a lo'tus.	ಕಾಣು	to seem, to ap-pear'.
ಯಾಲಕ್ಕಿ	a car'da-mom.		
ಲವಂಗ	a clove.	ಇಳಿ, ಎರಗು	to a-light', to de-scend'.
ಜಾಜಿಕಾಯಿ	a nut'meg.	ರುಚಿಕರವಾದ	sa'vour-y.

ಭಾಷಾಂತರಪಾಠ ೨೦.

೧೧೫. 1. We always give advice more readily than money. 2. Every nation has its peculiar character. 3. Have we treated our enemies nobly? 4. We see *in* men of all countries

---

[1] Late ಎಂಬುದು ವಿಶೇಷಣವಿದ್ದಾಗ [illegible]ದರ ತಾರತಮ್ಯಭಾವದರ್ಶಕರೂಪಗಳು later, latter ಎಂತಲೂ, latest, last ಎಂತಲೂ ಆಗುತ್ತವೆ. Later, latest ಎಂಬವು ಕಾಲವಾಚಕಗಳೂ, latter, last ಎಂಬವು ಕ್ರಮವಾಚಕಗಳೂ ಅವೆ. Late [illegible]ಬುದು ಕ್ರಿಯಾವಿಶೇಷಣವಿದ್ದಾಗ ಅದರಿಂದ later, latest ಎಂಬ ರೂಪಗಳಾಗುತ್ತವೆ. Latter, last [illegible]ಬವು former, first ಎಂಬವುಗಳಿಗೆ ವಿರೋಧವಾದವುಗಳು. ಉದಾ: The late rains have done good = ಮೊನ್ನಿನ ಮಳೆಯಿಂದ ಹಿತವಾಗಿದೆ. This is a later edition = ಇದು ಇತ್ತಿತ್ತ ಹೊರಟ ಆವೃತ್ತಿಯು. The latest discovery in science = ಶಾಸ್ತ್ರವಿಷಯದಲ್ಲಿ ಮೊನ್ನೆಮೊನ್ನೆ ಮಾಡಿದ ಶೋಧವು. The latter alternative = ಎರಡನೇ ಉಪಾಯ. The last of the Romans = ರೋಮನ್ ಜನರೊಳಗೆ ಕಟ್ಟಕಡೆಯವನು. I came late = ನಾನು ತಡಮಾಡಿ ಬಂದೆನು. He came later = ಅ[illegible]ನು ಹೆಚ್ಚು ತಡಮಾಡಿ ಬಂದನು. They came latest [illegible] ಅವರು ಎಲ್ಲರಿಗಿಂತ ಹೆಚ್ಚು ತಡಮಾ[illegible] ಬಂದ[illegible]

the same passions and the same vices. 5. Bad company will spoil a man's character. 6. Vanity and frivolity are not far from wickedness. 7. No one felt happy *in* her society. 8. We have many fruit-trees *in* our orchard. 9. Have you any oranges *in* your garden? 10. I saw some beautiful birds *in* the garden. 11. That man was formerly a servant *in* some nobleman's family. 12. Is he so still? 13. I received a letter *from* my father yesterday. 14. Will you undo that knot? 15. How did you bruise your fingers so dreadfully? 16. Did you ever see such a liar *in* all your life? 17. The maid went *into* the kitchen. 18. Who is making the noise *in* the kitchen? 19. You generally come very late; to-day you have come earlier than usual. 20. He managed everything most prudently. 21. The children went *into* the forest. 22. He acts prudently *in* all his undertakings. 23. Let us go *into* the house. 24. Do not bring any dirt *into* the room. 25. Birds fly *in* the air. 26. He threw the toy *into* the well. 27. Will you put the fruit *into* this basket? 28. You are late. 29. This man does his work well. 30. Do help me. 31. Do make haste. 32. I do love her. 33. What[1] a wonderful thing is the steam-engine! 34. What is steam? 35. A little boy took a young bird *from* its nest.

೧. ಅವನು ನನ್ನ ಕಡೆಯಿಂದ ಬಹಳ ರೂಪಾಯಿ ಕೈಗಡಾ ಇಸುಕೊಂಡನು. ೨. ನಾನು ನಿನ್ನಿನಾರಭ್ಯ ಅವನಿಗೆ ಈ ಮಾತು ಕೇಳುತ್ತಿದ್ದೇನೆ. ೩. ಅಂದಿನಿಂದ ಅವನು ಅಲ್ಲಿಗೆ ತಿರಿಗಿ ಹೋಗಲೇ ಇಲ್ಲ. ೪. ಆ ಕೆರೆಯಲ್ಲಿ ನಾನು ಬಹಳ ಕಮಲಗಳನ್ನು ಕಂಡೆನು. ೫. ಹುಡುಗನು ಹೊಳೆಯೊಳಗೆ ಕಲ್ಲು ಒಗೆದನು.

[1] What ಎಂಬ ಶಬ್ದವು ಆಶ್ಚರ್ಯಬೋಧಕವಿದ್ದಾಗ a ಎಂಬ ಉಪಪದವು ಅದರ ಮುಂದೆ ಬರುತ್ತದೆ.

೬. ನಾನು ನಾಳೆನಿಂದ ನಿನಗೆ ಕಲಿಸಲಿಕ್ಕಿಲ್ಲ. ೭. ಈ ಚಹದೊಳಗೆ ಮತ್ತಿಷ್ಟು ಸಕ್ಕರೆ ಹಾಕು. ೮. ಒಬ್ಬ ಹೆಂಗಸು ಬಾವಿಯೊಳಗೆ ಬಿದ್ದಳು. ೯. ಬಂದರದಲ್ಲಿ ಬಹಳ ಹಡಗಗಳು ಬಂದವೆ. ೧೦. ಹುಡುಗರು ಕುದುರೆಯನ್ನು ಮನೆಯೊಳಗಿಂದ ಹೊರಗೆ ತಂದರು. ೧೧. ಯಜಮಾನನು ಆ ದುಷ್ಟ ಸೇವಕನನ್ನು ಮನೆಯ ಹೊರಗೆ ಹಾಕಿದನು. ೧೨. ಅವನು ನನ್ನ ಚಾಕು ಕಿಡಿಕಿಯೊಳಗಿಂದ ಕೆಳಗೆ ಚಲ್ಲಿದನು. ೧೩. ಸಿಪಾಯರು ಅರಮನೆಯೊಳಗೆ ಹೋದರು. ೧೪. ಅಲ್ಲಿ ಅವರಿಗೆ ಏನು ಸಿಕ್ಕಿತು? ೧೫. ನಮ್ಮ ಅತಿಥಿಗಳು ಪುಣೆಯಿಂದ ಬಂದಿದ್ದಾರೆ. ೧೬. ನೀನು ಚೀಲದೊಳಗೆ ಏನು ಇಟ್ಟೆ? ೧೭. ಈ ಮನೆಯೊಳಗೆ ಎಷ್ಟು ಜನರಿರುತ್ತಾರೆ? ೧೮. ಆ ಮನೆಗೆ ಒಂದು ಬಾವಿಯುಂಟು. ೧೯. ನಾವು ಬಂಡಿಯೊಳಗೆ ಕೂತೆವು. ೨೦. ಬೇಸಿಗೆಯಲ್ಲಿ ನೆಲವು ಒಣಗಿರುತ್ತದೆ. ೨೧. ಅಂದಿನಿಂದ ಅವನು ದುರ್ಮುಖವುಳ್ಳವನಾಗಿದ್ದಾನೆ. ೨೨. ಅವನ ಬಾಯಿಂದ ಕೆಟ್ಟ ಶಬ್ದಗಳು ಎಂದೂ ಹೊರಡುತ್ತಿದ್ದಿಲ್ಲ[1]. ೨೩. ಈ ಹುಡುಗನು ಸಾಲೆಯಿಂದ ಬಂದಿದ್ದಾನೆ. ೨೪. ಯಾಲಕ್ಕಿಕಾಯಿಗಳು ರುಚಿಕರವಾಗಿರುತ್ತವೆ. ೨೫. ಲವಂಗಗಳು ಬಹಳ ಉಪಯೋಗವುಳ್ಳವು. ೨೬. ಜಾಜಿಕಾಯಿಯ ಗಿಡವು ಬಹು ಚಂದ ಕಾಣುತ್ತದೆ. ೨೭. ಒಬ್ಬ ಗೃಹಸ್ಥನೂ ಅವನ ಹೆಂಡತಿಯೂ ಬಂಡಿಯೊಳಗಿಂದ ಕೆಳಗೆ ಇಳಿದರು. ೨೮. ಇದು ದಿನದ ಹೊತ್ತಲ್ಲ. ೨೯. ನೀನು ಇಷ್ಟು ತಡಮಾಡಿ ಯಾಕೆ ಬಂದೆ? ೩೦. ರಾಮನು ನನಗಿಂತ ತಡಮಾಡಿ ಬಂದನು.

[1] Never came *out of*, never escaped *from*.

M. Subbamma.
II Form.

೨೧ನೇ ಪಾಠ.

ಉಪಸರ್ಗಾವ್ಯಯಗಳು (ಮುಂದೆ ಸಾಗಿದ್ದು).

Prepositions *(continued).*

೧೧೬. To ಮತ್ತು for ಎಂಬ ಅವ್ಯಯಗಳಿಂದ ಇಂಗ್ಲಿಷದಲ್ಲಿ ಚತುರ್ಥೀ ವಿಭಕ್ತಿಯಾಗುತ್ತದೆಂದು ಹಿಂದೆ ಹೇಳಿಯದೆ. ಇನ್ನು ಅವುಗಳ ಬೇರೆ ಕೆಲವು ಅರ್ಥಗಳು ಮುಂದೆ ಬರೆದವೆ.

ಒಮ್ಮೊಮ್ಮೆ to ಎಂಬ ಅವ್ಯಯದ ಅರ್ಥ ಹತ್ತರ, ಕಡೆಗೆ ಎಂತ ಆಗುತ್ತದೆ.
ಉದಾ: He came to me ಅವನು ನನ್ನ ಕಡೆಗೆ ಬಂದನು.

ಒಮ್ಮೊಮ್ಮೆ to ಎಂಬದರ ಅರ್ಥವು ತನಕ ಎಂತ ಆಗುತ್ತದೆ. ಉದಾ:
Some children cannot count *to* ten ಕೆಲವು ಹುಡುಗರಿಗೆ ಹತ್ತರ ತನಕ ಎಣಿಸಲಿಕ್ಕೆ ಬರುವದಿಲ್ಲ.

ಒಮ್ಮೊಮ್ಮೆ to ಎಂಬದು ಪರಿಣಾಮವನ್ನು ತೋರಿಸುತ್ತದೆ. ಉದಾ:
He made war *to* his cost ಅವನು ಯುದ್ಧಮಾಡಿ ಕೇಡುಪಟ್ಟನು.

ಒಮ್ಮೊಮ್ಮೆ for ಎಂಬದರ ಭಾಷಾಂತರವು ಎಂದು, ಬದಲಾಗಿ ಎಂತ ಆಗುತ್ತದೆ. ಉದಾ:
I took him for Ráma ಅವನು ರಾಮನೆಂದು ತಿಳಿದೆನು.

ಇಷ್ಟು ಹೊತ್ತಿನ ವರೆಗೆ ಎಂಬ ಅರ್ಥವಿರಲಾಗಿ, forದ ಅರ್ಥವನ್ನು ವರೆಗೆ ಎಂತ ಮಾಡಬೇಕು, ಇಲ್ಲವೆ ಅದನ್ನು ಬಿಟ್ಟುಬಿಡಬಹುದು. ಉದಾ:
He travelled *for* three days ಅವನು ಮೂರು ದಿವಸಗಳ ವರೆಗೆ (ಅಥವಾ, ಮೂರು ದಿವಸ) ಹಾದೀ ನಡೆದನು.

೧೧೭. At ಎಂಬ ಅವ್ಯಯವು ಸ್ಥಲವಾಚಕನಾಮಪದದ ಹಿಂದೆ ಇರಲಾಗಿ, ಅದರ ಅರ್ಥವು ಸಪ್ತಮೀವಿಭಕ್ತಿಯಂತೆ, ಇಲ್ಲವೆ, ಹತ್ತರ ಎಂದು ಆಗುತ್ತದೆ.

ಉದಾ: In the summer he lives *at* Mahábaléshwar ಬೇಸಿಗೆಯಲ್ಲಿ ಅವನು ಮಹಾಬಳೇಶ್ವರದಲ್ಲಿರುತ್ತಾನೆ.

I saw him *at* the gate ನಾನು ಅವನನ್ನು ಬಾಗಿಲ ಹತ್ತರ ಕಂಡೆನು.

☞ At ಎಂಬ ಅವ್ಯಯವು ಪ್ರಾಂತದ ಅಥವಾ ದೇಶದ ಹೆಸರಿನ ಹಿಂದೆ ಬರುವದಿಲ್ಲ. ಇಂಥಲ್ಲಿ ಎಂಬ ಅರ್ಥವಿರಲಾಗಿ ದೊಡ್ಡ ಪಟ್ಟಣದ ಹೆಸರಿನ ಹಿಂದೆ in ಎಂಬ ಅವ್ಯಯವನ್ನೂ, ಸಣ್ಣ ಊರ ಹೆಸರಿನ ಹಿಂದೆ at ಎಂಬದನ್ನೂ ಪ್ರಯೋಗಿಸಬೇಕು. ಉದಾ:

He is *in* London, but his brother is *at* Dover ಅವನು ಲಂಡನ್ ಪಟ್ಟಣದಲ್ಲಿದ್ದಾನೆ, ಆದರೆ ಅವನ ತಮ್ಮನು ಡೋವರದಲ್ಲಿದ್ದಾನೆ.

To land ಹಡಗದಿಂದ ಇಳಿ ಎಂಬ ಕ್ರಿಯಾಪದದ ಮುಂದೆ ಬಹುತರವಾಗಿ at ಎಂಬ ಅವ್ಯಯವು ಬರುತ್ತದೆ. ಉದಾ:

He landed *at* Karwar ಅವನು ಕಾರವಾರದಲ್ಲಿ ಹಡಗದಿಂದಿಳಿದನು.

ಇಂಗ್ಲಿಷದಲ್ಲಿ ಕೆಲವು ಕ್ರಿಯಾಪದಗಳ ಮುಂದೆ at, in, on, over, out, up ಮುಂತಾದ ಉಪಸರ್ಗಾವ್ಯಯಗಳು ಬರಲು, ಆ ಕ್ರಿಯಾಪದದ ಅರ್ಥವು ತೀರ ಭಿನ್ನವಾಗುತ್ತದೆ. ಉದಾ:

Get ಸಂಪಾದಿಸು.	Get *up* ಏಳು.	Get *at* ಮುಟ್ಟು.	Get *on* ಸಾಗು.
Bring ತಾ.	Bring *up* ಸಾಕಿ ಸಲಹು, ವಿದ್ಯಾಬುದ್ಧಿ ಕಲಿಸು.	Bring *about* ಸಾಧಿಸು, ಕೈಗೂಡುವಂತೆ ಮಾಡು.	Bring *forth* ಹಡಿ, ಹೆರು.
Make ಮಾಡು.	Make *out* ತಿಳುಕೊಳ್ಳು, ಅರ್ಥಮಾಡು.	Ma[illegible]e *over* ಒಪ್ಪಿಸು.	Make *up* ಪೂರೈಸು, ಭರ್ತಿಮಾಡು.
Fall ಬೀಳು.	Fall *under* ಒಳಗೆ ಬರು.	Fall *upon* ಅಡರು, ಮೇಲೆ ಸಾಗಿಹೋಗು.	Fall *out with* ಜಗಳವಾಡು.
Put ಹಾಕು, ಇಡು.	Put *out* ನೊಂದಿಸು.	Put *on* ಧರಿ[illegible].	Put *up* ೧. ಇಳುಕೊಳ್ಳು; ೨. ಹುರಿದುಂಬಿಸು.

೧೧೮. ಸಪ್ತಮಿಯ ಅರ್ಥವಿರಲಾಗಿ ವೇಳೆಯ ಬೇರೆ ಬೇರೆ ವಿಭಾಗಗಳಲ್ಲಿ ದಿವಸದ ಹಿಂದೆ on, ದಿವಸಕ್ಕಿಂತ ದೊಡ್ಡ ವಿಭಾಗದ ಹಿಂದೆ in, ಸಣ್ಣ ವಿಭಾಗದ ಹಿಂದೆ at ಎಂಬ ಅವ್ಯಯಗಳು ಬರುತ್ತವೆ. Morning ಮುಂಜಾನೆ, evening ಸಂಜೆ, afternoon ಇಳಿ-ಹೊತ್ತು, ಎಂಬವು ದಿವಸಕ್ಕಿಂತ ಸಣ್ಣ ವಿಭಾಗಗಳಿದ್ದಾಗ್ಯೂ ಅವುಗಳ ಹಿಂದೆ in ಬರುತ್ತದೆ. ಉದಾ:

On Monday	ಸೋಮವಾರ ದಿವಸ.
In the month of March	ಮಾರ್ಚ ತಿಂಗಳಲ್ಲಿ.
In A. D. 1881	ಇ. ಸ. ೧೮೮೧ರಲ್ಲಿ.
At seven o'clock	ಏಳು ಗಂಟೆಗೆ.
At noon	ಮಧ್ಯಾಹ್ನಕ್ಕೆ.
At dawn ಅಥವಾ day-break	ಬೆಳಗು ಮುಂಜಾನೆ, ನಸುಕಲೆ.
In the morning	ಬೆಳಗ್ಗೆ.
In the afternoon	ಇಳಿಹೊತ್ತಿಗೆ, ಮಧ್ಯಾಹ್ನದ ಮೇಲೆ.

☞ ಆದರೆ ಕಾಲವಾಚಕನಾಮಪದದ ಹಿಂದೆ ಒಂದು ವಿಶೇಷಣವಾಗಲಿ ಸರ್ವನಾಮವಾಗಲಿ ಇದ್ದು, ಅದರಿಂದ ವೇಳೆಯ ಪರಿಮಾಣವು, ಅಂದರೆ ಯಾವಾಗ ಅಥವಾ ಎಷ್ಟು ಹೊತ್ತಿನ ವರೆಗೆ ಎಂಬದು ಸ್ಪಷ್ಟವಾಗಿ ತಿಳಿಯುತ್ತಿದ್ದರೆ, ಅವ್ಯಯವು ಬಹುತರ ಬೇಕಾಗುವದಿಲ್ಲ. ಆಗ ಕಾಲವಾಚಕನಾಮಪದವನ್ನು ದ್ವಿತೀಯಾವಿಭಕ್ತಿಯಲ್ಲಿಟ್ಟರೆ ಆಯಿತು. ಇಂಥ ನಾಮಪದಕ್ಕೆ ಇಂಗ್ಲಿಷ ವ್ಯಾಕರಣದಲ್ಲಿ Accusative of time ಕಾಲಾರ್ಥಕ ದ್ವಿತೀಯಾ ಅನ್ನುತ್ತಾರೆ. ಉದಾ:

I will see you *next* Monday ನಾನು ಬರುವ ಸೋಮವಾರ ದಿವಸ ನಿಮಗೆ ಭೆಟ್ಟಿಯಾಗುವೆನು.

We had no leave *last* year on this day ಹೋದ ವರುಷ ಈವೊತ್ತು ನಮಗೆ ರಜಾ ಇದ್ದಿಲ್ಲ.

He lived here (for) *two* years ಅವನು ಇಲ್ಲಿ ಎರಡು ವರುಷ ಇದ್ದನು.

He will pass the examination this year ಈ ವರುಷ ಅವನ ಪರೀಕ್ಷೆ ಇಳಿಯುವದು.